ಕರ್ನಾಟಕ ಸರ್ಕಾರ

ತಿಳಿ ಕನ್ನಡ

ದ್ವಿತೀಯಭಾಷಾ ಕನ್ನಡ ಪಠ್ಯಪುಸ್ತಕ

೬

ಆರನೆಯ ತರಗತಿ

ಮೊದಲನೆಯ ಹಾಗೂ ಎರಡನೆಯ ಸೆಮಿಸ್ಟರ್

೨೦೧೫

@ KTBS
NOT TO BE REPUBLISHED

ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
೧೦೦ ಅಡಿ ವರ್ತುಲ ರಸ್ತೆ, ಬನಶಂಕರಿ ಮೂರನೆಯ ಹಂತ,
ಬೆಂಗಳೂರು - ೫೬೦೦೮೫

ಪಠ್ಯಪುಸ್ತಕ ರಚನಾ ಸಮಿತಿ

ಅಧ್ಯಕ್ಷರು :

ಶ್ರೀ ರಾಮಣ್ಣಹವಳೆ, ನಿವೃತ್ತ ಉಪನ್ಯಾಸಕರು, ನೀಲಕಂಠೇಶ್ವರ ನಗರ ರಾಯಚೂರು.

ಸದಸ್ಯರು :

ಡಾ.ಎಸ್. ವಿಜಯಮಾಲಾ, ಸಹಶಿಕ್ಷಕರು, ಎಂ.ಎಸ್. ರಾಮಯ್ಯ ಪ್ರೌಢಶಾಲೆ ಮತ್ತಿಕೆರೆ. ಬೆಂಗಳೂರು-೫೪,

ಶ್ರೀ ಎಸ್.ಎ ವೆಂಕಟಪ್ಪ ,ಸ.ಶಿ. ಬಾಲಕಿಯರ ಸರ್ಕಾರಿ ಪದವಿ ಪೂರ್ವಕಾಲೇಜು ಮಾಲೂರು, ಕೋಲಾರ ಜಿಲ್ಲೆ

ಶ್ರೀ ಲಕ್ಷ್ಮಣ ಲೋಕರೆ, ಸಹ ಶಿಕ್ಷಕರು, ಬಾಲಕಿಯರ ಸರ್ಕಾರಿ ಪ್ರೌಢಶಾಲೆ ಸ್ಟೇಶನ್ ರಸ್ತೆ, ರಾಯಚೂರು.

ಶ್ರೀ ಹೊನ್ನೇಗೌಡ, ಸಿ.ಆರ್.ಪಿ. ಮಗ್ಗೆ ಆಲೂರು ತಾ, ಹಾಸನ ಜಿಲ್ಲೆ.

ಶ್ರೀ.ಎಚ್. ಎಲ್. ಹಾಲೇಶ, ಕನ್ನಡ ಉಪನ್ಯಾಸಕರು, ಎಸ್.ಬಿ.ಸಿ. ಮಹಿಳಾ ಕಾಲೇಜು, ದಾವಣಗೆರೆ

ಕಲಾವಿದರು :

ಶ್ರೀ ಪಿ.ಎ.ಬಿ. ಈಶ್ವರ, ಚಿತ್ರಕಲಾ ಶಿಕ್ಷಕರು, ಹಮದರ್ದ ಪ್ರೌಢಶಾಲೆ, ರಾಯಚೂರು

ಪರಿಶೀಲಕರು :

ಡಾ. ಕೃಷ್ಣಯ್ಯ, ಪ್ರಾಧ್ಯಾಪಕರು, ಆರ್.ವಿ.ಟೀಚರ್ಸ್ ಕಾಲೇಜು, ೨ನೇ ಬ್ಲಾಕ್, ಜಯನಗರ, ಬೆಂಗಳೂರು-೧೧

ಸಂಪಾದಕ ಮಂಡಳಿ ಸದಸ್ಯರು :

ಪ್ರೊ. ಚಂದ್ರಶೇಖರ ಪಾಟೀಲ್, ಸಾಹಿತಿಗಳು, ಸಂಕ್ರಮಣ ಪ್ರಕಾಶನ, ಎಲಚೇನಹಳ್ಳಿ, ಜೆ.ಪಿ ನಗರ, ಬೆಂಗಳೂರು

ಡಾ.ಕೆ. ಮರುಳಸಿದ್ದಪ್ಪ, ಸಾಹಿತಿಗಳು, ನಂ. ೧೩೭, ೧೨ ನೇ ಕ್ರಾಸ್, ಜೆ.ಪಿ. ನಗರ ೨ನೇ ಹಂತ, ಬೆಂಗಳೂರು

ಪ್ರೊ. ಸಾ.ಶಿ. ಮರುಳಯ್ಯ, ಸಾಹಿತಿಗಳು, 'ರಾಗಿಣಿ', ಹಂಪಿನಗರ, ಬೆಂಗಳೂರು.

ಪ್ರೊ. ಅ.ರಾ.ಮಿತ್ರ, ಸಾಹಿತಿಗಳು, ಕೆ.ಎಚ್. ಬಿ. ಕಾಲೋನಿ, ಯಲಹಂಕ, ಬೆಂಗಳೂರು.

ಡಾ. ವಿಷ್ಣು ಎಂ. ಶಿಂದೆ, ಸಹಾಯಕ ಪ್ರಾಧ್ಯಾಪಕರು, ಶಿಕ್ಷಣವಿಭಾಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾನಿಲಯ, ವಿಜಯಾಪುರ.

ಮುಖ್ಯ ಸಂಯೋಜಕರು :

ಪ್ರೊ. ಜಿ.ಎಸ್. ಮುಡಂಬಡಿತ್ತಾಯ, ಸಂಯೋಜಕರು, ಪಠ್ಯವಸ್ತು ಪರಿಷ್ಕರಣೆ ಮತ್ತು ಪಠ್ಯಪುಸ್ತಕ ರಚನೆ, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು.

ಸಲಹೆ ಮತ್ತು ಮಾರ್ಗದರ್ಶನ :

ಶ್ರೀ ನಾಗೇಂದ್ರಕುಮಾರ್, ವ್ಯವಸ್ಥಾಪಕ ನಿರ್ದೇಶಕರು ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು-೮೫.

ಶ್ರೀ ಪಾಂಡುರಂಗ, ಉಪನಿರ್ದೇಶಕರು (ಪ್ರಭಾರಿ), ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು-೮೫.

ಕಾರ್ಯಕ್ರಮ ಸಂಯೋಜಕರು :

ಶ್ರೀ ಪಾಂಡುರಂಗ, ಹಿರಿಯ ಸಹಾಯಕ ನಿರ್ದೇಶಕರು, ಕರ್ನಾಟಕ ಪಠ್ಯಪುಸ್ತಕ ಸಂಘ, ಬೆಂಗಳೂರು-೮೫.

© KTBS NOT TO BE REPUBLISHED

ಮುನ್ನುಡಿ

2005 ನೇ ರಾಷ್ಟ್ರೀಯ ಪಠ್ಯಕ್ರಮದ ಆಧಾರದ ಮೇಲೆ ರಚಿತವಾದ ಕರ್ನಾಟಕ ರಾಜ್ಯ ಪಠ್ಯವಸ್ತುವಿನ ಆಧಾರದ ಮೇಲೆ ಕರ್ನಾಟಕ ಪಠ್ಯಪುಸ್ತಕ ಸಂಘವು 2010 ನೇ ಸಾಲಿನಿಂದ ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗಿನ ಪಠ್ಯಪುಸ್ತಕಗಳ ರಚನಾ ಕಾರ್ಯದಲ್ಲಿ ತೊಡಗಿದೆ. ಒಟ್ಟು 12 ಭಾಷೆಗಳಲ್ಲಿ ಭಾಷಾ ಪಠ್ಯಪುಸ್ತಕಗಳನ್ನು ಹಾಗೂ ಕೋರ್ ವಿಷಯಗಳನ್ನು 7 ಮಾಧ್ಯಮಗಳಲ್ಲಿ ರಚನೆ ಮಾಡಲಾಗುತ್ತಿದೆ. 1 ರಿಂದ 4 ನೇ ತರಗತಿಯವರೆಗೆ ಪರಿಸರ ವಿಜ್ಞಾನ, ಗಣಿತ ಮತ್ತು 5 ರಿಂದ 10 ನೇ ತರಗತಿಯವರೆಗೆ ಕೋರ್ ವಿಷಯಗಳಾದ ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನಗಳಾಗಿರುತ್ತವೆ.

2005ರ ರಾಷ್ಟ್ರೀಯ ಪಠ್ಯಕ್ರಮವು ಈ ಕೆಳಗಿನ ವೈಶಿಷ್ಟ್ಯಗಳನ್ನು ಹೊಂದಿದೆ.

- ಕಲಿಕೆಯನ್ನು ಜೀವನದ ಆವಶ್ಯಕತೆಗಳೊಂದಿಗೆ ಜೋಡಿಸುವುದು.
- ಕಂಠಪಾಠ ವಿಧಾನದಿಂದ ಕಲಿಕೆಯನ್ನು ಮುಕ್ತಗೊಳಿಸುವುದು.
- ಪಠ್ಯಪುಸ್ತಕಗಳ ಹೊರತಾಗಿ ಪಠ್ಯಕ್ರಮವನ್ನು ಶ್ರೀಮಂತಗೊಳಿಸುವುದು.
- ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸುವುದು.
- ಭಾರತದ ಪ್ರಜಾಸತ್ತಾತ್ಮಕ ನೀತಿಯನ್ವಯ ಮಕ್ಕಳ ಆವಶ್ಯಕತೆಗಳಿಗೆ ತಕ್ಕಂತೆ ಸ್ಪಂದಿಸುವುದು.
- ಶಿಕ್ಷಣವನ್ನು ಇಂದಿನ ಹಾಗೂ ಭವಿಷ್ಯದ ಜೀವನಾವಶ್ಯಕತೆಗಳಿಗೆ ಹೊಂದುವಂತೆ ಮಾಡುವುದು.
- ವಿಷಯಗಳ ಮೇರೆಗಳನ್ನು ಮೀರಿ ಅವುಗಳಿಗೆ ಸಮಗ್ರದೃಷ್ಟಿಯ ಬೋಧನೆಯನ್ನು ಅಳವಡಿಸುವುದು.
- ಶಾಲೆಯ ಹೊರಗಿನ ಬದುಕಿಗೆ ಜ್ಞಾನ ಸಂಯೋಜನೆ.
- ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿ ಪಡಿಸುವುದು.

ನೂತನ ಪಠ್ಯಪುಸ್ತಕಗಳಲ್ಲಿ ನೂತನ ವಿಧಾನಗಳಾದ ಅಂತರ್ಗತ ವಿಧಾನ (Integrated Approach), ರಚನಾತ್ಮಕ ವಿಧಾನ (Constructive Approach), ಹಾಗೂ ಸುರುಳಿಯಾಕಾರದ ವಿಧಾನ (Spiral Approach) ಗಳನ್ನು ಅಳವಡಿಸಲಾಗಿದೆ.

ಪಠ್ಯಪುಸ್ತಕಗಳ ವಿಷಯ ಹಾಗೂ ಅಭ್ಯಾಸಗಳು ವಿದ್ಯಾರ್ಥಿಗಳನ್ನು ಯೋಚನೆ ಮಾಡುವಂತೆ ಮಾಡಿ, ಚಟುವಟಿಕೆಗಳ ಮೂಲಕ ಜ್ಞಾನ ಹಾಗೂ ಸಾಮರ್ಥ್ಯಗಳನ್ನು ಪಡೆಯುವಂತೆ ಮಾಡುವ ಪ್ರಯತ್ನ ಮಾಡಲಾಗಿದೆ. ಪಠ್ಯವಸ್ತುಗಳೊಂದಿಗೆ ಅತ್ಯಂತ ಆವಶ್ಯಕ ಜೀವನ ಮೌಲ್ಯಗಳನ್ನು ಅಂತರ್ಗತವಾಗಿ ಬಳಸಲಾಗಿದೆ. ಈ ನೂತನ ಪಠ್ಯಪುಸ್ತಕಗಳು ಪರೀಕ್ಷಾ ದೃಷ್ಟಿಯಿಂದ ರಚಿತವಾಗಿಲ್ಲ. ಬದಲಾಗಿ ಅವುಗಳು ವಿದ್ಯಾರ್ಥಿಗಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ. ತನ್ಮೂಲಕ ಅವರನ್ನು ಸ್ವತಂತ್ರ ಭಾರತದ ಸ್ವಸ್ಥಸಮಾಜದ ಉತ್ತಮ ಪ್ರಜೆಗಳನ್ನಾಗಿ ಮಾಡುವ ಪ್ರಯತ್ನ ನಡೆದಿದೆ.

ಭಾಷಾಕಲಿಕೆಯಲ್ಲಿ ಅತ್ಯಂತ ಮುಖ್ಯ ಗುರಿಗಳಾದ ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದು ಹಾಗೂ ಆಕರಗ್ರಂಥಗಳಿಂದ ವಿಷಯ ಸಂಗ್ರಹಣೆಯಂತಹ ಕ್ಷೇತ್ರವಾರು ಸಾಮರ್ಥ್ಯಗಳಿಗೆ ಒತ್ತು ನೀಡಲಾಗಿದೆ. ಈ ಕೌಶಲ್ಯಗಳೊಂದಿಗೆ ಕ್ರಿಯಾತ್ಮಕ ವ್ಯಾಕರಣ, ಸೌಂದರ್ಯಪ್ರಜ್ಞೆ, ಪ್ರಶಂಸಾ ಮನೋಭಾವ, ಮೌಲ್ಯಗಳ ಸಂವರ್ಧನೆಗೆ ಅನುವು ಮಾಡಿಕೊಡಬೇಕು. ಈ ಸಾಮರ್ಥ್ಯ ಮಕ್ಕಳಲ್ಲಿ ಬಂದಾಗ ಅವರು ಪರೀಕ್ಷೆಗಳಿಗಾಗಿ ಕಂಠಪಾಠಕ್ಕೆ ಶರಣು ಹೋಗಬೇಕಾಗಿಲ್ಲ. ಪಠ್ಯಪುಸ್ತಕವು ಭಾಷಾ ಕೌಶಲ್ಯಗಳ ಸಂವರ್ಧನೆಗೆ ಒಂದು ಪೂರಕವಸ್ತುವೆಂದು ಪರಿಗಣಿಸಲು, ಮಕ್ಕಳ ಮನೋವೈಶಾಲ್ಯವನ್ನು ಬೆಳೆಸಲು ವಿಷಯಗಳಿಗೆ

NOT TO BE REPUBLISHED @KTBS

ಸಂಬಂಧಿಸಿದಂತೆ ಅನೇಕ ಚಟುವಟಿಕೆಗಳನ್ನು ಪಠ್ಯಪುಸ್ತಕದಲ್ಲಿ ಒದಗಿಸಲಾಗಿದೆ. ಮಿತ್ರರೊಂದಿಗೆ ಗುಂಪುಗಳಲ್ಲಿ ಚರ್ಚೆಯ ಮೂಲಕ ಅವರ ಅಭಿವ್ಯಕ್ತಿ ಹಾಗು ಸಂವಹನ ಕೌಶಲ್ಯಗಳ ಸಂವರ್ಧನೆಯೇ ಕಲಿಕೆ ಗುರಿಯೆಂದು ಅಂತಹ ಚಟುವಟಿಕೆಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗಿದೆ. ಈ ರೀತಿಯ ಚಟುವಟಿಕೆಗಳು ಮಕ್ಕಳಲ್ಲಿ ಕಲಿಯುವ ಕಲೆ (learning to learn) ಹಾಗೂ ಕಲಿತುದುದನ್ನು ಜೀವನದಲ್ಲಿ ಅಳವಡಿಸುವ ಶಕ್ತಿ (learning to do) ಯನ್ನು ಮಕ್ಕಳಲ್ಲಿ ವೃದ್ಧಿಮಾಡುತ್ತದೆ.

ಕರ್ನಾಟಕ ಪಠ್ಯಪುಸ್ತಕ ಸಂಘವು ಈ ಪುಸ್ತಕದ ತಯಾರಿಕೆಯಲ್ಲಿ ಸಹಕರಿಸಿದ ಸಮಿತಿಯ ಅಧ್ಯಕ್ಷರಿಗೆ, ಸದಸ್ಯರಿಗೆ, ಕಲಾಕಾರರಿಗೆ, ಪರಿಶೀಲಕರಿಗೆ, ಸಂಯೋಜಕ ಅಧಿಕಾರಿಗಳಿಗೆ, ಶಿಕ್ಷಣ ಮಹಾವಿದ್ಯಾಲಯಗಳ ಸಿಬ್ಬಂದಿವರ್ಗದವರಿಗೆ, ಜಿಲ್ಲಾ ತರಬೇತಿ ಸಂಸ್ಥೆಗಳು, ರಾಜ್ಯಮಟ್ಟದ ಪಠ್ಯಪುಸ್ತಕ ಸಂಪಾದಕ ಮಂಡಳಿಯ ಸದಸ್ಯರಿಗೆ ಮತ್ತು ಪುಸ್ತಕವನ್ನು ಸುಂದರವಾಗಿ ಮುದ್ರಿಸಿದ ಮುದ್ರಕರಿಗೆ ತನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಕೆಲವು ಸಾಹಿತಿಗಳು ಹಾಗೂ ಕವಿಗಳ ಕೃತಿಗಳನ್ನು ಈ ಪಠ್ಯಪುಸ್ತಕಗಳಲ್ಲಿ ಅಳವಡಿಸಲಾಗಿದೆ. ಈ ವಿಚಾರದಲ್ಲಿ ತಮ್ಮ ಒಪ್ಪಿಗೆಯನ್ನು ನೀಡಿರುವ ಬರಹಗಾರರಿಗೆ ಹಾಗೂ ಕವಿಗಳಿಗೆ ಪಠ್ಯಪುಸ್ತಕ ಸಂಘ ಆಭಾರಿಯಾಗಿದೆ.

ಪ್ರೊ. ಜಿ. ಎಸ್. ಮುಡಂಬಡಿತ್ತಾಯ
ಮುಖ್ಯ ಸಂಯೋಜಕರು
ಪಠ್ಯಪುಸ್ತಕ ಪರಿಷ್ಕರಣೆ ಹಾಗೂ ಪಠ್ಯಪುಸ್ತಕ ರಚನೆ
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು-85.

ನಾಗೇಂದ್ರಕುಮಾರ್
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ.)
ಬೆಂಗಳೂರು-೮೫.

© KTBS
NOT TO BE REPUBLISHED

ಸಮಕ್ಷಮ

ಭಾರತ ಸರ್ಕಾರದ ೨೦೦೫ರ ರಾಷ್ಟ್ರೀಯ ಶಾಲಾ ಪಠ್ಯಕ್ರಮದ ಚೌಕಟ್ಟಿನಲ್ಲಿ ಕರ್ನಾಟಕ ಸರ್ಕಾರವು ಪಠ್ಯ ಸಮಷ್ಟಿಯನ್ನು ಪರಿಷ್ಕರಿಸಿದೆ. ಅದರನ್ವಯ ಕರ್ನಾಟಕ ಸರ್ಕಾರ ರಾಜ್ಯ ಭಾಷೆಯನ್ನು ಪರಿಚಯಿಸುವ ಹಿನ್ನಲೆಯಲ್ಲಿ ಒಂದನೆಯ ತರಗತಿಯಿಂದ ೪ನೆಯ ತರಗತಿಯವರೆಗೆ ಅನೌಪಚಾರಿಕವಾಗಿ ಕನ್ನಡವನ್ನು ಬೋಧಿಸಲಾಗುತ್ತಿದೆ. ಆದರೆ ಔಪಚಾರಿಕವಾಗಿ ೫ನೆಯ ತರಗತಿಯಿಂದ ಕನ್ನಡವನ್ನು ದ್ವಿತೀಯಭಾಷೆಯಾಗಿ ಕಲಿಸುತ್ತಿದ್ದಾರೆ. ಈಗ ೬ನೆಯ ತರಗತಿಯ ವಿದ್ಯಾರ್ಥಿಗಳ ಭಾಷಾ ಕಲಿಕೆಗೆ ವ್ಯವಸ್ಥಿತವಾದ ಪಠ್ಯ ರಚಿಸುವ ಪ್ರಯತ್ನವಿದು. ಈ ಪಠ್ಯ ಪುಸ್ತಕ ರಚನೆಯ ಸಂದರ್ಭದಲ್ಲಿ ಮಕ್ಕಳ ವಯೋಮಟ್ಟ, ಮಾನಸಿಕ ಮಟ್ಟ, ಅವರು ಈಗಾಗಲೇ ಕರಗತಗೊಳಿಸಿಕೊಂಡಿರುವ ಕನ್ನಡ ಭಾಷಾಶಕ್ತಿ ಮತ್ತು ಶಬ್ದ ಸಂಪತ್ತನ್ನು ಪ್ರಮುಖವಾಗಿ ಗಮನಿಸಲಾಗಿದೆ. ಮೂಲತ: ಇದು ಶಿಶು ಕೇಂದ್ರಿತ ಪಠ್ಯ.

ಮಗು ಕೇಂದ್ರಿತ ಈ ಪಠ್ಯದಲ್ಲಿ ಮಗುವಿನ ಭಾವಕೋಶ ವಿಕಾಸಕ್ಕೆ ಆದ್ಯತೆ ನೀಡಲಾಗಿದೆ. ಆ ಮಗು ಬಯಸುವ ಕಥೆಗಳು ಸಾಹಸ, ಗುನುಗುನಿಸುವ ಹಾಡು ಮತ್ತು ಹೊರಹೊಮ್ಮುವ ಮಾತುಗಳಿಗೆ, ಇಷ್ಟದ ಭಾಷಾ ಚಟುವಟಿಕೆಗಳಿಗೆ ಈ ಪಠ್ಯ ಸಾಧನವಾಗಿದೆ. ವೈಚಾರಿಕತೆಗೆ ಮಾರ್ಗದರ್ಶಿಯಾಗಿದ್ದರೆ ಆಲೋಚನೆಗಳಿಗೆ ತಲಸ್ಪರ್ಶಿ ಆಧಾರ ಒದಗಿಸಿದೆ. ಅನೇಕ ಪ್ರಯೋಗಗಳಿಂದ ಕೂಡಿದ ಉದ್ದೇಶ ಪೂರ್ವಕ ರಚನೆಯಾಗಿದೆ. ಕನ್ನಡದ ಪರಂಪರೆ, ಪ್ರಸ್ತುತತೆ ಮತ್ತು ಪುನರ್ ಮೌಲ್ಯಕರಣದೊಂದಿಗೆ ಪಠ್ಯವನ್ನು ಆಯೋಜಿಸಲಾಗಿದೆ.

ಪಾಠಗಳ ಬರವಣಿಗೆಯು ಸರಳವೂ ಚೇತೋಹಾರಿಯೂ ರೋಚಕವೂ ಆಗಿದ್ದು ಮಗುವಿನ ಮನೋಲ್ಲಾಸದ ಮುಖ್ಯಗುರಿಹೊಂದಿದೆ. ಜೀವನ ಮೌಲ್ಯಗಳನ್ನು ರಕ್ತಗತ ಮಾಡುವ ದಿಸೆಯಲ್ಲಿ ಹೆಣೆಯಲಾಗಿದೆ. ಇವೆಲ್ಲವುಗಳ ಪ್ರಮುಖ ಉದ್ದೇಶವು ಮಕ್ಕಳು ಕನ್ನಡ ಕಲಿಕೆಯನ್ನು ಆನಂದದಿಂದ ಸ್ವೀಕರಿಸಬೇಕು. ದ್ವಿತೀಯಭಾಷೆಯ ಪ್ರಮುಖ ಗುರಿಯಾದ ಸಂವಹನ ಶಕ್ತಿ ಹೆಚ್ಚಿಸುವುದು.ಓದುವುದು, ಆಲಿಸಿ ಅರ್ಥೈಸುವುದು ಹಾಗೂ ಸ್ವತ: ಕನ್ನಡದಲ್ಲಿ ಆಲೋಚಿಸಿ ಹೊಸ ಮಾತು, ಹೊಸ ಕಥೆ, ಹೊಸ ರಚನೆಗಳನ್ನು ಮಕ್ಕಳು ಮಾಡುವಂತೆ ಮಾಡುವುದು ಆಗಿದೆ. ಅದಕ್ಕಾಗಿ ವಿಶೇಷವಾಗಿ ರಚಿತವಾದ ಅಭ್ಯಾಸ ಚಟುವಟಿಕೆಗಳನ್ನು , ಭಾಷಾಭ್ಯಾಸ ಹಾಗೂ ಭಾಷಾ ಚಟುವಟಿಕೆಗಳನ್ನು ಮಕ್ಕಳು ಹಾಗೂ ಅಧ್ಯಾಪಕರು ಹೆಚ್ಚಿನ ಗಮನ ನೀಡಬೇಕು. **ದಯವಿಟ್ಟು ಪಠ್ಯರಚನಾ ವಿವರ ತ:ಖ್ತೆಯನ್ನು ಗಮನಿಸಿದರೆ ಪಠ್ಯರಚನೆಯ ತತ್ವ ಹಾಗೂ ಬೋಧನಾ ರೀತಿ ಮನದಟ್ಟಾಗುವುದು**. ಸ್ವಕಲಿಕೆ ನಮ್ಮ ಗುರಿ. ನಮ್ಮೆಲ್ಲ ಕಸರತ್ತುಗಳು ಪ್ರಯತ್ನಗಳು ಅದರ ಸುತ್ತಮುತ್ತ ಇವೆ. ಇದನ್ನು ಅಧ್ಯಾಪಕರು, ಪಾಲಕರು ಅರಿಯಬೇಕು. ಪಠ್ಯದ ಜೊತೆಗೆ ಮಗು ಒಂದಾಗಬೇಕು. ಅದು ನಮ್ಮ ಆಸೆ. ಈ ದಿಸೆಯಲ್ಲಿ ನಿನ್ನಲೂ ಅದ್ಭುತ ಶಕ್ತಿಯಿದೆ. ಮಲ್ಲಕಂಬ, ಭಿತ್ತಿಪತ್ರ, ನಮ್ಮೂರ ಕೆರೆ, ಕೂಗುತಿದೆ ಪಕ್ಷಿ, ಎದೆಗುಂದದ ವೀರರು ಹೆಸರಿಸಬಹುದಾದ ಪಾಠಗಳು. ಮಕ್ಕಳ ಮನೋವ್ಯಾಪಾರವನ್ನು ಹಿಡಿದಿಡುವಲ್ಲಿ ಎಲ್ಲ ಕವಿತೆಗಳು ಸಶಕ್ತವಾಗಿವೆ. ಅವನ್ನು ಲಯಬದ್ಧವಾಗಿ ಹಾಡಬಹುದು. ಮಕ್ಕಳು ಈ ಪಠ್ಯವನ್ನು ಸದಾ ಗುನುಗುನಿಸುತ್ತ ಭಾವನಾತ್ಮಕ ಬದುಕನ್ನು ಕಟ್ಟಿಕೊಳ್ಳುವಂತೆ ರಚಿಸಲಾಗಿದೆ.

ಪಾಠ ಪ್ರಾರಂಭಿಸುವ ಮುನ್ನ ಪಾಠ ಪ್ರವೇಶವನ್ನು ಅಧ್ಯಾಪಕರು ಓದಿಕೊಂಡು ಸೂಕ್ತ ಚಟುವಟಿಕೆಗಳನ್ನು ಸಿದ್ಧಪಡಿಸಿಕೊಳ್ಳಬೇಕು.

ಪಠ್ಯ ಏನೇ ರಚನೆಯಾಗಿದ್ದರೂ ಆ ಅಕ್ಷರಗಳಿಗೆ ಜೀವ ತುಂಬುವವರು ಅಧ್ಯಾಪಕರು. ಅವರು ತಮ್ಮ ಶಕ್ತಿ ಸಾಮರ್ಥ್ಯವನ್ನು ಒರೆಗೆ ಹಚ್ಚಿ ದುಡಿದಾಗ ಪರಭಾಷಿಕರಿಗೆ, ಕನ್ನಡ ಪರಿಸರದಲ್ಲಿ ಮಾತಾಡಲು ಸಾಧ್ಯ. ಈ ಜವಾಬ್ದಾರಿಗಳನ್ನು ಅಧ್ಯಾಪಕರ ಮೇಲಿನ ವಿಶ್ವಾಸದಿಂದ ಅವರಿಗೆ ಒಪ್ಪಿಸುವೆನು.

ಪಠ್ಯಪುಸ್ತಕ ರಚನೆಯಲ್ಲಿ ನೆರವಾದ ಸಮಿತಿಯ ಸನ್ಮಿತ್ರ ಸದಸ್ಯರ ಬೆಂಬಲ, ವಿಶ್ವಾಸ, ಸಹಕಾರ, ಮತ್ತು ಹೃದಯವಂತಿಕೆಯನ್ನು ನೆನೆಯುತ್ತೇನೆ. ಚಿತ್ರ ಕಲಾವಿದರ ಶ್ರಮ ಸಾರ್ಥಕವಾಗಿದೆ.

ಪಠ್ಯಪುಸ್ತಕ ಸಂಘದ ವ್ಯವಸ್ಥಾಪಕರು , ನಿರ್ದೇಶಕರು, ಸಂಯೋಜಕರು, ಉಪನಿರ್ದೇಶಕರು ಹಾಗೂ ಹಿರಿಯ ಸಹಾಯಕ ನಿರ್ದೇಶಕರು, ಅವರ ಸಿಬ್ಬಂದಿ ಮತ್ತು ನಮ್ಮೀ ಕಾರ್ಯಕ್ಕೆ ಸಕಲ ಸಹಕಾರ ಮಾಡಿಕೊಟ್ಟ ಎಲ್ಲರಿಗೂ ವಿಶ್ವಾಸ ಪೂರ್ವಕ ವಂದನೆಗಳು.

ರಾಮಣ್ಣಹವಳೆ
ಅಧ್ಯಕ್ಷರು
ಪಠ್ಯಪುಸ್ತಕ ರಚನಾ ಸಮಿತಿ

© KTBS NOT TO BE REPUBLISHED

ಪರಿವಿಡಿ

@ KTBS NOT TO BE REPUBLISHED

ಮೊದಲನೆಯ ಸೆಮಿಸ್ಟರ್

ಪೂರ್ವಸಿದ್ಧತಾ ಪಾಠಗಳು


೧. ಚಿತ್ರ ನೋಡಿ, ವಿವರ ಹೇಳು :




....



....



....



....

@ KTBS NOT TO BE REPUBLISHED

೨. ಚಿತ್ರ ನೋಡಿ, ವಿವರ ಹೇಳು :









@ KTBS
NOT TO BE REPUBLISHED

೩. ಚಿತ್ರ ನೋಡಿ, ಕಥೆ ಓದು.

ಕುರಿ ಕಾಯುವ ಹುಡುಗ





ಕುರಿ ಮೇಯಿಸಲು ಹುಡುಗನು ಕಾಡಿಗೆ ಹೋದನು. ಒಂದು ದಿನ ಅವನು ಒಮ್ಮೆಲೆ "ತೋಳ ಬಂತು ತೋಳ" ಎಂದು ಕೂಗಿಕೊಂಡನು. ಇದನ್ನು ಕೇಳಿ ಜನರು ಓಡಿ ಬಂದರು. ತೋಳ ಇರಲಿಲ್ಲ. ಅವರು ಹಿಂದಿರುಗಿದರು. ಮಾರನೆಯ ದಿನವೂ ಹುಡುಗ "ತೋಳ ಬಂತು ತೋಳ" ಎಂದು ಕೂಗಿಕೊಂಡನು. ಮತ್ತೆ ಅದೇ ಜನರು ಓಡಿ ಬಂದರು. ತೋಳ ಇರಲಿಲ್ಲ. ಜನರು ಹುಡುಗನ ಬಗ್ಗೆ ಗೊಣಗುತ್ತ ಹೋದರು. ಒಮ್ಮೆ ನಿಜವಾಗಿಯೂ ತೋಳ ಬಂತು! ಕುರಿಗಳನ್ನು ತಿನ್ನುತ್ತಿತ್ತು. ಹುಡುಗ ಸಹಾಯಕ್ಕಾಗಿ ಕೂಗಿದನು. "ತೋಳ ಬಂತು ತೋಳ" ಎಂದು ಅರಚಿದನು. ಇದನ್ನು ಕೇಳಿಸಿಕೊಂಡ ಜನ, ಆ ಹುಡುಗ ಸುಳ್ಳು ಹೇಳುತ್ತಿದ್ದಾನೆ ಎಂದು ಕೊಂಡರು. ಯಾರು ಬರಲಿಲ್ಲ. ತೋಳ ಕುರಿಗಳನ್ನು ಎತ್ತಿಕೊಂಡು ಹೋಯಿತು. ಹುಡುಗ ಅಳುತ್ತ ಕುಳಿತನು.





© KTBS NOT TO BE REPUBLISHED

೪. ನಾನೇ ಓದುವೆ–ನಾನೇ ಹಾಡುವೆ

ಬಾ ಬೇಗ ಸೂರ್ಯ

ಅಕ್ಕಾ ಅಣ್ಣ ಮಲಗಿಹರಿನ್ನೂ
ಸೂರ್ಯನು ಕೂಡ ಬಂದಿಲ್ಲ.
ನಿನ್ನೆಯ ದಿನದಿ ಆಟದಿ ದಣಿದು
ಅವನು ಇನ್ನೂ ಎದ್ದಿಲ್ಲ.

ಬಾರೋ ಸೂರ್ಯ ಬೇಗನೆ ಬಾರೋ
ಚಳಿಯನು ಕಳೆದು ಬಿಸಿಲನು ತಾರೋ
ಗುಬ್ಬಿ ಹಕ್ಕಿ ಚಿಲಿಪಿಲಿಗುಟ್ಟಿ
ನಿನಗೆ ಸ್ವಾಗತ ಹಾಡುತಿದೆ

ನಿನ್ನಯ ಸ್ಪರ್ಧಿ ಅಪ್ಪನು ಆಗಲೆ
ಹೊಲಕೆ ಗಳೆಯನು ಹೊಡೆದಿಹನು
ಉತ್ತಿಬಿತ್ತಿ ಪೈರನು ಬೆಳೆದು
ಜಗಕೆ ಅನ್ನವ ನೀಡುವನು


ಸೂರ್ಯನೆ ನೀನು ಬಂದರೆ ಬೇಗ
ಕಟ್ಟಿದ ಕರುವಿಗೂ ಮೊಲೆ ಹಾಲುಂಟು
ಅಮ್ಮನು ಕರೆದು ಎಡೆಯನು ಹಿಡಿದು
ನನಗೂ ಹಾಲನು ಕುಡಿಸುವುದುಂಟು

ಬಾರೋ ಸೂರ್ಯ ಬೇಗನೆ ಬಾರೋ
ಜಗದ ಕಣ್ಣಾಗಿ ಬೆಳಕನು ತಾರೋ
ಬರದಿರೆ ನೀನು ಉಳಿಯುವದೇನು?
ಜೀವರಾಶಿಯ ದೈವವೇ ನೀನು

– ಮ.ನು. ಬಳಿಗಾರ

© KTBS NOT TO BE REPUBLISHED

ಕವಿ ಪರಿಚಯ:



ಮ.ನು. ಬಳಿಗಾರ ಗದಗ ಜಿಲ್ಲೆಯ ಶಿಗ್ಲಿ ಗ್ರಾಮದವರು. ಇವರು ಅನೇಕ ಕಥೆಗಳನ್ನು, ಕವಿತೆಗಳನ್ನು, ಜೀವನ ಚರಿತ್ರೆಗಳನ್ನು ಬರೆದಿದ್ದಾರೆ. ಇವರ ಪ್ರಸಿದ್ಧ ಕವನ ಸಂಕಲನಗಳು **ನನ್ನ ನಿನ್ನೊಳಗೆ, ಬಿದ್ದವರು ಎದ್ದವರು, ಸಾಕ್ಷರ ಗೀತೆಗಳು, ಕವಿ ರವಿಂದ್ರರ ಮಿಂಚಿನ ಹನಿಗಳು**. ಇವರು ಮಕ್ಕಳಿಗಾಗಿ ಅನೇಕ ಕವನಗಳನ್ನು ಬರೆದಿದ್ದಾರೆ. ಇವರಿಗೆ ಗೌರವ ಡಾಕ್ಟರೇಟ್ ದೊರೆತಿದೆ. ರನ್ನ ಪ್ರಶಸ್ತಿ, ಗೊರೂರು ಸಾಹಿತ್ಯ ಪ್ರಶಸ್ತಿ, ಇತರ ಅನೇಕ ಪ್ರಶಸ್ತಿಗಳು ಬಂದಿವೆ.

ಅಭ್ಯಾಸ

೧ಅ. ಕವಿತೆ ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಹೇಳಿರಿ.

೧. ಮಲಗಿರುವವರು ಯಾರು?

೨. ಅಣ್ಣ ಏಕೆ ದಣಿದಿದ್ದಾನೆ?

೩. ಗುಬ್ಬಿ ಸೂರ್ಯನಿಗೆ ಯಾವ ರೀತಿ ಸ್ವಾಗತ ಹಾಡುತ್ತಿದೆ?

೪. ಅಪ್ಪನು ಹೊಲಕ್ಕೆ ಏಕೆ ಹೋಗಿಹನು?

೫. ಹಾಲನ್ನು ಯಾರು ಕರೆಯುವರು?

೬. ಜಗದ ಕಣ್ಣು ಯಾರು?

೭. ಸೂರ್ಯನು ಏನನ್ನು ತರಬೇಕು?

ಆ. ಪದ್ಯದಲ್ಲಿರುವ ಈ ಪ್ರಾಸ ಪದಗಳನ್ನು ಗಮನಿಸಿ ಓದಿ.

೧. ಬಂದಿಲ್ಲ – ಎದ್ದಿಲ್ಲ

೨. ಬಾರೋ – ತಾರೋ

ಇ. ಕೆಳಗಿನ ಪದಗಳಿಗೆ ಮಾದರಿಯಲ್ಲಿ ಕೊಟ್ಟಿರುವಂತೆ ಸಮಾನಾರ್ಥಕ ಪದಗಳನ್ನು ಹೇಳಿ.

ಮಾದರಿ : ಹಕ್ಕಿ = ಪಕ್ಷಿ, ಖಗ

೧. ಅಮ್ಮ = ...

೨. ಅಪ್ಪ = ...

೩. ಸೂರ್ಯ = ...

೪. ಜಗ = ...

೫. ಕಣ್ಣು = ...

© KTBS NOT TO BE REPUBLISHED

ಈ. ಕೆಳಗಿನ ಪದಗಳಿಗೆ ಮಾದರಿಯಂತೆ ಬಹುವಚನ ರೂಪಗಳನ್ನು ಹೇಳಿರಿ.

ಮಾದರಿ : ಅಕ್ಕ = ಅಕ್ಕಂದಿರು

೧. ಅಣ್ಣ = ...

೨. ಹಕ್ಕಿ = ...

೩. ಆಟ = ...

೪. ದಿನ = ...

ಉ. ಕೆಳಗಿನ ಪದಗಳಿಗೆ ಮಾದರಿಯಲ್ಲಿ ಕೊಟ್ಟಿರುವಂತೆ ವಿರುದ್ಧ ಪದಗಳನ್ನು ಹೇಳಿರಿ.

ಮಾದರಿ : ಮಲಗು   ಏಳು

೧. ಬೇಗ ....

೨. ಕಟ್ಟು ....

೩. ಉಂಟು ....

೪. ಬಾ ....

ಊ. ಕೆಳಗಿನ ವಿಷಯಗಳನ್ನು ಕುರಿತು ಮೂರು-ನಾಲ್ಕು ವಾಕ್ಯ ಹೇಳಿರಿ.

೧. ಸೂರ್ಯ ೨. ಶಾಲೆ ೩. ರೈತ ೪. ಪರಿಸರ

✤ ✤ ✤

@KTBS NOT TO BE REPUBLISHED

ಪದ್ಯ ಪಾಠ ೧

ಈ ಮಣ್ಣು ನಮ್ಮದು

ಪದ್ಯ ಪ್ರವೇಶ :

ನಾವೆಲ್ಲರೂ ಒಂದು ಕುಟುಂಬದಲ್ಲಿ ವಾಸಿಸುತ್ತೇವೆ. ಅವರನ್ನು ನನ್ನ ತಂದೆ , ನನ್ನ ತಾಯಿ, ನನ್ನ ಅಣ್ಣ, ನನ್ನ ಅಕ್ಕ ಎಂದು ಹೆಮ್ಮೆಯಿಂದ ಗುರುತಿಸುತ್ತೇವೆ. ಇದೇ ಬಗೆಯ ಅಭಿಮಾನ ನಾವು ಹುಟ್ಟಿದ ದೇಶದ ಬಗ್ಗೆ ಇರಬೇಕು. ನಾವೆಲ್ಲರೂ ಭಾರತೀಯರು. ಭಾರತ ಮಾತೆಯ ಮಕ್ಕಳು. ಭಾರತದಲ್ಲಿ ವಿವಿಧ ಧರ್ಮಗಳಿವೆ. ವಿವಿಧ ಭಾಷೆಗಳಿವೆ. ವಿವಿಧ ಸಂಸ್ಕೃತಿಗಳಿವೆ. ಇತಿಹಾಸವಿದೆ. ಆದಕಾರಣ, ಪ್ರತಿಯೊಬ್ಬರಿಗೂ ತನ್ನದೇಶದ ಬಗ್ಗೆ ಅಭಿಮಾನ ಇರಬೇಕು. "ತಾಯಿ ಮತ್ತು ತಾಯಿನಾಡು ಸ್ವರ್ಗಕ್ಕಿಂತಲೂ ಮಿಗಿಲು" ಎಂದು ಸಂಸ್ಕೃತ ಸುಭಾಷಿತ ಹೇಳುತ್ತದೆ. ಕುವೆಂಪುರವರು "ದೇಶ ನನ್ನದು, ನಾಡು ನನ್ನದು ಎನ್ನದ ಎದೆ ಸುಡುಗಾಡು" ಎನ್ನುತ್ತಾರೆ. ಇಲ್ಲಿ ಕವಿ ಆರ್.ಎನ್. ಜಯಗೋಪಾಲರು ಈ ದೇಶವನ್ನು ವರ್ಣಿಸಿ ದೇಶಭಕ್ತಿಯನ್ನು ಮೆರೆದಿದ್ದಾರೆ.

ಈ ಮಣ್ಣು ನಮ್ಮದು
ಈ ಗಾಳಿ ನಮ್ಮದು
ಕಲಕಲನೆ ಹರಿಯುತಿಹ ನೀರು ನಮ್ಮದು
ಕಣಕಣದಲು ಭಾರತೀಯ ರಕ್ತ ನಮ್ಮದು ॥ ಪ ॥

ನಮ್ಮ ಕಾಯ್ವ ಹಿಮಾಲಯವು ತಂದೆ ಸಮಾನ
ಗಂಗೆ ತುಂಗೆ ಕಾವೇರಿಯು ತಾಯಿ ಸಮಾನ
ಈ ದೇಶದ ಜನರೆಲ್ಲರೂ ಸೋದರ ಸಮಾನ
ಈ ನಾಡಿನ ಹೃದಯವದು ದೈವ ಸನ್ನಿಧಾನ ॥ ೧ ॥


ಅಜಂತ ಎಲ್ಲೋರ ಹಳೇಬೀಡು ಬೇಲೂರು
ಶಿಲೆಗಳಿವು ಕಲೆಯ ಆಗರ
ಹಿಂದು, ಬುದ್ಧ, ಜೈನ, ಕ್ರೈಸ್ತ, ಮುಸಲ್ಮಾನ
ಧರ್ಮಗಳ ಮಹಾಸಾಗರ ॥ ೨ ॥

ತಂಗಾಳಿಗೆ ತಲೆದೂಗುವ ಪೈರಿನ ಹಾಡು
ಆ ಹಾಡಿಗೆ ತಾಳ ಕೊಡುವ ಯಂತ್ರದ ಜಾಡು
ವಿಜ್ಞಾನವು ಅಜ್ಞಾನವ ಗೆಲ್ಲುವ ಹಾಡು
ಹೊಸ ಭಾರತ ನಿರ್ಮಾಣವು ಸಾಗಿದೆ ನೋಡು ॥ ೩ ॥

– ಆರ್. ಎನ್. ಜಯಗೋಪಾಲ್

© KTBS NOT TO BE REPUBLISHED

ಕವಿ ಪರಿಚಯ:



ಖ್ಯಾತ ಚಲನಚಿತ್ರ ಸಾಹಿತಿ ಆರ್. ಎನ್ .ಜಯಗೋಪಾಲ ಅವರು ರಚಿಸಿದ ಹಾಡಿದು. ಇವರು ಅನೇಕ ಭಾವಗೀತೆಗಳನ್ನು ರಚಿಸಿದ್ದಾರೆ. ಅನೇಕ ಸಿನೆಮಾಗಳಿಗೆ ಹಾಡುಗಳನ್ನು ಬರೆದಿದ್ದಾರೆ. ಈ ಜನಪ್ರಿಯ ಭಾವಗೀತೆ ನಮ್ಮೊಳಗಿನ ನಾಡ ಪ್ರೇಮವನ್ನು ಎಚ್ಚರಿಸುತ್ತದೆ. ಈ ಪದ್ಯದ ಭಾವವು ದೇಶವನ್ನು ವರ್ಣಿಸಿ ದೇಶಪ್ರೇಮವನ್ನು ಹುಟ್ಟಿಸುವುದೂ ಆಗಿದೆ. ರೈತರು ವಿಜ್ಞಾನಿಗಳು ಕೂಡಿ ಹೊಸ ಭಾರತವನ್ನು ನಿರ್ಮಾಣ ಮಾಡುತ್ತಿದ್ದಾರೆ ಎಂಬ ಆಶೋತ್ತರವನ್ನು ಬಿಂಬಿಸುತ್ತಿದ್ದಾರೆ.

ಓದಿ–ತಿಳಿ

ಕಾಯ್ವ– ಕಾಪಾಡುವ, ಕಾಯುವ, ದೈವ– ದೇವರು, ಸನ್ನಿಧಾನ– ಆಶ್ರಯ, ಸಮೀಪ, ಆಗರ– ನೆಲೆ, ಗಣಿ, ತಂಗಾಳಿ– ತಂಪಾದ ಗಾಳಿ, ಪೈರು– ಬೆಳೆ, ನಿರ್ಮಾಣ – ಕಟ್ಟು.

ಗಮನಿಸಿ ತಿಳಿ

ಕಲಕಲ–ನೀರು ಹರಿಯುವಾಗ ಉಂಟಾಗುವ ಧ್ವನಿ, ಕಣಕಣ– ವಸ್ತುವಿನ ಅತ್ಯಂತ ಸಣ್ಣ ಮತ್ತು ಸೂಕ್ಷ್ಮ ಭಾಗ (ಅಂಶ), ತಲೆದೂಗು– ತಲೆಯಾಡಿಸು, ಮೆಚ್ಚು, ಅಜ್ಞಾನ– ಅರಿವಿಲ್ಲದಿರುವಿಕೆ, ತಪ್ಪು ತಿಳುವಳಿಕೆ.

@ KTBS NOT TO BE REPUBLISHED

ಅಭ್ಯಾಸ

ಅ. ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ನೀರು ಹರಿಯುವಾಗ ಉಂಟಾಗುವ ಧ್ವನಿ ಹೇಗಿರುತ್ತದೆ?

೨. ಈ ನಾಡಿನ ಹೃದಯವು ಯಾರ ಸನ್ನಿಧಾನವಾಗಿವೆ?

೩. ಯಾವ ಸ್ಥಳಗಳು ಕಲೆಯ ಆಗರಗಳಾಗಿವೆ?

೪. ಯಾವ ಯಾವ ಧರ್ಮಗಳು ಭಾರತದಲ್ಲಿವೆ?

೫. ತಂಗಾಳಿಗೆ ಯಾವುದು ತಲೆದೂಗುತ್ತದೆ?

೬. ಪೈರಿನ ಹಾಡಿಗೆ ತಾಳ ಕೊಡುವುದು ಯಾವುದು?

೭. ವಿಜ್ಞಾನವು ಯಾವುದನ್ನು ಗೆಲ್ಲುವ ಹಾಡಾಗಿದೆ?

ಆ. 'ಅ' ಪಟ್ಟಿಯ ಪದಗಳನ್ನು 'ಬ' ಪಟ್ಟಿಯ ಪದಗಳಿಗೆ ಹೊಂದಿಸಿ ಬರೆಯಿರಿ.

ಅ	ಬ
ಈ ನಾಡಿನ ಹೃದಯ	ತಂದೆ ಸಮಾನ
ಬೇಲೂರು ಹಳೇಬೀಡು	ತಾಯಿ ಸಮಾನ
ಈ ದೇಶದ ಜನರೆಲ್ಲರೂ	ಸೋದರ ಸಮಾನ
ಹಿಮಾಲಯ	ದೈವ ಸನ್ನಿಧಾನ
ಗಂಗೆ, ತುಂಗೆ	ಕಲೆಯ ಆಗರ
	ಧರ್ಮಗಳ ಮಹಾಸಾಗರ.

ಇ. ಕೆಳಗಿನ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಆರಿಸಿ ಬರೆಯಿರಿ.

೧. ನೀರು ಹರಿಯುವ ಧ್ವನಿಯು ______________

ಅ) ಜಲಜಲ ಆ) ಕಲಕಲ ಇ) ಪಳಪಳ ಈ) ಗಲಗಲ

೨. ಈ ನಾಡಿನ ಹೃದಯವಾಗಿದೆ : ___________

ಅ) ದೈವ ಸನ್ನಿಧಾನ ಆ) ವಿಷ್ಣು ಸನ್ನಿಧಾನ ಇ) ಅಲ್ಲಾನ ಸನ್ನಿಧಾನ
ಈ) ಕ್ರಿಸ್ತನ ಸನ್ನಿಧಾನ

೩. ಅಜಂತಾ, ಎಲ್ಲೋರಾ, ಹಳೇಬೀಡು, ಬೇಲೂರು ಯಾವುದರ ಆಗರವಾಗಿವೆ ?

ಅ) ಕಲ್ಲುಗಳ ಆಗರ ಆ) ಗುಡಿಗಳ ಆಗರ ಇ) ನುಡಿಗಳ ಆಗರ
ಈ) ಕಲೆಗಳ ಆಗರ

೪. ತಂಗಾಳಿಗೆ ತಲೆದೂಗುವ ಪೈರಿನ ಹಾಡು ಆ ಹಾಡಿಗೆ ತಾಳ ಕೊಡುವ ಯಂತ್ರದ ಜಾಡು, ಈ ಸಾಲುಗಳ ಅರ್ಥವು ಈ ರೀತಿಯಾಗಿದೆ :___________

ಅ) ಹೊಸ ಹೊಸ ಯಂತ್ರಗಳು ಬಳಕೆಯಲ್ಲಿ ಬಂದು ರೈತರ ಅಭಿವೃದ್ಧಿಗೆ ಕಾರಣವಾಗಿವೆ.

ಆ) ತಂಗಾಳಿಗೆ ಯಂತ್ರಗಳು ತಲೆದೂಗುತ್ತವೆ. ಪೈರುಗಳು ಹಾಡುತ್ತವೆ.

ಇ) ಯಂತ್ರಗಳು ಹಾಡುತ್ತವೆ. ತಂಗಾಳಿ ತಲೆ ದೂಗುತ್ತದೆ.

ಈ) ತಂಗಾಳಿ, ಯಂತ್ರಗಳು, ತಲೆದೂಗಿ ಹಾಡುತ್ತಿವೆ.

೫. ವಿಜ್ಞಾನವು ಅಜ್ಞಾನವನ್ನು ಗೆಲ್ಲುವ ಹಾಡು, ಹೊಸ ಭಾರತ ನಿರ್ಮಾಣ ಸಾಗಿದೆ ಈ ಸಾಲುಗಳ ಅರ್ಥ ___________

ಅ) ಅಜ್ಞಾನವು ವಿಜ್ಞಾನವನ್ನು ಗೆಲ್ಲುತ್ತದೆ. ಅದರಿಂದ ಹೊಸ ಭಾರತ ನಿರ್ಮಾಣವಾಗುತ್ತದೆ.

© KTBS NOT TO BE REPUBLISHED

ಆ) ವಿಜ್ಞಾನವು ಅಜ್ಞಾನವನ್ನು ಗೆದ್ದು, ಹೊಸ ಭಾರತದ ನಿರ್ಮಾಣ ಕೈಗೊಂಡಿದೆ.

ಇ) ಹೊಸ ಭಾರತ ನಿರ್ಮಾಣವು ಅಜ್ಞಾನವನ್ನು ಗೆಲ್ಲುತ್ತದೆ.

ಈ) ಹೊಸ ಭಾರತ ನಿರ್ಮಾಣವು ವಿಜ್ಞಾನವನ್ನು ಗೆಲ್ಲುತ್ತದೆ.

ಅಭ್ಯಾಸ ಚಟುವಟಿಕೆ

ಈ. ದೇಶಭಕ್ತಿ ಗೀತೆಗಳನ್ನು ಸಂಗ್ರಹ ಮಾಡಿರಿ.

೧. ಸಾರೆ ಜಹಾಂಸೆ ಅಚ್ಛಾ

೨. ವಂದೇ ಮಾತರಂ ಗೀತೆ

೩. ಶಂಗು ಬಿರಾದಾರ ಅವರ 'ನಾವು ಎಳೆಯರು ನಾವು ಗೆಳೆಯರು'

೪. ಕುವೆಂಪು ರವರ 'ಜಯ ಭಾರತ ಜನನಿಯ ತನುಜಾತೆ'

ಭಾಷಾಭ್ಯಾಸ

ಉ. ಈ ಪದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬರೆಯಿರಿ.

೧. ಭಾರತ :

೨. ಸನ್ನಿಧಾನ :

೩. ಆಗರ :

೪. ತಲೆದೂಗು :

೫. ನಿರ್ಮಾಣ :

@ KTBS NOT TO BE REPUBLISHED

ಊ) "ಈ ಮಣ್ಣು ನಮ್ಮದು" ಕವಿತೆಯಲ್ಲಿರುವ ಪ್ರಾಸ ಪದಗಳನ್ನು ಗಮನಿಸಿ ಓದಿರಿ.

ಆಗರ – ಸಾಗರ

ಹಾಡು – ಜಾಡು

೫. ಈ ವಾಕ್ಯಗಳನ್ನು ಗಮನಿಸಿ ಓದಿರಿ.

೧. ಕಲಕಲ, ಸರಸರ, ಕಣಕಣ, ಬೌ ಬೌ, ಕಾ ಕಾ ಇವು ಎರಡೆರಡು ಸಲ ಪ್ರಯೋಗವಾಗಿ ವಿಶೇಷ ಅರ್ಥ ನೀಡುತ್ತವೆ.

೨. ಯಾವುದೇ ವಸ್ತುವಿನ ಅತಿ ಸಣ್ಣ ಹಾಗೂ ಸೂಕ್ಷ್ಮ ಭಾಗಕ್ಕೆ ಕಣವೆನ್ನುತ್ತಾರೆ. ಅದು ಮಣ್ಣಿನ ಕಣವಾಗಿರಬಹುದು. ರಕ್ತದ ಕಣವೂ ಆಗಿರಬಹುದು. ನಮ್ಮ ರಕ್ತದ ಕಣಕಣದಲ್ಲೂ ಭಾರತೀಯತೆ ತುಂಬಿದೆ.

೩. ಹಾವು ಸರಸರನೆ ಹರಿಯುತ್ತದೆ.

೪. ಕಾಗೆ ಕಾ..ಕಾ.. ಎಂದು ಕೂಗಿತು.

೫. ನಾಯಿ ಬೌ ಬೌ ಬೊಗಳಿತು.

ಮಾದರಿಯಂತೆ ಯಾವುದರ ಧ್ವನಿ ತಿಳಿಸಿ ಬರೆಯಿರಿ.

ಧ್ವನಿ	ಯಾವುದರ ಧ್ವನಿ
ಮಾದರಿ : ಕಲ ಕಲ	– ನದಿ ಹರಿಯುವಾಗ ಉಂಟಾಗುವ ಸಪ್ಪಳ
ಸರ ಸರ	________________
ಡಿಶುಂ ಡಿಶೂಂ	________________
ಪಟ ಪಟ	________________
ಲಟ ಲಟ	________________
ಮ್ಯಾಂವ್ ಮ್ಯಾಂವ್	________________
ಪರ ಪರ	________________

@ KTBS NOT TO BE REPUBLISHED

ಭಾಷಾ ಚಟುವಟಿಕೆ

ಈ ಹಾಡನ್ನು ಎಲ್ಲರೂ ಕೂಡಿ ಹಾಡಿರಿ

ನನ್ನ ದೇಶ ನನ್ನ ಜನ

ನನ್ನ ದೇಶ ನನ್ನ ಜನ
ನನ್ನ ಮಾನ ಪ್ರಾಣ ಘನ
ತೀರಿಸುವೆನೆ ಅದರ ಋಣ
ಈ ಒಂದೇ ಜನ್ಮದಿ ?

ಕೆಂಪು ನೆಲದ ಹಸಿರು ಬೆಳೆ
ಕಪ್ಪು ಬಣ್ಣ ಮೊಗದ ಕಳೆ
ಸೂರ್ಯ ಚಂದ್ರ ಚುಕ್ಕಿಗಳೆ
ನಮ್ಮ ಹಿರಿಯ ಒಕ್ಕಲು.

ನೂರು ಭಾವ, ಭಾಷೆ ನೆಲೆ
ನೂರು ಬಣ್ಣ ವೇಷ ಕಲೆ
ಸ್ವಚ್ಛಂದದ ಹಕ್ಕಿಗಳೆ
ನಮ್ಮ ಹಾಡು ಬದುಕಲು

ಪ್ರಾಚೀನವ ತಿಕ್ಕಿ ತೊಳೆ
ವರ್ತಮಾನ ಜೀವಕಳೆ
ಉಕ್ಕೇರಲಿ ಬಾಳ ಹೊಳೆ
ಆ ಭವಿಷ್ಯದೊಡಲಿಗೆ

ಮೈ ಕೊಡವಿದೆ ಮೂಕ ಜನ
ಕೈ ಹಿಡಿಯಿರಿ ನಾಕು ಚಣ
ಎದ್ದೇಳಲಿ ಎಲ್ಲ ಗುಣ
ಆ ಸಮೃದ್ಧ ಬಾಳಿಗೆ

– ಚೆನ್ನವೀರ ಕಣವಿ

© KTBS NOT TO BE REPUBLISHED

ಈ. ಪ್ರಶ್ನೆಗಳಿಗೆ ಉತ್ತರಿಸಿರಿ.

೧. ಒಂದೇ ಜನ್ಮದಲ್ಲಿ ಯಾವ ಋಣ ತೀರಿಸಲು ಸಾಧ್ಯವಿಲ್ಲ?

೨. ನಮ್ಮ ಹಿರಿಯ ಒಕ್ಕಲು ಯಾವುದು?

೩. ಭಾಷೆಯಲ್ಲಿ ಎಷ್ಟು ಭಾವಗಳಿವೆ ಎಂದು ಕವಿ ಹೇಳುತ್ತಾರೆ?

೪. ಜೀವಕಳೆ ಯಾವುದು?

೫. ಮೂಕಜನ ಏನು ಮಾಡಿದೆ?

ಉ. ಒಗಟನ್ನು ಬಿಡಿಸಿ.

1. ಕಟ್ಟೆಯ ಮೇಲೆ ಕಟ್ಟೆ
ಅದರ ಮೇಲೊಂದು ಕಂಬ
ಕಂಬದ ಮೇಲೆ ಎರಡು ದೀಪ
ದೀಪದ ಮೇಲೊಂದು ಕಟ್ಟೆ
ಕಟ್ಟೆಯ ಮೇಲೆ ಹುಲ್ಲು
ಅದೇನೆಂದು ಹೇಳುವಿರಾ?

2. ಜುಳು ಜುಳು ಹರಿಯುತ
ಬಳುಕುತ ಬಾಗುತ
ಬೀಳುತ ಏಳುತ
ನೆಲವನು ತೊಯ್ಯುವ
ತಂಪನು ತರುವ
ಹೊನಲಾಗಿರುವ ನಾನು ಯಾರು?

3. ಕಾಡನು ಸುತ್ತುತ
ಹುಲ್ಲನು ಮೇಯುತ
ಹಾಲನು ನೀಡುತ
ರೈತನ ಹರಸುತ
ನಿಂತವರಾರು?

ಸುಳಿವು : ಆಕಳು , ನದಿ, ಮುಖ

ಊ. ಪದಗಳನ್ನು ನಕಲು ಮಾಡು

ವಿಜ್ಞಾನ	ಅಜ್ಞಾನ	ತಂಗಾಳಿ	ಹೃದಯ
....	....	....	....
....	....	....	....
....	....	....	....
....	....	....	....
....	....	....	....
ಸನ್ನಿಧಾನ	ಕ್ರೈಸ್ತ	ಮುಸಲ್ಮಾನ	ನಿರ್ಮಾಣ
....	....	....	....
....	....	....	....
....	....	....	....
....	....	....	....

@ KTBS NOT TO BE REPUBLISHED

ಪಾಠ ೨


ಕೂಗುತಿದೆ ಪಕ್ಷಿ

ಪಾಠ ಪ್ರವೇಶ :

ಒಂದು ಸುಂದರ ಕಾಡು. ಅಲ್ಲೊಂದು ಮೊಲ ಬೇಟೆಗಾರನ ಬಲೆಯಲ್ಲಿ ಸಿಲುಕಿ ವಿಲವಿಲ ಒದ್ದಾಡುತ್ತಿದೆ. ಈಗ ನೀವೇನು ಮಾಡುತ್ತೀರಿ ? ಚರ್ಚಿಸಿರಿ.

ಶಾಲಾ ಮೈದಾನದಲ್ಲಿ ಹುಡುಗನೊಬ್ಬ ಬಿದ್ದಿದ್ದಾನೆ. ಕಾಲಿನ ಚರ್ಮ ಕಿತ್ತು ರಕ್ತ ಸೋರಿ ಬಂದಿದೆ. ಆಗ ನೀವೇನು ಮಾಡಬಹುದು? ಹಾಗೇಕೆ ಮಾಡುತ್ತೀರಿ? ತಿಳಿಸಿ.

ಇಂತಹ ಸಹಾಯ ಮನೋಭಾವ, ಪರಿಸರ ಪ್ರೇಮ, ಸಹಜೀವನ, ದೇಶಪ್ರೇಮದ ಭಾವನಾತ್ಮಕ ಬದುಕು ಈ ಪಾಠದಲ್ಲಿ ಗರಿಗೆದರಿ ನಿಂತಿದೆ. ಇಲ್ಲಿ ಪಕ್ಷಿಗಳು ಮರವನ್ನು ಪ್ರೀತಿಸುವ ಪರಿಯನ್ನು ಓದಿ ನೋಡಿ !



NOT TO BE REPUBLISHED

ಕೃಷ್ಣೆ ಮೈದುಂಬಿ ಹರಿಯುತ್ತಿದ್ದಾಳೆ. ಅವಳ ಭೋರ್ಗರೆತ, ತೂರಾಟ, ಚೆಲ್ಲಾಟ, ಹರಿಯುವ ಓಟ ನಯನ ಮನೋಹರ. ಬೆಳ್ನನೆಯ ನೊರೆ ಬಲು ಚೆಂದ. ಸುಳಿಗಳಲ್ಲಿ ಸುತ್ತುವ ನೀರಿನ ಸೊಬಗೇ ಸೊಬಗು. ಬೆಳಗಿನ ಎಳೆ ಬಿಸಿಲಿನ ಹೊಳಪಿಗೆ ಮಿನಮಿನ ಮಿರುಗುವ ನದಿ ಬಲು ಅಂದ. ಸೂರ್ಯನ ಹೊಂಬಣ್ಣದ ಕಿರಣಗಳು ನದಿಯ ಮೇಲೆ ಬಿದ್ದಿವೆ. ಅಲ್ಲಿ ಹನಿ ಹನಿಗೂ ಮುತ್ತಿನ ಮಣಿಯ ರೂಪು. ಅಬ್ಬಬ್ಬಾ ! ಅದೆಷ್ಟು ಸುಂದರ.

ಈ ಕೃಷ್ಣಾ ನದಿಯಲ್ಲಿ ಹಲವಾರು ನಡುಗಡ್ಡೆಗಳಿವೆ. ಅವುಗಳಲ್ಲಿ ಸುಂದರವಾದ ಗಡ್ಡೆ 'ನಾರದ ಗಡ್ಡೆ'. ಅದು ರಾಯಚೂರು ಸಮೀಪವಿದೆ. ಬಹಳ ಹಿಂದೆ ಇಲ್ಲಿ ನಾರದ ಮುನಿ ತಪಸ್ಸು ಮಾಡಿದ್ದರೆಂಬ ಪ್ರತೀತಿ. ಇಲ್ಲೊಂದು ಶಿವದೇವಾಲಯವೂ ಇದೆ. ಸದಾ ಹಚ್ಚಹಸುರಿನಿಂದ ಕೂಡಿ, ಗಿಡ ಮರಗಳಿಂದ ಕಂಗೊಳಿಸುತ್ತಿದೆ.

ಈ ನಡುಗಡ್ಡೆ ಪ್ರವಾಸಿ ತಾಣವೂ ಹೌದು. ಈ ಸುಂದರ ತಾಣವನ್ನು ನೋಡಲು ಮಕ್ಕಳು ಪ್ರವಾಸ ಹೊರಟಿದ್ದರು.

ಕುಹೂ ಕುಹೂ ಹಕ್ಕಿಗಳ ಕಲರವ ಕಿವಿಗೆ ಇಂಪಾಗಿತ್ತು. ಮನಕೆ ತಂಪೆರೆಯುತ್ತಿತ್ತು. ಚಿಲಿಪಿಲಿ ಹಕ್ಕಿಗಳ ಇಂಚರ ಸಂಗೀತಮಯ.

ಮಕ್ಕಳು ಈ ಸುಂದರ ತಾಣದ ಸವಿ ಉಣ್ಣುತ್ತಿದ್ದರು. ಇದಕ್ಕಿದ್ದಂತೆ ಹಕ್ಕಿಯೊಂದರ ನೋವಿನ ಕೂಗು ಕೇಳಿಸಿತು. ಅತ್ತ ತಿರುಗಿ ನೋಡಿದಾಗ ಅನೇಕ ಟೊಂಗೆಗಳನ್ನು ಹರಡಿಕೊಂಡಿರುವ ಬೋಳುಮರ. ಎಲೆಗಳಿಲ್ಲದ, ಹೂಗಳಿಲ್ಲದ, ಹಣ್ಣುಕಾಯಿಗಳಿಲ್ಲದ ಒಣಗುತ್ತಿರುವ ಮರ. ಅದರೊಳಗೆ ಕುಳಿತ ಪಕ್ಷಿಯೊಂದು ನೋವಿನಿಂದ ಕೂಗುತ್ತಿತ್ತು. ಮಕ್ಕಳು ಕುತೂಹಲದಿಂದ ಆ ಮರದ ಬಳಿ ತೆರಳಿದರು.

'ಏ! ಸುಂದರ ಪಕ್ಷಿಯೇ, ಎಲ್ಲರೂ ಸಂತೋಷದಿಂದ ಇದ್ದಾರೆ. ನೀನೇಕೆ ನೋವಿನಿಂದ ಕೂಗುತ್ತಿದ್ದೀಯಾ? ಏನದು ನಿನ್ನ ಅಳಲು?' ಎಂದು ಗಣೇಶ ಪಕ್ಷಿಯನ್ನು ಪ್ರಶ್ನಿಸಿದನು.

'ಅಣ್ಣಾ! ನೋಡಿಲ್ಲಿ ನನ್ನ ಮರವನ್ನು. ಎಲೆಗಳೆಲ್ಲಾ ಉದುರಿಹೋಗಿವೆ. ಟೊಂಗೆಗಳು ಬೋಳಾಗಿವೆ. ಶಕ್ತಿಯಿಲ್ಲದೆ ಮರ ಸೊರಗಿದೆ. ಆಗಲೋ ಈಗಲೋ ಬೀಳುವಂತಿದೆ' ಎಂದಿತು ಪಕ್ಷಿ.

'ಹೌದೌದು ! ಅದರಿಂದ ನಿನಗೇನು ತೊಂದರೆ?' ಜೂಲಿ ಪಕ್ಷಿಯನ್ನು ಪ್ರಶ್ನಿಸಿದಳು.

"ಹಿಂದೆ ಈ ಮರವನ್ನು ನೀನು ನೋಡಿದ್ದೆಯಾ? ಆಗ ಏನಿದರ ಸೊಬಗು! ಮರದ ತುಂಬಾ ಹಸಿರೆಲೆಗಳು. ಟೊಂಗೆ ಟೊಂಗೆಗೂ ಹೂ, ಹಣ್ಣು ಸಾವಿರಾರು. ತಂಪಾದ ನೆರಳು ಮನೆ ಮಾಡಿತ್ತು. ನೂರಾರು ಪಕ್ಷಿಗಳಿಗೆ ಆಶ್ರಯ ತಾಣವಾಗಿತ್ತು. ಅದೇನು ಕಾರಣವೊ ತಿಳಿಯದು. ಎಲೆಗಳೆಲ್ಲ ಒಮ್ಮಿಂದೊಮ್ಮೆಲೆ ಉದುರಲು ಆರಂಭಿಸಿದವು. ಮತ್ತೆ ಚಿಗುರೊಡೆಯಲಿಲ್ಲ, ಮರ ಬಣ್ಣಗೆಟ್ಟಿತು, ಸೊರಗಿತು. ಈಗ ಒಣಗುತ್ತಿದೆ" ಎಂದಿತು ಪಕ್ಷಿ.

'ನಿನಗೆ ಈ ಮರದ ಮೇಲೆ ಅಷ್ಟೊಂದು ಪ್ರೀತಿಯೇ? ಏಕೆ?' ಎಂದು ಲತಾ ಪ್ರಶ್ನಿಸಿದಳು.

"ನನ್ನ ಅಜ್ಜ – ಅಜ್ಜಿ , ಅಪ್ಪ – ಅಮ್ಮ, ಅಣ್ಣ–ತಮ್ಮ, ಅಕ್ಕ– ತಂಗಿ ಎಲ್ಲರೂ ಇಲ್ಲಿಯೇ ಹುಟ್ಟಿ ಬೆಳೆದರು. ನಾನೂ ಇಲ್ಲಿಯೇ ಜನ್ಮ ತಳೆದೆ. ಆದರೆ .... ಈ ಮರ ಈಗ ಸಾಯಲು ಸಿದ್ಧವಾದಂತಿದೆ.

© KTBS NOT TO BE REPUBLISHED

ಹಾಗೇನಾದರೂ ಆದರೆ ನನಗೆ ತಾಣವೆಲ್ಲಿದೆ?" ಎಂದು ನೋವಿನಿಂದ ಉಸುರಿತು. ಪಕ್ಷಿಯ ಈ ಮಾತು ಕೇಳಿ ಮಕ್ಕಳಿಗೆ ಕನಿಕರ ಉಂಟಾಯಿತು. ಪಕ್ಷಿಯ ನೋವನ್ನು ಅರ್ಥಮಾಡಿಕೊಂಡರು. ಅದನ್ನು ಹೋಗಲಾಡಿಸುವ ಬಗ್ಗೆ ವಿಚಾರ ಮಾಡಿದರು.

ಪಕ್ಷಿಯು ಈ ಮರದ ಬಗ್ಗೆ ಹೊಂದಿರುವ ಭಾವುಕತೆ, ಅಭಿಮಾನದ ಬಗ್ಗೆ ಅಚ್ಚರಿ ಉಂಟಾಗುತ್ತಿದೆ ಎಂದನು ಬಷೀರ್. ನಾವೆಲ್ಲ ಊರಿಗೆ ಹೋಗಿ ಸಸ್ಯ ವೈದ್ಯರನ್ನು ಕಾಣೋಣ. ಮರದ ಬಗ್ಗೆ ವಿವರಿಸೋಣ. ಸೂಕ್ತ ಚಿಕಿತ್ಸೆ ಕೊಡಿಸಿ ಮರವನ್ನು ಉಳಿಸೋಣ. **ಹಸಿರೇ ನಮ್ಮ ಉಸಿರು** ಎಂಬ ನಾಣ್ಣುಡಿಯನ್ನು ಎಲ್ಲೆಡೆ ಸಾರೋಣ ಎಂದಳು ದಿವ್ಯಾ.

ಎಲ್ಲ ಮಕ್ಕಳು ಊರಿಗೆ ಹಿಂದಿರುಗಿದರು. ಸಸ್ಯ ವೈದ್ಯರನ್ನು ಮರದ ಬಳಿಗೆ ಕರೆತಂದರು. ವೈದ್ಯರು ಮರವನ್ನು ಸಂಪೂರ್ಣವಾಗಿ ನೋಡಿದರು. ಟೊಂಗೆಯನ್ನು ಗಮನಿಸಿದರು. ಏನೇನೋ ವಿಚಾರಮಾಡಿ ಬೇರುಗಳಿಗೆ ಚುಚ್ಚುಮದ್ದು ನೀಡಿದರು. ಒಣಗಿದ ಭಾಗಕ್ಕೆ ಔಷಧಿ ಸವರಿದರು. ಮಕ್ಕಳು ವೈದ್ಯರ ಸಲಹೆಯಂತೆ ಮರದ ಬುಡಕ್ಕೆ ಗೊಬ್ಬರ ಹಾಕಿ ನೀರುಣಿಸಿದರು.

ಕೆಲವು ದಿನಗಳು ಕಳೆದವು. ಮಳೆಗಾಲ ಬಂತು. ಮರ ಚಿಗುರೊಡೆಯಿತು. ಎಲೆಗಳು ಮೈದಳೆದವು. ಟೊಂಗೆ ಟೊಂಗೆಗಳಲ್ಲಿ ಹೂಗಳು ರಾರಾಜಿಸಿದವು. ಹೀಚು, ಕಾಯಿ, ಹಣ್ಣುಗಳು ಜೀವತಳೆದವು. ಆ ಮರಕ್ಕೆ ನೂರಾರು ಹಕ್ಕಿಗಳು ಬಂದವು. ಪಕ್ಷಿಗಳ ಕಲರವ ತುಂಬಿತು.

ಮತ್ತೆ ಮಕ್ಕಳು ಪ್ರವಾಸಕ್ಕೆ ಬಂದರು. ಮರದ ಸೊಬಗು ಮಕ್ಕಳ ಮನಸ್ಸಿಗೆ ಉಲ್ಲಾಸ ತಂದಿತು. ಮಕ್ಕಳು ಕುಣಿದು ಕುಪ್ಪಳಿಸಿದರು. ಮಕ್ಕಳು ಮಾಡಿದ ಸತ್ಕಾರ್ಯವನ್ನು ಮೆಚ್ಚಿ ಪಕ್ಷಿಗಳು ಹಾಡಿದವು. ಮರವು ಮೆಲುಗಾಳಿಗೆ ಎಲೆಗಳನ್ನು ಅಲುಗಾಡಿಸಿ ಸಂಗೀತ ನೀಡಿತು. ಋಣ ತೀರಿಸಿತು. ಮಕ್ಕಳು ಹೋ ಎಂದು ಕೂಗಿದರು. **ಹಸಿರೇ ಉಸಿರು** ಎಂದರು.

ಓದಿ – ತಿಳಿ

ತೂರಾಟ – ತೂರುವ ಆಟ, ಮೇಲ ಮೇಲಕ್ಕೆ ಚಿಮ್ಮುವುದು. ಚೆಲ್ಲಾಟ– ವಿನೋದ, ವಿಲಾಸ. ನೊರೆ– ಬುರುಗು. ಮಿನಮಿನ–ಫಳ ಫಳ, ಮಿರುಗು– ಹೊಳೆಯುವುದು, ಇಂಚರ– ಇಂಪಾದ ದನಿ, ಮಧುರವಾದ ದನಿ, ಹೊಂಬಣ್ಣ– ಚಿನ್ನದ ಬಣ್ಣ, ಉಲ್ಲಾಸ– ಆನಂದ, ಲವಲವಿಕೆ. ಋಣ– ಸಾಲ, ಹಂಗು, ರಿಣ. ಅಳಲು– ಹೇಳಲಾಗದ ನೋವು, ಅತಿಯಾದ ದು:ಖ. ಸೊರಗು– ಬಾಡು, ಕ್ಷೀಣವಾಗು. ತಾಣ–ನೆಲೆ, ಜಾಗ. ಅಭಿಮಾನ– ಹೆಮ್ಮೆ, ಸವರು– ಹಚ್ಚು, ಲೇಪಿಸು. ಮೆಲುಗಾಳಿ– ತಂಪಾದಗಾಳಿ, ಮೆಲ್ಲಗೆ ತೀಡುವ ತಂಗಾಳಿ. ಸತ್ಕಾರ್ಯ– ಒಳ್ಳೆಯ ಕೆಲಸ.

© KTBS NOT TO BE REPUBLISHED

ಗಮನಿಸಿ – ತಿಳಿ

ಪ್ರತೀತಿ– ಪ್ರಸಿದ್ಧಿ, ಜನಜನಿತವಾಗಿ ಬಂದ ನಂಬಿಕೆ, ಸುಳಿ– ನದಿಯಲ್ಲಿ ನೀರು ವೃತ್ತಾಕಾರವಾಗಿ ಸುತ್ತುವ ರೀತಿ, ಕಂಗೊಳಿಸು– ಕಣ್ಣಿಗೆ ಅಂದವಾಗಿ ಕಾಣು, ತಂಪೆರೆ– ತೃಪ್ತಿ ನೀಡು. ನೀರುಣಿಸು– ನೀರು ಹಾಕು, ನೀರು ಹಾಯಿಸು. ಮೈದಳೆ– ಆಕಾರಹೊಂದು, ದೇಹ ಧರಿಸು. ರಾರಾಜಿಸು– ಪ್ರಕಾಶಿಸು, ಶೋಭಿಸು, ಮಿರುಗು, ಹೊಳೆಯುವುದು. ಜೀವತಳೆ–ಜೀವ ಪಡೆ, ಜೀವಹೊಂದು. ಬಣ್ಣಗೆಡು–ಕಳಾಹೀನವಾಗು, ಕಳೆಕುಂದು. ನಯನ ಮನೋಹರ– ಸುಂದರವಾದ, ಕಣ್ಣಿಗೆ ಹಬ್ಬವನ್ನುಂಟುಮಾಡುವ. ನಡುಗಡ್ಡೆ– ಸುತ್ತಲೂ ನೀರು ತುಂಬಿರುವ ಚಿಕ್ಕ ಭೂ ಪ್ರದೇಶ. ಪ್ರವಾಸಿ ತಾಣ– ಪ್ರವಾಸಿಗರು ಬರುವ ಜಾಗ, ಪ್ರವಾಸಕ್ಕೆ ಯೋಗ್ಯವಾದ ಸ್ಥಳ. ಬೋಳು ಮರ– ಎಲೆಗಳು ಸಂಪೂರ್ಣವಾಗಿ ಉದುರಿಹೋಗಿರುವ ಮರ. ಹಸಿರೇ ಉಸಿರು– ಇದೊಂದು ನಾಣ್ಣುಡಿ, ಮರಗಿಡಗಳನ್ನು ಬೆಳೆಸಬೇಕು. ಅವು ಜೀವನಾಧಾರ, ಅವುಗಳಿಂದ ಜೀವ ಜಗತ್ತಿಗೆ ಆಮ್ಲಜನಕ ದೊರೆಯುತ್ತದೆ.

ಅಭ್ಯಾಸ

ಅ. ಒಂದು ಸಾಲಿನಲ್ಲಿ ಅಥವಾ ಒಂದು ಪದದಲ್ಲಿ ಉತ್ತರಿಸಿರಿ.

೧. ಮಕ್ಕಳ ಕುತೂಹಲಕ್ಕೆ ಕಾರಣವೇನು?

೨. ಮಕ್ಕಳು ಏಕೆ ಕುಣಿದು ಕುಪ್ಪಳಿಸಿದರು?

೩. ಪಕ್ಷಿಯು ಸಂತೋಷದಿಂದ ಹಾಡಲು ಕಾರಣವೇನು?

೪. ಕೃಷ್ಣಾ ನದಿಯ ಓಟವು ಯಾವರೀತಿಯಲ್ಲಿ ನಯನ ಮನೋಹರವಾಗಿದೆ?

೫. ನಾರದಗಡ್ಡೆ ಎಂಬ ಹೆಸರು ಬರಲು ಕಾರಣವೇನು?

೬. ಬಷೀರನಿಗೆ ಏಕೆ ಅಚ್ಚರಿ ಉಂಟಾಯಿತು?

೭. ಮಕ್ಕಳು ಏನೆಂದು ತೀರ್ಮಾನಿಸಿದರು?

೮. ಪಕ್ಷಿಗಳು ಯಾವುದನ್ನು ಮೆಚ್ಚಿ ಹಾಡು ಹಾಡಿದವು?

೯. ಮರ ಹೇಗೆ ಋಣ ತೀರಿಸಿತು?

ಆ. ಎರಡು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಪಕ್ಷಿಗೆ ಮರದ ಮೇಲೆ ಪ್ರೀತಿ ಬೆಳೆಯಲು ಕಾರಣವೇನು?

೨. ಬೋಳಾಗುವುದಕ್ಕೆ ಮೊದಲು ಮರದ ಸೊಬಗು ಹೇಗಿತ್ತು? ವಿವರಿಸಿರಿ.

೩. ನಾರದಗಡ್ಡೆಯನ್ನು ವರ್ಣಿಸಿ.

೪. ಸಸ್ಯ ವೈದ್ಯರು ಮರವನ್ನು ಹೇಗೆ ಉಪಚರಿಸಿದರು?

© KTBS NOT TO BE REPUBLISHED

ಇ. ಯಾರು ಯಾರಿಗೆ ಹೇಳಿದರು?

೧. 'ನೀನೇಕೆ ನೋವಿನಿಂದ ಕೂಗುತ್ತಿದ್ದಿಯಾ' ?

೨. 'ಈ ಮರದ ಮೇಲೆ ಅಷ್ಟೊಂದು ಪ್ರೀತಿಯೇ?'

೩. 'ನಾನೂ ಇಲ್ಲಿಯೇ ಜನ್ಮ ತಳೆದೆ'

ಈ. ಬಿಟ್ಟ ಸ್ಥಳ ತುಂಬಿರಿ.

೧. ಎಳೆ ಬಿಸಿಲಿನ ಹೊಳಪಿಗೆ .... ಮಿರುಗುವ ನದಿ ಬಲು ಅಂದ.

೨. ಹಕ್ಕಿಗಳ .... ಕಿವಿಗೆ ಇಂಪಾಗಿತ್ತು.

೩. ಮರವು ನೂರಾರು ಪಕ್ಷಿಗಳಿಗೆ ....ವಾಗಿತ್ತು.

೪. ಹಸಿರೇ .... ಎಂದು ಎಲ್ಲೆಡೆ ಸಾರೋಣ

ಉ. ಧ್ವನಿಪೂರ್ಣವಾಗಿ ಉತ್ತರಿಸಿರಿ. ಉಂಟಾಗುವ ಮುಖ್ಯ ಭಾವಗಳನ್ನು ಅನುಭವಿಸಿರಿ.

೧. ನನಗೆಲ್ಲಿದೆ ತಾಣ?

೨. ಹುಟ್ಟಿ ಬೆಳೆದ ಭೂಮಿಯನ್ನು ಪ್ರೀತಿಸು, ಗೌರವಿಸು, ಕಾಪಾಡು

೩. ದೇಶ ನನ್ನದು ಎನ್ನದ ಎದೆ ಸುಡುಗಾಡು.

ಊ. ಎರಡು ಅಥವಾ ಮೂರು ವಾಕ್ಯಗಳಲ್ಲಿ ವಿವರಿಸಿರಿ.

ಅ) ಕೃಷ್ಣೆ ಹರಿಯುವ ಬಗೆಯನ್ನು ತಿಳಿಸಿರಿ?

ಉ: ________________________________

____

____

ಆ) ಪಕ್ಷಿ ಅನುಭವಿಸುವ ನೋವನ್ನು ತಿಳಿಸಿರಿ?

ಉ: ________________________________

____

____

© KTBS NOT TO BE REPUBLISHED

ಅಭ್ಯಾಸ ಚಟುವಟಿಕೆ

ಅ. ಕಥೆ





ಆಮೆ–ಮೊಲ ಓಟದ ಸ್ಪರ್ಧೆ.

ಮಕ್ಕಳು ಮೊಲ ಮತ್ತು ಆಮೆ ಆಟ ಆಡಲಿ.

ಮೊಲ ಚುರುಕು ಪ್ರಾಣಿ. ಆಮೆಗಿಂತ ಹೆಚ್ಚು ವೇಗದಲ್ಲಿ ಅದರ ಓಟ. ಆಮೆ ಮೆಲ್ಲಗೆ ನಡೆಯುವುದು. ಇಬ್ಬರಲ್ಲಿಯೂ ಓಟದ ಸ್ಪರ್ಧೆ. ಮೊಲ ನಾನು ಸ್ಪರ್ಧೆಯಲ್ಲಿ ಗೆಲ್ಲುವೆ. ವಿಶ್ರಾಂತಿಪಡೆದು ಹೋದರೆ ನಡೆದೀತು ಎಂದು ಮಲಗುತ್ತದೆ. ಆಮೆ ಸತತ ನಡೆದು ಗುರಿ ಮುಟ್ಟುತ್ತದೆ. ಮಲಗಿದ ಮೊಲ ಸೋಲುತ್ತದೆ.

ಆಮೆ ಮತ್ತು ಮೊಲದ ಸಂಭಾಷಣೆ ಹೇಳಿರಿ.

ಸಂಭಾಷಣೆಯನ್ನು ಮಾಡಲು ಸುಳಿವುಗಳು:

೧. ಮೊಲ ಮತ್ತು ಆಮೆಯ ಮಾತುಗಳು. ಅವುಗಳ ಮಧ್ಯ ಸ್ಪರ್ಧೆ ಏರ್ಪಡುವ ವಿಚಾರ.

೨. ತಾವು ವೇಗವಾಗಿ ಹೋಗುವವೆಂದು ಹೇಳಿ, ಪಂದ್ಯ ಕಟ್ಟಿಕೊಂಡರು.

೩. ವೇಗವಾಗಿ ಹೋಗುವ ಮೊಲ ವಿಶ್ರಾಂತಿಗಾಗಿ ಹುಲ್ಲಿನ ಹಾಸಿಗೆಯ ಮೇಲೆ ಮಲಗುವುದು.

೪. ಸತತವಾಗಿ ಎಲ್ಲೂ ನಿಲ್ಲದೆ ಆಮೆ ಓಡಿ ಓಟದಲ್ಲಿ ಗೆದ್ದುದು.

© KTBS NOT TO BE REPUBLISHED

ಭಾಷಾಭ್ಯಾಸ

ಅ) ಈ ಪದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿರಿ.

ಇಂಚರ : ______________________________

ಕಂಗೊಳಿಸು : ______________________________

ಬಣ್ಣಗೆಡು : ______________________________

ಪ್ರವಾಸ : ______________________________

ಸವರು : ______________________________

ಅ. ಹೊಗಳಿಕೆಗೆ ಉಬ್ಬಬೇಡ ಎಂಬ ನಾಣ್ನುಡಿಗೆ ಸೂಕ್ತ ಕಥೆ ಹೇಳುತ್ತಾ ಅಭಿನಯಿಸಿರಿ.

ಸುಳಿವುಗಳು : ಕಾಗೆಯೊಂದು ಮಾಂಸದ ತುಂಡು ಕಚ್ಚಿಕೊಂಡು ಮರದ ಮೇಲೆ ಇತ್ತು. ನರಿ ಅದರ ಹಾಡನ್ನು ವರ್ಣಿಸಿ ಹಾಡಲು ಹೇಳುವುದು. ಕಾಗೆ ಹಾಡಲು ಬಾಯಿ ತೆರೆದಾಗ ಮಾಂಸದ ತುಂಡು ನೆಲಕ್ಕೆ ಬಿದ್ದು ನರಿ ಪಾಲಾಗುವ ಕಥೆ ಅಭಿನಯಿಸಿ.

© KTBS NOT TO BE REPUBLISHED

ಆ. ನೀವು ನೋಡಿದ ತುಂಬಿದ ಹಳ್ಳ, ನೆರೆ ಬಂದ ಹೊಳೆ, ಅಥವಾ ಸಮುದ್ರದ ಉಬ್ಬರವಿಳಿತ ಯಾವುದಾದರೊಂದರ ಬಗ್ಗೆ ನಾಲ್ಕು ವಾಕ್ಯಗಳಲ್ಲಿ ವರ್ಣಿಸಿ.

ಇ. ಗೆರೆ ಹಾಕಿದ ಪದಗಳ ಬದಲಾಗಿ ವಿವರಣೆ ವಾಕ್ಯ ಬರೆಯಿರಿ.

ಮಾದರಿ: ಆ ವನವು ಗಿಡ ಮರಗಳಿಂದ <u>ಕಂಗೊಳಿಸುತ್ತಿದೆ</u>

ಆ ವನವು ಗಿಡಮರಗಳಿಂದ ಅಂದವಾಗಿ ಕಾಣುತ್ತಿದೆ.

೧. ಅವನ ಮುಖ <u>ಬಣ್ಣಗೆಟ್ಟಿತ್ತು.</u>

____

೨. ಸುಳಿಗಳಲ್ಲಿ ಸುತ್ತುವ ನೀರಿನ <u>ಸೊಬಗೇ ಸೊಬಗು</u>

____

೩.   ಟೊಂಗೆ ಟೊಂಗೆಗಳಲ್ಲಿ ಹೂ ರಾರಾಜಿಸಿದವು.

____

೪.   ಆ ಮರದಲ್ಲಿ ಹೀಚು ಕಾಯಿ ಹಣ್ಣುಗಳು ಜೀವತಳೆದವು.

____

ಈ.   ಇವುಗಳನ್ನು ತಿಳಿ.

ಅ. ಆ. ಇ. ಈ. ಉ. ಊ. ಋ. ಎ. ಏ. ಐ. ಒ .ಓ. ಔ.

ಇವು ಹದಿಮೂರು ಸ್ವರಾಕ್ಷರಗಳು

ಅ .ಇ. ಉ. ಋ. ಎ. ಒ. ಇವು ಹ್ರಸ್ವ ಸ್ವರಗಳು.

ಆ. ಈ. ಊ. ಏ. ಐ. ಓ. ಔ ಇವು ದೀರ್ಘ ಸ್ವರಗಳು.

ಅನುಸ್ವಾರ ಂ ವಿಸರ್ಗ ಃ ಇವು ಎರಡು ಯೋಗವಾಹಗಳು

ಕ್ ಖ್ ಗ್ ಘ್ ಙ್

ಚ್ ಛ್ ಜ್ ಝ್ ಞ್

ಟ್ ಠ್ ಡ್ ಢ್ ಣ್

ತ್ ಥ್ ದ್ ಧ್ ನ್

ಪ್ ಫ್ ಬ್ ಭ್ ಮ್ ಇವು (ಇಪ್ಪತ್ತೈದು) ವರ್ಗೀಯ ವ್ಯಂಜನಗಳು

ಯ್ ರ್ ಲ್ ವ್ ಶ್ ಷ್ ಸ್ ಹ್ ಳ್ ಇವು (ಒಂಬತ್ತು) ಅವರ್ಗೀಯ ವ್ಯಂಜನಗಳು

@ KTBS
NOT TO BE REPUBLISHED

ಉ.   ಈ ಪದಗಳಲ್ಲಿ ಸ್ವರಾಕ್ಷರ ಗುರುತಿಸಿ ಬರೆಯಿರಿ.

ಅಬ್ದುಲ್	ಇಲಿ	ಊರು	ಓತಿಕಾಟ	ಐರಾವತ
______	______	______	______	______

ಊ. ಅನುಸ್ವಾರ ಹೊಂದಿದ ಪದಗಳಿಗೆ ☐ ದಿಂದ ಗುರುತಿಸಿ ಹಾಗೂ ವಿಸರ್ಗ ಪದಗಳನ್ನು ◯ ದಿಂದ ಗುರುತಿಸಿರಿ.

ಮಾದರಿ: ಬಂಧನ – ದು:ಖ

ತತ್ವಶಃ, ಕಂಬನಿ, ಒಂದು ಭಾಗಶಃ, ಅಂತಃಪುರ, ಮಂಗ.

ಋ. ಇವುಗಳನ್ನು ಓದಿ ತಿಳಿಯಿರಿ.

ಕ್	+	ಅ	=	ಕ	ಕ್	+	ಏ	=	ಕೇ
ಕ್	+	ಆ	=	ಕಾ	ಕ್	+	ಐ	=	ಕೈ
ಕ್	+	ಇ	=	ಕಿ	ಕ್	+	ಒ	=	ಕೊ
ಕ್	+	ಈ	=	ಕೀ	ಕ್	+	ಓ	=	ಕೋ
ಕ್	+	ಉ	=	ಕು	ಕ್	+	ಔ	=	ಕೌ
ಕ್	+	ಊ	=	ಕೂ	ಕ್	+	ಅಂ	=	ಕಂ
ಕ್	+	ಎ	=	ಕೆ	ಕ್	+	ಅಃ	=	ಕಃ

@ KTBS NOT TO BE REPUBLISHED

ಭಾಷಾ ಚಟುವಟಿಕೆ

ಆನೆಯ ಕನಸು

ಒಂದು ದೊಡ್ಡ ಕಾಡಿನಲ್ಲಿ
ಆನೆಯೊಂದು ಇದ್ದಿತು ||
ರಾಜನಾಗಬೇಕು ಎಂದು
ತಾನು ಕನಸು ಕಂಡಿತು ||೧||

ಸಿಂಹವನ್ನು ಸೋಲಿಸಿ
ಗೆದ್ದೆನೆಂದು ಕೊಂಡಿತು
ಕಾನನದೊಳು ಸಭೆಯ ಕರೆದು
ಆಜ್ಞೆಯೊಂದು ಮಾಡಿತು || ೨ ||

ನರಿಯನು ಮಂತ್ರಿ ಮಾಡಿ
ಕಿರುನೋಟವ ಬೀರಿತು ॥
ಸಿಂಹ ತಾನು ತಲೆಯಬಾಗೆ
ಜಂಬದಿಂದ ಬೀಗಿತು ॥ ೩॥

ಚಾಮರವನು ಬೀಸಲೆಂದು
ನವಿಲನ್ನು ಕರೆಯಿತು ॥
ಎಲ್ಲರನ್ನು ಗೆದ್ದೆನೆಂದು
ದರ್ಪದಿಂದ ಮೆರೆಯಿತು ॥ ೪ ॥

ಸದ್ದು ಕೇಳಿ ಕಣ್ಣು ತೆರೆಯೆ
ಸಿಂಹ ಎದುರುಗಿದ್ದಿತು ॥
ರಾಜನನ್ನು ಎದುರು ಕಂಡು
ಹೆದರಿ ಆನೆ ಓಡಿತು ॥ ೫॥

–ಕೆ. ಗೀತಾಲಕ್ಷ್ಮಿ

ಸೂಚನೆ :

ಈ ಹಾಡನ್ನು ಎಲ್ಲರೂ ಕೂಡಿ ಹಾಡಿರಿ.

ಈ ಕವಿತೆ ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

೧. ರಾಜನಾಗುವ ಕನಸು ಕಂಡ ಪ್ರಾಣಿ ಯಾವುದು?
೨. ಆನೆಯು ಯಾರನ್ನು ಸೋಲಿಸಿದೆನೆಂದು ಜಂಬ ಪಟ್ಟಿತು?
೩. ಆನೆಯು ನರಿಯ ಕಡೆ ಎಂತಹ ನೋಟ ಬೀರಿತು?
೪. ಚಾಮರವನ್ನು ಬೀಸಿದ ಪಕ್ಷಿ ಯಾವುದು?
೫. ಆನೆ ಹೆದರಿ ಓಡಲು ಕಾರಣವೇನು?

ಈ ಪದಗಳನ್ನು ಹೇಳುತ್ತ ನೋಡಿ ಬರೆಯಿರಿ.

ಕೃಷ್ಣೆ	ಭೋರ್ಗರೆತ	ತೂರಾಟ	ಚೆಲ್ಲಾಟ
....	....	....	....
....	....	....	....
....	....	....	....
....	....	....	....
....	....	....	....

© KTBS NOT TO BE REPUBLISHED

ನಡುಗಡ್ಡೆ	ಪಕ್ಷಿಗಳು	ಭಾವುಕತೆ	ಅಭಿಮಾನ
....	....	....	....
....	....	....	....
....	....	....	....
....	....	....	....
....	....	....	....
ಸಂಪೂರ್ಣ	**ಸಸ್ಯವೈದ್ಯ**	**ಸತ್ಕಾರ್ಯ**	**ಸನ್ನಿವೇಶ**
....	....	....	....
....	....	....	....
....	....	....	....
....	....	....	....

@ KTBS
NOT TO BE REPUBLISHED

✤ ✤ ✤

ಪಾಠ ೩

ವೀರರಾಣಿ ಕೆಳದಿ ಚೆನ್ನಮ್ಮ

ಪಾಠ ಪ್ರವೇಶ :

1. ಮಕ್ಕಳೆ, ನಮ್ಮ ದೇಶದಲ್ಲಿ ಕಿತ್ತೂರು ಚೆನ್ನಮ್ಮ, ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಮೊದಲಾದವರನ್ನು ನಾವು ಆಗಾಗ ನೆನೆಯುತ್ತೇವೆ. ಏಕೆ? ಚರ್ಚಿಸಿರಿ

2. ಕರ್ನಾಟಕದಲ್ಲಿ ನೃತ್ಯ, ಸಂಗೀತ, ಪ್ರಜಾರಕ್ಷಣೆಗಾಗಿ ಪ್ರಸಿದ್ಧಿ ಪಡೆದ ಮಹಿಳೆಯರ ಪಟ್ಟಿ ಮಾಡಿರಿ.

ನಾಡಿನ ರಕ್ಷಣೆಗಾಗಿ ಕನ್ನಡ ನಾಡಿನಲ್ಲಿ ಹೋರಾಡಿದವರ ಬಗ್ಗೆ ವಿಚಾರ ವಿನಿಮಯ ಮಾಡಿಕೊಂಡು ಪಟ್ಟಿ ತಯಾರಿಸಿರಿ.

ಕನ್ನಡದ ಪರಂಪರೆ ಉಳಿಸಿದ ಕೆಳದಿ ಚೆನ್ನಮ್ಮ ಆಶ್ರಯ ಬೇಡಿ ಬಂದವರಿಗೆ ಆಸರೆ ನೀಡಿದಳು. ಅದಕ್ಕಾಗಿ ಮೊಗಲರ ದೊಡ್ಡ ಸೈನ್ಯದೊಂದಿಗೆ ಯುದ್ಧಮಾಡಿ ಗೆದ್ದಳು. ಕೊಟ್ಟ ಮಾತು ಉಳಿಸಿಕೊಳ್ಳಲು ಪ್ರಯತ್ನಿಸಿದಳು. ಈ ರೋಚಕ ಪ್ರಸಂಗ ಈ ನಾಟಕದಲ್ಲಿದೆ.

(ಕೆಳದಿ ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಗ್ರಾಮ. ಅಲ್ಲಿ ವೀರರಾಣಿ ಕೆಳದಿ ಚೆನ್ನಮ್ಮ ಆಳುತ್ತಿದ್ದಳು. ಈಕೆ ಈ ರಾಜ್ಯದ ಕೀರ್ತಿಯನ್ನು ದಶದಿಕ್ಕುಗಳಿಗೂ ಹಬ್ಬಿಸಿದಳು. ಇವಳು ಶಿಕಾರಿಪುರ ತಾಲೂಕು ಕೋಟಿಪುರ ಗ್ರಾಮದ ಸಿದ್ದಪ್ಪ ಶೆಟ್ಟಿ ಎಂಬಾತನ ಮಗಳು, ಸೋಮಶೇಖರ ನಾಯಕನ ಮಡದಿ. ಈಕೆಯ ರಾಜ್ಯಾಡಳಿತ ಕಾಲ ಕ್ರಿಶ.1672 ರಿಂದ 1697)



NOT TO BE REPUBLISHED © KTBS

ದೃಶ್ಯ-೧

(ರಾಜಾಸ್ಥಾನದ ದೃಶ್ಯ: ಆಸ್ಥಾನದಲ್ಲಿ ಚೆನ್ನಮ್ಮ ಪ್ರಜೆಗಳ ಕಷ್ಟ- ಸುಖ ಹಾಗೂ ದೂರು -ದುಮ್ಮಾನಗಳನ್ನು ಆಲಿಸುತ್ತಿದ್ದಾಳೆ. ಸರತಿ ಸಾಲಿನ ಕೊನೆಯಲ್ಲಿ ಇಬ್ಬರು ಜಂಗಮರು ನಿಂತಿದ್ದಾರೆ.)

ಚೆನ್ನಮ್ಮ : ಏನು ಜಂಗಮರೆ , ಏನು ನಿಮ್ಮ ಸಮಸ್ಯೆ?

ಜಂಗಮ ವೇಷಧಾರಿ : ನಾವು ಜಂಗಮರಲ್ಲ ತಾಯಿ! ನಾನು ಛತ್ರಪತಿ ಶಿವಾಜಿಯವರ ಮಗ ರಾಜಾರಾಮ.

ಚೆನ್ನಮ್ಮ : (ಅಚ್ಚರಿಯಿಂದ) ಏನು? ನೀವು ಛತ್ರಪತಿ ಶಿವಾಜಿಯವರ ಮಕ್ಕಳೇ, ನನ್ನಿಂದೇನಾಗಬೇಕು? ಬನ್ನಿ ಕುಳಿತುಕೊಳ್ಳಿ. (ಆಸನ ತೋರಿಸುವಳು)

(ರಾಜಾರಾಮ ಆಸನದಲ್ಲಿ ಕುಳಿತುಕೊಳ್ಳುತ್ತಾನೆ. ಇನ್ನುಳಿದವರು ಹಿಂದೆ ಹಾಗೆಯೇ ನಿಂತುಕೊಂಡಿದ್ದಾರೆ.)

ರಾಜರಾಮ : ತಾಯಿ. ಆ ದುಷ್ಟ ಔರಂಗಜೇಬನು ನನ್ನ ಸೋದರ ಶಂಭಾಜಿಯನ್ನು ಸೆರೆ ಹಿಡಿದ. ಕ್ರೂರತನದಿಂದ ಕೊಲ್ಲಿಸಿಬಿಟ್ಟ. ಈಗ ನನ್ನನ್ನೂ ಕೊಲ್ಲಿಸಬೇಕೆಂದು ಹೊಂಚು ಹಾಕಿದ್ದಾನೆ. ನಮ್ಮ ರಾಜ್ಯವನ್ನು ವಶಪಡಿಸಿಕೊಳ್ಳಲು ಸೈನ್ಯವನ್ನು ಕಳುಹಿಸಿದ್ದಾನೆ. ಈಗಾಗಲೇ ಕೆಲವು ಕೋಟೆಗಳು ಅವನ ಕೈವಶವಾಗಿವೆ. ಶತ್ರುಗಳ ಕಣ್ಣುತಪ್ಪಿಸಿ ಇಲ್ಲಿಗೆ ಬಂದಿದ್ದೇವೆ. ನಮಗೆ ರಕ್ಷಣೆ ಕೊಡಿ.

ಚೆನ್ನಮ್ಮ : ಬೇರೆ ರಾಜರಾರೂ ನಿಮಗೆ ರಕ್ಷಣೆ ನೀಡಲಿಲ್ಲವೇ?

ರಾಜಾರಾಮ : ಇಲ್ಲ ತಾಯಿ! ಆ ದುಷ್ಟ ಔರಂಗಜೇಬನ ಕೋಪಕ್ಕೆ ಹೆದರಿ ರಕ್ಷಣೆ ನೀಡಲು ನಿರಾಕರಿಸಿದರು. ಆತನ ವೈರತ್ವ ಕಟ್ಟಿಕೊಳ್ಳುವುದು ಯಾರಿಗೂ ಸುಲಭದ ಮಾತಲ್ಲ.

ಚೆನ್ನಮ್ಮ : ಇರಲಿ, ಶಿವಾಜಿ ಮಹಾರಾಜರ ಮಗನಿಗೆ ರಕ್ಷಣೆ ನೀಡುವುದು ನಮ್ಮ ಕರ್ತವ್ಯವೆಂದು ಭಾವಿಸುತ್ತೇವೆ. ನಿಮಗೆ ಆಶ್ರಯ ನೀಡುವುದು ನಮ್ಮ ಧರ್ಮ!. (ಚೆನ್ನಮ್ಮ ತಿಮ್ಮಣ್ಣ ನಾಯಕರತ್ತ ತಿರುಗಿ) ತಿಮ್ಮಣ್ಣ ನಾಯಕರೇ ಇವರನ್ನು ನಮ್ಮ ಅತಿಥಿ ಗೃಹಕ್ಕೆ ಕರೆದೊಯ್ಯಿರಿ. ತಕ್ಕ ವ್ಯವಸ್ಥೆಮಾಡಿರಿ. ತದನಂತರ ಆಲೋಚನೆ ಮಾಡೋಣ.

ತಿಮ್ಮಣ್ಣ ನಾಯಕ : ಆಗಲಿ ತಾಯಿ.

ರಾಜಾರಾಮ : ನಿಮ್ಮ ಔದಾರ್ಯ ದೊಡ್ಡದು ತಾಯಿ, ನಿಮಗೆ ನಾನು ಕೃತಜ್ಞ.

(ಎಲ್ಲರೂ ಹೊರಡುವರು. ತೆರೆ ಬೀಳುವುದು.)

© KTBS NOT TO BE REPUBLISHED

ದೃಶ್ಯ –೨

(ಕೆಳದಿ ಸಂಸ್ಥಾನ, ರಾಜಸಭೆ ನಡೆಯುತ್ತಿರುವ ದೃಶ್ಯ . ಚೆನ್ನಮ್ಮ ಸಿಂಹಾಸನದಲ್ಲಿ ಆಸೀನಳಾಗಿದ್ದಾಳೆ)

ಚೆನ್ನಮ್ಮ : ತಿಮ್ಮಣ್ಣ ನಾಯಕರೇ, ರಾಜಾರಾಮನಿಗೆ ಆಶ್ರಯ ನೀಡುವ ಬಗ್ಗೆ ನಿಮ್ಮ ಅಭಿಪ್ರಾಯ?

ತಿಮ್ಮಣ್ಣನಾಯಕ : ಅಮ್ಮ, ನೆನಪು ಮಾಡಿಕೊಳ್ಳಿ, ಶಿವಾಜಿ ಮಹಾರಾಜರು ನಮ್ಮ ರಾಜ್ಯದ ವ್ಯಾಪಾರ ಕೇಂದ್ರಗಳಾದ ಕುಂದಾಪುರ, ಗೋಕರ್ಣಗಳ ಮೇಲೆ ದಾಳಿ ಮಾಡಿದ್ದರು. ಅಲ್ಲಿ ನಮಗೆ ಸೇರಬೇಕಾಗಿದ್ದ ತೆರಿಗೆ ಹಣವನ್ನು ಕಿತ್ತುಕೊಂಡು ಹೋಗಿದ್ದರು.

ಚೆನ್ನಮ್ಮ : ನಿಜ. ತಿಮ್ಮಣ್ಣನಾಯಕರೆ, ಸಬ್ನವೀಸ ಕೃಷ್ಣಪ್ಪಯ್ಯನವರೇ ನಿಮ್ಮದೇನು ಅಭಿಪ್ರಾಯ?

ಕೃಷ್ಣಪ್ಪಯ್ಯ : ತಾಯಿ, ನಾವೀಗ ರಾಜಾರಾಮರಿಗೆ ಆಶ್ರಯ ನೀಡುವುದು ಕಷ್ಟಕರ. ಔರಂಗಜೇಬನಿಗೆ ತಿಳಿದರೆ ಆತ ನಮ್ಮ ಮೇಲೆ ಆಕ್ರಮಣ ಮಾಡುತ್ತಾನೆ. ಆತನದು ಬಲಾಢ್ಯ ಸೈನ್ಯ. ನಮ್ಮದು ಚಿಕ್ಕ ಸೈನ್ಯ.

ಚೆನ್ನಮ್ಮ : ನೀವೇನು ಹೇಳುತ್ತೀರಿ ಅಪ್ಪಾಜಿ? (ಸಿದ್ದಪ್ಪಶೆಟ್ಟಿಯವರತ್ತ ನೋಡಿ)

ಸಿದ್ದಪ್ಪ ಶೆಟ್ಟಿ : ಶರಣು ಬಂದವರಿಗೆ ಆಶ್ರಯ ನೀಡುವುದು ನಮ್ಮ ಧರ್ಮ! ದುಷ್ಟರಿಗೆ ಹೆದರಿ ಹಿಂದೆ ಸರಿಯುವುದಕ್ಕಿಂತ ಮುಂದುವರಿದು ಹೋರಾಡುವುದೇ ಲೇಸು.

ಚೆನ್ನಮ್ಮ : ಅಪ್ಪಾಜಿ ಹೇಳುವುದು ನಿಜ. ಈಗ ರಾಜಾರಾಮರು ನಮ್ಮಲ್ಲಿ ಆಶ್ರಯ ಬೇಡಿ ಬಂದಿದ್ದಾರೆ. ಅವರಿಗೆ ರಕ್ಷಣೆ ನೀಡುವುದು ನಮ್ಮ ರಾಜಧರ್ಮ! ಇದೇ ಕನ್ನಡಿಗರ ಪರಂಪರೆ! ಕೊಲ್ಲುವವನಿಗಿಂತ ಕಾಯುವವನು ದೊಡ್ಡವನು. ನಮ್ಮ ಧರ್ಮವೇ ನಮ್ಮೆಲ್ಲರನ್ನು ರಕ್ಷಿಸುತ್ತದೆ.

ತಿಮ್ಮಣ್ಣ ನಾಯಕ : ಹೌದು, ತಾಯಿ. ನಿಮ್ಮ ಮಾತು ನಿಜ! ಹಾಗೇ ಆಗಲಿ.

ಸೈನಿಕ (ಬಂದು) ಮಹಾರಾಣಿಯವರಿಗೆ ಜಯವಾಗಲಿ, ತಮ್ಮನ್ನು ತುರ್ತಾಗಿ ಭೇಟಿಯಾಗಲು ಬೇಹುಗಾರನೊಬ್ಬ ಕಾಯುತ್ತಿದ್ದಾನೆ. ಕಳಿಸಿಕೊಡಲೇ?

ಚೆನ್ನಮ್ಮ : ಕಳಿಸಿ.

© KTBS NOT TO BE REPUBLISHED

ಬೇಹುಗಾರ : (ನಮಸ್ಕಾರ ಮಾಡಿ) ತಾಯಿ ಒಂದು ಆಘಾತಕಾರಿ ಸುದ್ದಿ !

ಚೆನ್ನಮ್ಮ : ಪರವಾಗಿಲ್ಲ ಹೇಳಿ.

ಬೇಹುಗಾರ : ತಾವು ರಾಜಾರಾಮನಿಗೆ ಆಶ್ರಯಕೊಟ್ಟಿದ್ದನ್ನು ಕೇಳಿ ಔರಂಗಜೇಬನು ಬಹಳ ಕೋಪಗೊಂಡಿದ್ದಾನೆ. ರಾಜ್ಯವನ್ನು ಮುತ್ತಲು ಸೇನೆ ಕಳುಹಿಸಿದ್ದಾನೆ. ರಾಜರಾಮನನ್ನು ಔರಂಗಜೇಬನಿಗೆ ಒಪ್ಪಿಸಬೇಕಂತೆ. ಇಲ್ಲವೇ ಯುದ್ಧಕ್ಕೆ ಸಿದ್ಧತೆ.......................

ಚೆನ್ನಮ್ಮ : ಹೀಗೋ ? ರಾಜಾರಾಮನಿಗೆ ಈಗಾಗಲೇ ಆಶ್ರಯ ನೀಡಿದ್ದಾಗಿದೆ. ಅವರನ್ನು ಒಪ್ಪಿಸುವುದು ಸಾಧ್ಯವಿಲ್ಲ. ಶರಣಾಗತರನ್ನು ರಕ್ಷಿಸುವುದು ಕನ್ನಡಿಗರ ವೀರ ಪರಂಪರೆ. (ಕೃಷ್ಣಪ್ಪಯ್ಯನವರತ್ತ ತಿರುಗಿ) ಇದಕ್ಕೇನು ಮುಂದಿನ ದಾರಿ ಕೃಷ್ಣಪ್ಪಯ್ಯನವರೇ?

ಕೃಷ್ಣಪ್ಪಯ್ಯ : ತಾಯಿ, ನಾವು ಕನ್ನಡಿಗರು. ಕಲಿತನದಿಂದ ಕಾದಾಡೋಣ. ಜಯಾಪಜಯಗಳು ಶಿವನಿಚ್ಛೆ. ಯುದ್ಧವೊಂದೇ ನಮಗೆ ಉಳಿದಿರುವ ದಾರಿ

ತಿಮ್ಮಣ್ಣ ನಾಯಕ : ಮಹಾರಾಣಿಯವರೇ, ಕೃಷ್ಣಪ್ಪಯ್ಯ ಹೇಳಿದ ಮಾತು ಸತ್ಯ. ಯುದ್ಧಕ್ಕೆ ಆದೇಶ ನೀಡಿರಿ. ಕನ್ನಡಿಗರ ಕಲಿತನ ತೋರಿಸೋಣ.

ಸಿದ್ದಪ್ಪಶೆಟ್ಟಿ : ಮಗಳೇ, ಯುದ್ಧಕ್ಕೆ ಸಿದ್ಧತೆ ಮಾಡಿಕೊಳ್ಳುವುದೇ ಸಭೆಯ ತೀರ್ಮಾನವೆಂದು ಕಾಣುತ್ತದೆ.

ಚೆನ್ನಮ್ಮ : ಸೇನಾನಾಯಕರೆ, ಮಂತ್ರಿಗಳೇ ನಮ್ಮ ವೀರರಿಗೆ ಸಿದ್ಧರಾಗಲು ತಿಳಿಸಿ. ಯುದ್ಧಕ್ಕೆ ತಕ್ಕ ಸಿದ್ಧತೆಗಳಾಗಲಿ ಹರ ಹರ ಮಹಾದೇವ!

(ಎಲ್ಲರೂ ಹರ ಹರ ಮಹಾದೇವ! ಹರ ಹರ ಮಹಾದೇವ ! ಎನ್ನುತ್ತಾ ಹೋಗುವರು.)

ದೃಶ್ಯ –೩

(ಕೆಳದಿ ಅರಮನೆಯ ಒಳಾಂಗಣ)

ಚೆನ್ನಮ್ಮ : ಕೃಷ್ಣಪ್ಪಯ್ಯ ಮತ್ತು ತಿಮ್ಮಣ್ಣ ನಾಯಕರೇ ಯುದ್ಧದ ಸಮಾಚಾರವೇನು? ನೆರೆಯ ಅರಸರು ನಮಗೆ ನೆರವು ನೀಡುತ್ತಿರುವರೇ?

© KTBS NOT TO BE REPUBLISHED

ತಿಮ್ಮಣ್ಣ ನಾಯಕ : ಹೌದು ತಾಯಿ, ನಮ್ಮ ನೆರೆಯ ಅರಸರೆಲ್ಲರೂ ಸಹಾಯ ನೀಡುತ್ತಿದ್ದಾರೆ. ನಮ್ಮ ಸೈನಿಕರು, ತಂಡ – ತಂಡವಾಗಿ ಹೋಗುತ್ತಿದ್ದಾರೆ. ಮಾರ್ಗ ಮಧ್ಯದಲ್ಲಿಯೇ ಅವರ ಡೇರೆಗಳ ಮೇಲೆ ಹಠಾತ್ತಾಗಿ ದಾಳಿ ಮಾಡುತ್ತಿದ್ದಾರೆ. ನಮ್ಮವರ ಈ ಮಿಂಚಿನ ಆಕ್ರಮಣದಿಂದ ಮೊಗಲರ ಸೇನೆ ಹೌಹಾರಿದೆ.

ಕೃಷ್ಣಪ್ಪಯ್ಯ : ಅಮ್ಮಾ, ಮಾರ್ಗ ಮಧ್ಯದಲ್ಲಿ ಜಡಿ ಮಳೆ ಸುರಿಯುತ್ತಿದೆ. ಅವರಿಗೆ ಅರಣ್ಯ ಮಾರ್ಗದಲ್ಲಿ ದಿಕ್ಕು ತಿಳಿಯುತ್ತಿಲ್ಲ. ಅದರ ಜೊತೆ ಆಹಾರ ಸಿಗದಂತೆ ಮಾಡಿದ್ದೇವೆ. ನಮ್ಮ ಕೂಟ ಕದನದಿಂದ ಮೊಗಲರು ಕಂಗೆಟ್ಟಿದ್ದಾರೆ.

ತಿಮ್ಮಣ್ಣನಾಯಕ : ನಮ್ಮ ಮಾವುತರು ಪಳಗಿದ ಆನೆಗಳ ಸಹಾಯದಿಂದ ನೂರಾರು ಕಾಡಾನೆಗಳನ್ನು ಅವರ ಬಿಡಾರಗಳತ್ತ ನುಗ್ಗಿಸುತ್ತಿದ್ದಾರೆ. ಇದರಿಂದ ಔರಂಗಜೇಬನ ಸೈನಿಕರು ಮತ್ತಷ್ಟು ಭಯ–ಭೀತರಾಗಿದ್ದಾರೆ. ಪ್ರಾಣಭಯದಿಂದ ಶಸ್ತ್ರಾಸ್ತ್ರಗಳನ್ನು ಬಿಟ್ಟು ದಿಕ್ಕೆಟ್ಟು ಓಡಿ ಹೋಗುತ್ತಿದ್ದಾರೆ.

ಸೇನಾಧಿಪತಿ : (ಮಧ್ಯದಲ್ಲಿ ಆಗಮಿಸಿ) ಮಹಾರಾಣಿಯವರಿಗೆ ಜಯವಾಗಲಿ! ..... ಮೊಗಲರ ಸೇನೆ ಓಡಿ ಹೋಯಿತು. ಯುದ್ಧದಲ್ಲಿ ನಾವು ಗೆದ್ದೆವು!

ಚೆನ್ನಮ್ಮ : ಹೌದೇ? ಕೆಳದಿ ವೀರರು ಕರ್ನಾಟಕದ ಪರಂಪರೆ ಕಾಯ್ದರು. ತಾಯಿ ಭುವನೇಶ್ವರಿ ಕಾಪಾಡಿದಳು.

(ಎಲ್ಲರೂ ಎದ್ದು ನಿಂತು ಜಯ ಘೋಷ ಮಾಡುವರು).

(ತೆರೆ ಬೀಳುತ್ತದೆ)

@ KTBS NOT TO BE REPUBLISHED

ಓದಿ – ತಿಳಿ

ಕೀರ್ತಿ– ಖ್ಯಾತಿ, ಸ್ತುತಿ, ದಶ–ಹತ್ತು, ಬಲಾಢ್ಯ– ಬಲಶಾಲಿ, ಕೃತಜ್ಞ–ಉಪಕಾರವನ್ನು ನೆನೆಯುವವನು, ಸಂಸ್ಥಾನ– ರಾಜ್ಯ, ದೇಶದ ಭಾಗ, ತೆರಿಗೆ–ಕರ, ಸುಂಕ, ಕಂದಾಯ, ಶರಣು– ರಕ್ಷಣೆ, ಮೊರೆಹೋಗು, ನಮಸ್ಕಾರ, ಘೋಷಿಸು– ಕೂಗಿ ಹೇಳು, ಏರುಧ್ವನಿ ತುರ್ತು–ಜರೂರು, ಜರೂರು ಪರಿಸ್ಥಿತಿ, ಬಿಡಾರ–ತಂಗುವ ಸ್ಥಳ, ಆಘಾತ– ಪೆಟ್ಟು, ಕೇಡು, ಆದೇಶ– ಅಪ್ಪಣೆ, ಮಾವುತ– ಮಾವಟಿಗ, ಆನೆಯನ್ನು ನಡೆಸುವವನು. ಶಸ್ತ್ರಾಸ್ತ್ರ– ಆಯುಧಗಳು, ಹೊಂಚು– ನಿರೀಕ್ಷಿಸು, ಯಾರಿಗೂ ಕಾಣದಂತೆ ಗುಪ್ತವಾಗಿರು. ದುಮ್ಮಾನ– ವ್ಯಸನ, ಚಿಂತೆ, ಆಸನ–ಕುಳಿತುಕೊಳ್ಳುವ ಸಾಧನ

ಗಮನಿಸಿ – ತಿಳಿ

ಕಣ್ಣು ತಪ್ಪಿಸು– ಮರೆ ಮಾಚು, ಪರಂಪರೆ– ಹಿಂದಿನಿಂದ ನಡೆದು ಬಂದ ಸಂಪ್ರದಾಯ, ಬೇಹುಗಾರ– ಗೂಢಚಾರ, ಗುಪ್ತಚಾರ, ಹೌಹಾರು– ಗಾಬರಿಯಾಗು, ಬೆಚ್ಚಿಬೀಳು, ಎದೆಗುಂದು– ಧೈರ್ಯಗೆಡು, ಕಂಗೆಡು– ದಿಕ್ಕು ತೋಚದಂತಾಗುವುದು, ದಾರಿ ಕಾಣದಾಗುವುದು, ಸಬ್ನವೀಸ– ಕಂದಾಯ ಅಧಿಕಾರಿ, ಧರ್ಮ– ಸರ್ವಸಮ್ಮತವಾದ ಬದುಕುವ ಕ್ರಮ, ಕೋಟೆ– ಬಲವಾದ ರಕ್ಷಣಾ ಗೋಡೆ, ಕೂಟ ಯುದ್ಧ – ಹಠಾತ್ತಾಗಿ ಎರಗಿ ದಾಳಿ ಮಾಡುವ ಯುದ್ಧದ ತಂತ್ರಗಾರಿಕೆ.

ಅಭ್ಯಾಸ

ಅ. ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ಚೆನ್ನಮ್ಮ ಎಲ್ಲಿ ಆಳುತ್ತಿದ್ದಳು?

೨. ಜಂಗಮ ವೇಷಧಾರಿ ಯಾರು?

೩. ರಾಜಾರಾಮನು ಯಾರ ಮಗನು?

೪. ಶಂಭಾಜಿಯನ್ನು ಸೆರೆ ಹಿಡಿದು ಕೊಲ್ಲಿಸಿದವನಾರು?

೫. ರಾಜಾರಾಮನಿಗೆ ಯಾರೂ ರಕ್ಷಣೆ ನೀಡಲಿಲ್ಲ. ಏಕೆ?

೬. ಔರಂಗಜೇಬ ಏಕೆ ಕೋಪಗೊಂಡನು?

೭. ಸಿದ್ದಪ್ಪ ಶೆಟ್ಟರು ಸಭೆಯ ತೀರ್ಮಾನ ಏನೆಂದು ಹೇಳಿದರು?

೮. ಸೇನಾಧಿಪತಿ ಬಂದು ಹೇಳಿದುದೇನು?

ಆ. ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ.

೧. ರಾಜಾರಾಮನು ರಾಣಿ ಚೆನ್ನಮ್ಮನಿಗೆ ಸಭೆಯಲ್ಲಿ ಏನೆಂದು ಕೇಳಿಕೊಂಡನು?

೨. ಬೇಹುಗಾರನು ಬಂದು ರಾಣಿಯವರಿಗೆ ಹೇಳಿದ್ದೇನು?

೩. ಮೊಗಲರ ಸೇನೆ ಕಾಡಿನಲ್ಲಿ ಭಯ–ಭೀತರಾಗಲು ಕಾರಣ ಹೇಳಿರಿ.

ಇ. ಈ ಮಾತನ್ನು ಯಾರು, ಯಾರಿಗೆ, ಹೇಳಿದರು ?

೧. ನಾವು ಜಂಗಮರಲ್ಲ ತಾಯಿ !

೨. ಆತನ ವೈರತ್ವ ಕಟ್ಟಿಕೊಳ್ಳುವುದು ಯಾರಿಗೂ ಸುಲಭದ ಮಾತಲ್ಲ.

೩. ಶರಣು ಬಂದವರಿಗೆ ಆಶ್ರಯ ನೀಡುವುದು ನಮ್ಮ ಧರ್ಮ!

© KTBS NOT TO BE REPUBLISHED

೪. ಕೊಲ್ಲುವವನಿಗಿಂತ ಕಾಯುವವನು ದೊಡ್ಡವನು.

೫. ಕೆಳದಿ ವೀರರು ಕರ್ನಾಟಕದ ಪರಂಪರೆ ಕಾಯ್ದರು.

ಈ. ಬಿಟ್ಟ ಸ್ಥಳ ತುಂಬಿರಿ.

೧. ಔರಂಗಜೇಬನ ________ ಹೆದರಿ ಇತರ ರಾಜರು ರಕ್ಷಣೆ ನೀಡಲು ನಿರಾಕರಿಸಿದರು.

೨. ಶರಣಾಗತರನ್ನು ರಕ್ಷಿಸುವುದು ಕರ್ನಾಟಕದ ____________ .

೩. ಕೊಲ್ಲುವವನಿಗಿಂತ ___________ ದೊಡ್ಡವನು.

೪. ನಮ್ಮ ನೆರೆಯ ___________ ಸಹಾಯ ನೀಡುತ್ತಿದ್ದಾರೆ.

೫. ಕೂಟ ಕದನದಿಂದ _____________ ಕಂಗೆಟ್ಟಿದ್ದಾರೆ.

೬. ಮೊಗಲರು ಪ್ರಾಣ ಭಯದಿಂದ ________ ಬಿಟ್ಟು ದಿಕ್ಕೆಟ್ಟು ಓಡಿದರು.

ಉ. ಹೊಂದಿಸಿ ಬರೆಯಿರಿ.

	ಅ	ಬ	
೧.	ಶಿವಾಜಿಯ ಮಗ	ಕೃಷ್ಣಪ್ಪಯ್ಯ	____________
೨.	ಸಿದ್ದಪ್ಪಶೆಟ್ಟಿ ಮಗಳು	ರಾಜಾರಾಮ	____________
೩.	ಸಬ್ನವೀಸ	ಕೆಳದಿಚೆನ್ನಮ್ಮ	____________
೪.	ಚೆನ್ನಮ್ಮನ ಪತಿ	ಶಂಬಾಜಿ	____________
		ಸೋಮಶೇಖರ ನಾಯಕ	

ಅಭ್ಯಾಸ ಚಟುವಟಿಕೆ

ಅ. ೧. ಕನ್ನಡನಾಡಿನ ವೀರ ಪುರುಷರ ಹೆಸರುಗಳನ್ನು ಪಟ್ಟಿ ಮಾಡಿರಿ.

೨. ವೀರರಾಣಿ ಕೆಳದಿ ಚೆನ್ನಮ್ಮ ನಾಟಕವನ್ನು ಕಲಿತು ನಿಮ್ಮ ಶಾಲಾ ವಾರ್ಷಿಕೋತ್ಸವದಲ್ಲಿ ಅಭಿನಯಿಸಿರಿ.

೩. ಕನ್ನಡ ನಾಡಿನ ವೀರ ಮಹಿಳೆಯರ ಕಥೆಗಳನ್ನು ಸಂಗ್ರಹಿಸಿ ಓದಿರಿ.

@ KTBS NOT TO BE REPUBLISHED

ಭಾಷಾಭ್ಯಾಸ

ಅ. ಈ ಪದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿರಿ.

೧. ತುರ್ತು ....

೨. ಕಣ್ಣು ತಪ್ಪಿಸು ....

೩. ದಾಳಿ ಮಾಡು ....

೪. ತಂಡ-ತಂಡವಾಗಿ ....

೫. ಹಠಾತ್ತಾಗಿ ....

೬. ಭಯ-ಭೀತಿ ....

ಆ. ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಪದಗಳನ್ನು ಗಮನಿಸಿ ಓದಿರಿ. ಗಟ್ಟಿಯಾಗಿ ಹೇಳಿರಿ. ಉಚ್ಚಾರ ದೋಷವಾಗದಿರಲಿ.

ದುಷ್ಟ	ಶಿಷ್ಟ	ಸತ್ಯ	ಅಸತ್ಯ
ಕೃತಜ್ಞ	ಕೃತಘ್ನ	ಆಶ್ರಯ	ನಿರಾಶ್ರಯ
ಜಯ	ಅಪಜಯ	ಧರ್ಮ	ಅಧರ್ಮ
ಕೊಲ್ಲು	ಕಾಯು, ಸಲಹು		

© KTBS NOT TO BE REPUBLISHED

ಈ ಪದಗಳನ್ನು ಓದಿರಿ : ವೀರ, ಕೆಳದಿ, ಹೋರಾಡುವುದು.

ಅಕ್ಷರಗಳ ಗುಂಪೇ ಪದ, ಆದರೆ ಅವು ಅರ್ಥವನ್ನು ಹೊಂದಿರಬೇಕು.

ವೀ, ರ ಇದನ್ನು ಕೂಡಿಸಿ ಬರೆದಾಗ ವೀರ, ಅದರ ಅರ್ಥ ಶೂರ

ಕೆ, ಳ, ದಿ ಇದನ್ನು ಕೂಡಿಸಿ ಬರೆದಾಗ ಕೆಳದಿ, ಅರ್ಥ ಕೆಳದಿ ಊರ ಹೆಸರು

ಹೋ, ರಾ, ಡು, ವು, ದು, ಕೂಡಿಸಿ ಬರೆದಾಗ ಹೋರಾಡುವುದು ಅದರ ಅರ್ಥ ಯುದ್ಧ ಮಾಡುವುದು

ಇಂತಹ ಅನೇಕ ಪದಗಳು ಕೂಡಿ ಸಂಪೂರ್ಣ ಅರ್ಥಕೊಡುವ ಪದಗಳ ಗುಂಪಿಗೆ ವಾಕ್ಯವೆನ್ನುವರು.

೧. <u>ರಾಧೆ</u> <u>ಶಾಲೆಗೆ</u> <u>ಹೋಗುತ್ತಾಳೆ</u>

೨. <u>ತಾಯಿ,</u> <u>ನಾವು</u> <u>ಜಂಗಮರಲ್ಲ</u>

೩. <u>ಔರಂಗಜೇಬನ</u> <u>ಕೋಪಕ್ಕೆ</u> <u>ಹೆದರಿ</u> <u>ರಾಜರು</u> <u>ರಕ್ಷಣೆ</u> <u>ನೀಡಲು</u> <u>ನಿರಾಕರಿಸಿದರು</u>

ಸೂಚನೆ: ನೀವು ೩ ವಾಕ್ಯಗಳನ್ನು ರಚಿಸಿರಿ ಅವುಗಳಲ್ಲಿ ಎಷ್ಟು ಪದಗಳಿವೆ ಎಂಬುದನ್ನು ಕೆಳಗೆ ಗೆರೆ ಹಾಕಿ ಎಣಿಸಿರಿ.

೧. ____

೨. ____

೩. ____

ಈಗ ಪದಗಳ ಸಮೂಹ ವಾಕ್ಯವೆಂದಾಯಿತು. ಅದು ಅರ್ಥವನ್ನು ನೀಡಬೇಕು.

ವಾಕ್ಯಗಳ ಪ್ರಕಾರಗಳು.

೧. ಶ್ರೀಮತಿ ಸಾವಿತ್ರಿ ಯಾವ ಜಿಲ್ಲೆಯ ಅಧಿಕಾರಿಯಾಗಿದ್ದಾರೆ ? **(ಪ್ರಶ್ನಾರ್ಥಕ ವಾಕ್ಯ)**

೨. ಶ್ರೀಮತಿ ಸಾವಿತ್ರಿ ರಾಯಚೂರು ಜಿಲ್ಲೆಯ ಜಿಲ್ಲಾಧಿಕಾರಿಯಾಗಿದ್ದಾರೆ **(ಸಾದಾ /ಸಾಮಾನ್ಯ ವಾಕ್ಯ)**

೩. ಓಹೋ ! ಅವರು ಜಿಲ್ಲಾಧಿಕಾರಿ. **(ಭಾವ ಸೂಚಕ ವಾಕ್ಯ)**

೪. ನೀನು, ಮನೆಗೆ ಹೋಗು. **(ಆಜ್ಞಾರ್ಥಕ ವಾಕ್ಯ)**

@ KTBS NOT TO BE REPUBLISHED

ಇಂತಹ ೪ ವಾಕ್ಯಗಳನ್ನು ರಚಿಸಿರಿ.

____

____

____

____

ಭಾಷಾ ಚಟುವಟಿಕೆ

೩. ಇದನ್ನು ಗಟ್ಟಿಯಾಗಿ ಓದಿ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

ಕನ್ನಡ ಪರಂಪರೆ ಎಂಬುದು ಕನ್ನಡಿಗರ ಜೀವನ ಧರ್ಮ. ಇದು ನಡೆದು ಬಂದ ಹಾದಿ. ಮಹಾಕವಿ ಕುವೆಂಪುರವರು, ಕರ್ನಾಟಕವೆಂಬುದು ಬರಿ ಹೆಸರಲ್ಲ, ಮಂತ್ರಕಣಾ, ಶಕ್ತಿ ಕಣಾ, ದೇವಿ ಕಣಾ ಎನ್ನುತ್ತಾರೆ.

ಕರ್ನಾಟಕದ ಒಂದು ಶಾಸನವು ಕನ್ನಡಿಗರು ಸಾಧು ಜನರಿಗೆ ಸಾಧು. ಯಾರಾದರು ತೊಂದರೆ ಕೊಟ್ಟರೆ ಅವರನ್ನು ಬಂಧಿಸದೆ ಬಿಡರು ಎಂದು ಹೇಳುತ್ತದೆ. ಕನ್ನಡಿಗರು ವೀರರು. ಈ ಜನ ಕಾವೇರಿಯಿಂದ ಗೋದಾವರಿನದಿಯವರೆಗೆ, ಕರ್ನಾಟಕದಿಂದ ಬಂಗಾಳದವರೆಗೆ ಗೆದ್ದು ಬಂದಿದ್ದಾರೆ. ವೀರತನ ಮೆರೆದಿದ್ದಾರೆ.

ಇಲ್ಲಿಯ ಶರಣರು ಇತರರನ್ನು **ಇವನಾರವ ಇವನಾರವ ಎಂದೆನ್ನದಿರಯ್ಯ ಇವ ನಮ್ಮವ ಇವ ನಮ್ಮವ ಎಂದೆನಿಸಯ್ಯ** ಎಂದು ತಮ್ಮ ಹಿರಿತನ ತೋರಿದ್ದಾರೆ. ಕನಕದಾಸರು **ಕುಲ-ಕುಲವೆಂದು ಹೊಡೆದಾಡದಿರಿ** ಎಂದು ಎಚ್ಚರಿಸಿದ್ದಾರೆ. **ಏನಾದರು ಆಗು ಮೊದಲು ಮಾನವನಾಗು** ಎಂದು ಸಿದ್ದಯ್ಯಪುರಾಣಿಕರವರು ಜಗತ್ತಿಗೆ ಹೇಳಿದ್ದಾರೆ. ಇದುವೆ ಕನ್ನಡದ ಪರಂಪರೆ.

೧. ಕನ್ನಡ ಪರಂಪರೆ ಎಂದರೆ ಏನು?

೨. ಕುವೆಂಪುರವರು ಕರ್ನಾಟಕದ ಬಗ್ಗೆ ಏನು ಹೇಳುತ್ತಾರೆ?


೩. ಶರಣರು ಹೇಳಿದ್ದೇನು?

೪. ಕನ್ನಡಿಗರು ಜಗತ್ತಿಗೆ ಹೇಳಿದ್ದೇನು?

@ KTBS
NOT TO BE REPUBLISHED

ಪದ್ಯ ಪಾಠ ೪

ನಮ್ಮೂರ ಕೆರೆ



@ KTBS NOT TO BE REPUBLISHED

ಪಾಠ ಪ್ರವೇಶ :

ಆಧುನಿಕ ತಂತ್ರಜ್ಞಾನದ ಭರಾಟೆಯಲ್ಲಿ ಸಿಲುಕಿ ನಮ್ಮ ನೆಲ ಜಲ ಸಂಸ್ಕೃತಿ ನಲುಗುತ್ತಿವೆ. ಶುದ್ಧನೆಲ, ಶುದ್ಧಜಲ, ಶುದ್ಧಗಾಳಿ ಸಿಗುವುದು ದುರ್ಲಭವಾಗಿದೆ. ಹಚ್ಚ ಹಸಿರು ಪ್ರದೇಶದಲ್ಲಿ ಕಾರ್ಖಾನೆಗಳು ತಲೆಯೆತ್ತುತ್ತಿವೆ. ಕೆರೆಗಳು ಬತ್ತುತ್ತಿವೆ. ನಿವೇಶನಗಳು ಮೈದಳೆಯುತ್ತಿವೆ. ಇದರ ಪರಿಹಾರಕ್ಕಾಗಿ ನಾವೇನು ಮಾಡಬಹುದು? ವಿಚಾರ ಮಾಡಿರಿ. ನಿಮ್ಮೂರ ಕೆರೆಯನ್ನು ಹೋಗಿ ನೋಡಿರಿ. ಹಿಂದೆ ಹೇಗಿತ್ತು? ಈಗ ಹೇಗಾಗಿದೆ ? ಎಂಬುದನ್ನು ಹಿರಿಯರಿಂದ ತಿಳಿದುಕೊಳ್ಳಿ. ಅದರ ಉಪಯೋಗದ ಬಗ್ಗೆ ತರಗತಿಯಲ್ಲಿ ಚರ್ಚಿಸಿರಿ. ಈ ಬಗ್ಗೆ ಚಿಂತನೆಗೆ ಹಚ್ಚುವುದೇ ಈ ಕವಿತೆಯ ಮೂಲ ಉದ್ದೇಶವಾಗಿದೆ.

ಸುತ್ತ ಹತ್ತೂರಲ್ಲಿ ಮುತ್ತಂತೆ ನಮ್ಮ ಕೆರೆ
ಅದರ ಉಳಿವಿನ ಕಥೆಯ ಕೇಳಿರೆಲ್ಲ । ಪ ।

ಕೆರೆಯ ದಾರಿಯಲೆಲ್ಲ ತಂಪು ತಂಬೆಲರು
ಏರಿಯ ಸುತ್ತೆಲ್ಲ ಕಾವಲಿನ ಮರಸಾಲು
ಒಂದೊಂದು ಮರದಲ್ಲಿ ಹತ್ತಾರು ಟೊಂಗೆಗಳು
ಹತ್ತಾರು ಟೊಂಗೆಯಲಿ ನೂರಾರು ಹಕ್ಕಿಗಳು । ಸುತ್ತ ।

ಬೆಳ್ಳಿ ತಟ್ಟೆಯ ಹಾಗೆ ಹೊಳೆ ಹೊಳೆವ ನೀರು
ಮಿಂಚುಬಳ್ಳಿಯ ಹಾಗೆ ಥಳ ಥಳಿಪ ಮೀನು
ಕಪ್ಪೆಗಳ ವಟವಟರು, ಸುತ್ತ ಮೇಯುವ ಟಗರು
ದನಗಾಹಿಯ ಹಾಡಿಗೆ ತಲೆದೂಗುವಾ ಪೈರು   । ಸುತ್ತ ।

ಕಾರ್ಖಾನೆಗಳು ಬಂದು, ಜನಸಂಖ್ಯೆ ಬೆಳೆದು
ಗಟಾರದ ಕೊಳೆಯೆಲ್ಲ ಕೆರೆಯೊಳಗೆ ಬೆರೆತು
ಭೂತಾಯ ಎದೆ ತುಂಬ ಕೊಳವೆಬಾವಿಯ ಕೊರೆದು
ನೀರಸೆಲೆಯೂ ಬತ್ತಿಹುದು, ಕೆರೆ ಒಡಲು ಬಿರಿದು   । ಸುತ್ತ ।

ಊರ ಜನರು ಸಭೆಯ ಸೇರಿ ಒಮ್ಮತಕೆ ಬರಲು
ಹೊಗೆ ಬೆಂಕಿ ಕಾರ್ಖಾನೆಯ ಊರಾಚೆ ಇಡಲು
ಮನೆಗೆರಡು ಮರ, ಕೆರೆ ಸುತ್ತ ಬನ ನೆಡಲು
ಪ್ಲಾಸ್ಟಿಕಿನ ಬಳಕೆಗೆ ವಿದಾಯವ ಹೇಳಲು   । ಸುತ್ತ ।

ನಮ್ಮೂರ ನೆಲವೀಗ ಜಲನಿಧಿಯ ಆಗರವು
ಮರಗಳಲಿ ಮತ್ತೀಗ ಹಸಿರು ಹಕ್ಕಿಯ ಹಾಡು
ಉಪ್ಪು ತಿಂದವ ನೀರು ಕುಡಿಯಲೇ ಬೇಕಲ್ಲ
ತಪ್ಪು ಮಾಡಿದ ನಾವೇ ಸರಿಪಡಿಸಬೇಕಲ್ಲ   । ಸುತ್ತ ।

– ಚಿದಾನಂದ ಸಾಲಿ

NOT TO BE REPUBLISHED @KTBS

ಕವಿ ಪರಿಚಯ:



ಚಿದಾನಂದ ಸಾಲಿ ರಾಯಚೂರು ಜಿಲ್ಲೆಯ ಆಶಾಪುರ ಗ್ರಾಮದವರು. **ಎಲೆಯುದುರುವ ಕಾಲ, ಮೌನ, ಧರೆಗೆ ನಿದ್ರೆಯು ಇಲ್ಲ. ಯಜ್ಞ, ಚೌಕಟ್ಟಿನಾಚೆ** ಮೊದಲಾದ ಕೃತಿಗಳು ಪ್ರಕಟವಾಗಿವೆ. ಕಣವಿ ಕಾವ್ಯ ಪ್ರಶಸ್ತಿ, ವಸುದೇವ ಭೂಪಾಲಂ ದತ್ತಿ ಪ್ರಶಸ್ತಿ, ಪ್ರೊ ಎಸ್.ವಿ. ಪರಮೇಶ್ವರ ಭಟ್ಟ ಪ್ರಶಸ್ತಿ, ಬೇಂದ್ರೆ ಗ್ರಂಥ ಬಹುಮಾನ. ಸೋಮೇಶ್ವರ ಕಥಾ ಪ್ರಶಸ್ತಿ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪುಸ್ತಕ ಬಹುಮಾನಗಳಿಗೆ ಭಾಜನರು. ತೆಲುಗು, ಹಿಂದಿ ಮತ್ತು ಇಂಗ್ಲೀಷ ಭಾಷೆಗಳಿಂದ ಅನುವಾದ ಮಾಡಿದ್ದಾರೆ.

ಓದಿ – ತಿಳಿ

ತಂಬೆಲರು – ತಂಪಾದ ಗಾಳಿ. ಏರಿ – ಎತ್ತರವಾದ ಕಟ್ಟೆ, ಕೊಳೆ– ಹೊಲಸು, ಸೆಲೆ–ನೀರು ಒಸರುವ ಜಾಗ, ಬತ್ತು –ಒಣಗು, ಬನ–ವನ, ವಿದಾಯ– ಬೀಳ್ಕೊಡುಗೆ, ಆಗರ–ಕಣಜ.

ಗಮನಿಸಿ – ತಿಳಿ

ಭೂತಾಯ– ಭೂಮಿ ತಾಯಿಯ, ಗಟಾರ– ಹೊಲಸು ನೀರು ಹೋಗಲು ಮಾಡಿದ ಕಾಲುವೆಯ ಚರಂಡಿ , ಜಲನಿಧಿ– ಸಮುದ್ರ, ಸಾಗರ, ಉಪ್ಪು ತಿಂದವ ನೀರು ಕುಡಿಯಲೇಬೇಕು ಇದೊಂದು ಗಾದೆ ಮಾತು. ಇದರ ಅರ್ಥ ತಪ್ಪು ಮಾಡಿದವ ಶಿಕ್ಷೆ ಅನುಭವಿಸಲೇಬೇಕು. ಹಸಿರು ಹಕ್ಕಿಯ ಹಾಡು– ಮರದ ತುಂಬ ಹಸಿರು ಎಲೆಗಳ ಸಿಂಗಾರ, ಅದರಲ್ಲಿ ಹಕ್ಕಿಗಳು ಕುಳಿತು ಆನಂದದಿಂದ ಹಾಡುತ್ತಿರುವುದು.

ಅಭ್ಯಾಸ

ಅ. ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ಕೆರೆಯ ಏರಿಯ ಸುತ್ತ ಯಾವುದರ ಕಾವಲಿತ್ತು ?

೨. ಕೆರೆಯ ನೀರು ಯಾವ ರೀತಿ ಹೊಳೆಯುತ್ತಿತ್ತು ?

೩. ಪೈರು ತಲೆದೂಗುತ್ತಿತ್ತು ಏಕೆ?

೪. ಕೆರೆಯೊಳಗೆ ಏನು ಬೆರೆಯುತ್ತಿತ್ತು ?

೫. ಕೊಳವೆ ಬಾವಿಗಳನ್ನು ಎಲ್ಲಿ ಕೊರೆದಿದ್ದರು ?

೬. ಊರಿನ ಜನ ಯಾವುದಕ್ಕೆ ವಿದಾಯ ಹೇಳಿದರು?

೭. ನಮ್ಮೂರ ಕೆರೆ ಈಗ ಯಾವುದರ ಆಗರ ?

೮. ನಮ್ಮ ತಪ್ಪನ್ನು ಯಾರು ಸರಿಪಡಿಸಬೇಕು ?

ಆ. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಕೆರೆಯ ದಾರಿಯ ವರ್ಣನೆ ಮಾಡಿರಿ.

೨. ಕೆರೆಯಲ್ಲಿ ಕೊಳೆಯಾಯಿತು ಎಂದು ಕವಿ ಹೇಳಿದ ಸಾಲುಗಳನ್ನು ಬರೆಯಿರಿ.

೩. ಊರ ಜನರು ಸಭೆ ಸೇರಿ ಏನೆಂದು ಒಮ್ಮತಕ್ಕೆ ಬಂದರು ?

೪. ಊರ ಕೆರೆ ಸರಿಪಡಿಸಿದಾಗ ಆ ಊರು ಯಾವ ಬದಲಾವಣೆ ಕಂಡಿತು ?

ಇ. ಈ ನುಡಿಯ ಸಾರಾಂಶ ಹೇಳಿ ಬರೆ.

ಕಾರ್ಖಾನೆಗಳು ಬಂದು, ಜನಸಂಖ್ಯೆ ಬೆಳೆದು

....

.... ಕೆರೆ ಒಡಲು ಬಿರಿದು

© KTBS NOT TO BE REPUBLISHED

ಈ. ಬಿಟ್ಟ ಸ್ಥಳವನ್ನು ಸೂಕ್ತ ಪದಗಳಿಂದ ತುಂಬಿರಿ

೧. ಕೆರೆಯ ದಾರಿಯಲೆಲ್ಲ ....

೨. ಮಿಂಚು ಬಳ್ಳಿಯ ಹಾಗೆ ....

೩. ನೀರ ಸೆಲೆ ಒತ್ತಿಹುದು ....

೪. ಊರ ಜನರು ಒಮ್ಮತದಿಂದ ನಿರ್ಧರಿಸಿದರು. ....

೫. ಹಸಿರು ಹಕ್ಕಿಯ ಹಾಡು ಶುರುವಾಗುವುದು ....

ಅಭ್ಯಾಸ ಚಟುವಟಿಕೆ

ನಮ್ಮೂರಲ್ಲಿ	ಆಗಿರುವುದು	ಏಕೆ ಎಂಬುದನ್ನು ಹೇಳಿರಿ
ನಮ್ಮೂರ ಕೆರೆ	ಒತ್ತುವರಿ	
ನಮ್ಮೂರ ಕೆರೆ	ನೀರು ಕುಡಿಯಲು ಯೋಗ್ಯವಾಗಿಲ್ಲ	
ನಮ್ಮೂರು ಕೆರೆ	ಕೆರೆ ಈಗ ಕಾಣುತ್ತಿಲ್ಲ	
ನಮ್ಮೂರ	ಜನರಿಗೆಲ್ಲ ಹೆಚ್ಚು ಕಾಮಾಲೆ ರೋಗ	

© KTBS NOT TO BE REPUBLISHED

ಉ. ಕೆರೆಗಳನ್ನು ಕಟ್ಟಿಸುವಾಗ ನಡೆದ ಕಥೆಗಳನ್ನು ನಿಮ್ಮ ಅಧ್ಯಾಪಕರಿಂದ ಕೇಳಿ ತಿಳಿಯಿರಿ.

ಭಾಷಾಭ್ಯಾಸ

ಅ) ಈ ಪದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಉಪಯೋಗಿಸಿರಿ.

ತಂಪು : ______________________

ಮಿಂಚುಬಳ್ಳಿ : ______________________

ಬಿರಿ : ______________________

ಒಡಲು : ______________________

ಆಗರ : ______________________

ವಿದಾಯ : ______________________

ಆ) **ನಾಲ್ಕು ಸಾಲಿನ ಟಿಪ್ಪಣಿ ಬರೆಯಿರಿ.**

ನಮ್ಮೂರ ಕೆರೆ

____

____

____

____

ಊರ ಜನ ಒಮ್ಮತದ ನಿರ್ಧಾರ

____

____

____

____

ಇ) **ಥಳ ಥಳ, ಫಳಫಳ, ಇಂತಹ ಐದು ಪದಗಳನ್ನು ನಿಮ್ಮ ನೆನಪಿನಿಂದ ಬರೆಯಿರಿ.**

ಈ) **ಮಾದರಿಯಂತೆ ಪೂರ್ಣಗೊಳಿಸಿರಿ.**

ಮಾದರಿ: ಮನೆಗೆರಡು ಮರ, ಕೆರೆ ಸುತ್ತ ಬನ

೧. ಉಪ್ಪು ತಿಂದವ ______________

೨. ವಿದ್ಯೆ ಇಲ್ಲದವನು ______________

೩. ದುಡ್ಡೇ ದೊಡ್ಡಪ್ಪ, ವಿದ್ಯೆ ______________

೪. ಸತ್ಯಕ್ಕೆ ಸಾವಿಲ್ಲ ______________

೫. ಹಾಸಿಗೆ ಇದ್ದಷ್ಟು ______________

@ KTBS NOT TO BE REPUBLISHED

ಉ) **ಈ ವಾಕ್ಯಗಳನ್ನು ಗಮನಿಸಿ ಓದಿರಿ. ಅದರಂತೆ ಬಹುವಚನದಲ್ಲಿ ವಾಕ್ಯಗಳನ್ನು ರಚಿಸಿರಿ.**

ಮಾದರಿ: (ಏಕವಚನ) ನನ್ನ ಊರಿನಲ್ಲಿ ಕೆರೆ ಇದೆ

(ಬಹುವಚನ) ನಮ್ಮ ಊರಿನಲ್ಲಿ ಕೆರೆಗಳು ಇವೆ.

ಗೆರೆ ಹಾಕಿದ ಪದಗಳ ಅರ್ಥದಲ್ಲಿ ವ್ಯತ್ಯಾಸವಾಗಿದೆ . ವಿಚಾರ ಮಾಡಿ ತಿಳಿಯಿರಿ

ಊ) **ಕೆಳಗೆ ಕೆಲವು ಏಕವಚನ ವಾಕ್ಯಗಳನ್ನು ಕೊಟ್ಟಿದೆ ಅವುಗಳನ್ನು ಬಹುವಚನದಲ್ಲಿ ಪ್ರಯೋಗಿಸಿ.**

೧. ಶಿಲ್ಪಳ ಹತ್ತಿರ ಪುಸ್ತಕ ಇಲ್ಲ. ______________

೨. ನಮ್ಮೂರಲ್ಲಿ ಗಂಧದ ಗಿಡ ಇದೆ. ______________

೩.　ಅವನು ಬಹಳ ಜಾಣನು ________________

೪.　ಕೆರೆಯನ್ನು ಸಂರಕ್ಷಿಸಿ ________________

ಋ. ಈ ವಾಕ್ಯಗಳನ್ನು ಓದು. ವ್ಯತ್ಯಾಸ ತಿಳಿಯಿರಿ.

ಅವನು ಮನೆಗೆ ಹೋಗುತ್ತಾನೆ.

ಅವಳು ಮನೆಗೆ ಹೋಗುತ್ತಾಳೆ.

ಅದು ಮನೆಗೆ ಹೋಗುತ್ತದೆ.

ಅವನು (ಗಂಡು) **ಪುಲ್ಲಿಂಗ**

ಅವಳು (ಹೆಣ್ಣು) **ಸ್ತ್ರೀಲಿಂಗ**

ಅದು (ಗಂಡು ಅಲ್ಲ ಹೆಣ್ಣು ಅಲ್ಲ) **ನಪುಂಸಕಲಿಂಗ.**

ಎ. ಈ ತ್ರಿಪದಿ ಓದು– ಅರ್ಥ ತಿಳಿ.

ಆ ದೇವ, ಈ ದೇವ ಮಾದೇವ ನೆನಬೇಡ.
ದೇವರ ದೇವ ಭುವನದ ಪ್ರಾಣಿಗಳಿ
ಗಾದವನೆ ದೇವ ಸರ್ವಜ್ಞ

ಭಾವಾರ್ಥ : ಆ ದೇವರು, ಈ ದೇವರು, ಮಹಾದೇವರು ಎಂದು ನೆನೆಯಲು ಬೇಡ, ಎಲ್ಲ ದೇವರುಗಳಿಗೆ ಒಡೆಯನಾದವನು ಯಾರು ಗೊತ್ತೆ? ಕಷ್ಟಕ್ಕೆ ಆದವನೆ ದೇವರ ದೇವ ಎಂದು ಸರ್ವಜ್ಞ ಹೇಳುತ್ತಾನೆ.

ಈ ಕವಿತೆ ಓದಿ ಎರಡು ಪ್ರಶ್ನೆಗಳಿಗೆ ಉತ್ತರಿಸಿರಿ.

೧) ಯಾವ ದೇವರನ್ನು ನೆನೆಯಬೇಡ ಎನ್ನುತ್ತಾನೆ ?

೨) ದೇವರ ದೇವನಾರು ? ಏಕೆ ?

ಭಾಷಾ ಚಟುವಟಿಕೆ

ಈ ವಾಕ್ಯ ಖಂಡವನ್ನು ಓದಿ ನೀನೇ ಪ್ರಶ್ನೆಗಳನ್ನು ನಿನ್ನ ಸ್ನೇಹಿತನಿಗೆ ಕೇಳು.

ಕಾರಹುಣ್ಣಿಮೆ ಉತ್ತರ ಕರ್ನಾಟಕದ ದೊಡ್ಡ ಜನಪದ ಹಬ್ಬ. ಕಾರಹುಣ್ಣಿಮೆ ಎಂದರೆ ಮಳೆಗಾಲದ ಹುಣ್ಣಿಮೆ. ಆಗ ಧೋ! ಧೋ !! ಎಂದು ಮಳೆ ಸುರಿಯುತ್ತಿರುತ್ತದೆ. ಹೊಲಗದ್ದೆಗಳನ್ನು ಉಳುಮೆ ಪ್ರಾರಂಭಿಸುವ ದಿನಗಳವು. ಈ ಉಳುಮೆ ಕೆಲಸವನ್ನು ಮಾಡುವವರಾರು ?

ರೈತ. ಅವನೊಬ್ಬನಿಂದಲೇ ಉಳುಮೆ ಕೆಲಸ ಸಾಧ್ಯವೇ ? ಇಲ್ಲ. ಉಳುಮೆ ಕೆಲಸಕ್ಕೆ ಎತ್ತುಗಳು ಬೇಕು. ಅದಕ್ಕಾಗಿ ರೈತ ಅವುಗಳನ್ನು ಪೂಜಿಸುತ್ತಾನೆ. ಒಳ್ಳೆಯ ಆಹಾರ ಕೊಡುತ್ತಾನೆ. ಅದರ ಶಕ್ತಿ ಹೆಚ್ಚಿಸುತ್ತಾನೆ. ಇದರ ಜೊತೆಗೆ ಅವುಗಳ ಹಿರಿಮೆ ಹೆಚ್ಚಿಸಲು ಸ್ಪರ್ಧೆಗಳನ್ನು ಏರ್ಪಡಿಸುತ್ತಾನೆ.

@ KTBS NOT TO BE REPUBLISHED

೧ ರಿಂದ ೪ ಟನ್ ವರೆಗಿನ ಕಲ್ಲು ಬಂಡೆಗಳನ್ನು ಎಳೆಸುತ್ತಾರೆ. ಕರಿ ಹರಿಯುತ್ತಾರೆ. ರಾಯಚೂರಿನಲ್ಲಿ ಇದೊಂದು ಕಣ್ಣಿಗೆ ಹಬ್ಬ. ಮುನ್ನುರುಕಾಪು ಜನಾಂಗದವರು ಭರ್ಜರಿಯಾಗಿ ಆಚರಿಸುತ್ತಾರೆ. ನೋಡಿ ತಣಿಯಬೇಕು. ಇದೇ ರೀತಿ ಕರಾವಳಿ ಪ್ರದೇಶದಲ್ಲಿ ಕೋಣಗಳಿಗೆ ಕಂಬಳ ಎನ್ನುವ ಸ್ಪರ್ಧೆ ಏರ್ಪಡಿಸುತ್ತಾರೆ. ಕೆಸರು ಗದ್ದೆಗಳಲ್ಲಿ ಕಂಬಳದ ಓಟ ನೋಡಲು ಕಣ್ಣಿಗೆ ಹಬ್ಬ.





@ KTBS NOT TO BE REPUBLISHED

ಪ್ರಶ್ನೆಗಳನ್ನು ರಚಿಸಿರಿ :

೧) .... ?

೨) .... ?

೩) .... ?

೪) .... ?

೫) .... ?

ಪಾಠ : ೫

ಅಳಿಲು

ಪಾಠ ಪ್ರವೇಶ :

ನಮ್ಮ ಸುತ್ತಮುತ್ತಲು ಇರುವ ಜೀವ ಜಂತುಗಳನ್ನು ಗಮನಿಸಿರಿ. ಕೋಳಿ ಎಲ್ಲಿ ವಾಸಿಸುತ್ತದೆ ? ಏನನ್ನು ತಿನ್ನುತ್ತದೆ ? ಅದು ನಮಗೆ ಏನನ್ನು ನೀಡುತ್ತದೆ ? ಇದು ಪರಿಚಿತ ಪಕ್ಷಿ. ಹಾಗೆ ನೀವು ಮನೆಯಲ್ಲಿ ಹಿತ್ತಲಲ್ಲಿ, ಗಿಡಗಳಲ್ಲಿ ಗಮನವಿಟ್ಟು ನೋಡಿ. ಅಲ್ಲಿ ನಮಗೆ ಕಾಣುವ ಜೀವ ಜಂತುಗಳಾವುವು ? ಹೇಳಿರಿ?

ನೀವು ಹೋಗುತ್ತಿರುವ ರಸ್ತೆಯಲ್ಲಿ ಅಡ್ಡಲಾಗಿ ಮರವೊಂದು ಬಿದ್ದಿದೆ. ನಿಮ್ಮ ಗುಂಪಿನಲ್ಲಿ ಏಳೆಂಟು ಜನರಿದ್ದೀರಿ ಅಂದುಕೊಳ್ಳಿ. ಆಗ ನೀವೇನು ಮಾಡುವಿರಿ? ಯೋಚಿಸಿ ಹೇಳಿ. ಪಕ್ಕದ ರಾಜ್ಯದಲ್ಲಿ ನೆರೆಹಾವಳಿ ಉಂಟಾಗಿ ಜನ ಆಹಾರಕ್ಕಾಗಿ ದುಃಖಿಸುತ್ತಿದ್ದಾರೆ. ಅದಕ್ಕಾಗಿ ನಾವೇನು ಮಾಡಬಹುದು?

ಹೀಗೆ ಯೋಚಿಸಿದಾಗ ನೆರೆಹೊರೆಯವರಿಗೆ ಕೈಲಾದ ಸಹಾಯ ಮಾಡಬೇಕು. ಒಟ್ಟಾಗಿ ಸಮಸ್ಯೆಗಳನ್ನು ಎದುರಿಸುವ ಸಾಹಸ ಮನೋಭಾವ ಹೊಳೆಯುತ್ತದೆ. ಪರಸ್ಪರ ಅವಲಂಬನೆ ನಮ್ಮ ಕಣ್ಮುಂದೆ ಥಟ್ಟನೆ ಸುಳಿದಾಡುತ್ತದೆ. ಪ್ರಸ್ತುತ ಪಾಠದಲ್ಲಿ ಚಿಕ್ಕ ಪ್ರಾಣಿ ಅಳಿಲಿನ ಸೇವಾ ಮನೋಭಾವ ಹಾಗೂ ಭಕ್ತಿ ವಿವರಿಸಲ್ಪಟ್ಟಿದೆ. ಓದಿರಿ



ಅಳಿಲು ಒಂದು ಚಿಕ್ಕ ಸುಂದರ ಪ್ರಾಣಿ. ಪುಟ್ಟ ಪುಟ್ಟ ಕಾಲುಗಳಿಂದ ಪಟ ಪಟ ಓಡಾಡುತ್ತದೆ. ಇದು ಮರದ ಮೇಲೆ ಕೊರಳು ಕೊಂಕಿಸಿ ತಟ್ಟನೆ ಜಿಗಿದು ಕೊಂಬೆ ಕೊಂಬೆಗೆ ಹಾರುವುದು. ಸದಾ ಚೇತನದ ಚಿಲುಮೆ, ಅಳಿಲು ಚಿಂವ್ ಚಿಂವ್ ಎನ್ನುತ್ತ ಧ್ವನಿ ಮಾಡುತ್ತದೆ. ಸಪ್ಪಗೆ ಸುಮ್ಮನೆ ಕುಳಿತದ್ದೆ ಕಾಣದು. ಇದನ್ನು ನೋಡದವರಾರು? ಅಳಿಲು ಮರ ಗಿಡ ಬಳ್ಳಿ ತೋಟ ವನಗಳಲ್ಲಿ ಇರುತ್ತದೆ.

ಇದರ ಬಾಲ ಕರಿ ಹಾಗೂ ಬಿಳಿ ಕೇಸರಗಳಿಂದ ತುಂಬಿದೆ. ಉದ್ದನೆಯ ಚೆಂಡು ಹೂವಿನಂತಿದೆ. ಅದರ ಬೆನ್ನು ಕಂದು ಬಣ್ಣದ್ದು. ಅದರ ಮೇಲೆ ಮೂರು ನಾಮದ ಬಿಳಿ ಗೆರೆಗಳಿವೆ. ಅವು ತಲೆಯಿಂದ ಬಾಲದವರೆಗೆ ಚಾಚಿವೆ. ಇದರ ಮುಂಗಾಲು ಹಿಂಗಾಲುಗಳ ಮೇಲೆ ಎರಡು ಬಿಳಿ ನಾಮಗಳಿವೆ..

ಹೊಟ್ಟೆ ಹಾಲಿನ ಬಣ್ಣದ ಮೃದು ರೋಮಗಳಿಂದ ತುಂಬಿದೆ. ಅದರ ಕಿವಿಗಳು ಪುಟ್ಟ ಪುಟ್ಟ ತ್ರಿಕೋನಗಳು. ಇದರ ರೋಮಗಳು ರೇಷ್ಮೆಯಂತೆ ಇರುತ್ತವೆ.

ಇದು ಎಲ್ಲರ ಗಮನ ಸೆಳೆಯುವ ಮುದ್ದಿನ ಜೀವ. ಇದನ್ನು ಸಾಕಿದಲ್ಲಿ ಐದು–ಐದುವರೆ ವರ್ಷ ಜೀವಿಸಬಹುದು ಎಂದು ವಿಜ್ಞಾನಿಗಳು ಹೇಳುತ್ತಾರೆ. ಇದರ ಆಹಾರ ಎಳೆ ಹುಲ್ಲು, ಶೇಂಗಾ ಬೀಜ ಮತ್ತು ಹಣ್ಣು. ತನ್ನ ಆಹಾರವನ್ನು ಇತರ ಪಕ್ಷಿ – ಪ್ರಾಣಿಗಳ ಪಾಲಾಗದಂತೆ ರಕ್ಷಿಸಿಕೊಳ್ಳುತ್ತದೆ.

ಇದನ್ನು ಮನೆಯಲ್ಲಿ ಸಾಕಬಹುದು. ಇದರ ಓಡಾಟ, ಹಣ್ಣು ತಿನ್ನುವ ರೀತಿ ಮಕ್ಕಳಿಗೆ ಖುಷಿ ಕೊಡುತ್ತದೆ. ಇನ್ನೊಬ್ಬರಿಗೆ ಕೇಡು ಬಗೆಯುವ ಪ್ರಾಣಿ ಇದಲ್ಲ. ಇದು ಹುಲ್ಲಿನ ಗೂಡುಗಳಲ್ಲಿ ಒಂದು ಸಲಕ್ಕೆ ೨–೩ ಮರಿ ಹಾಕುತ್ತದೆ.

ಇದರ ಸೇವೆಯ ಬಗ್ಗೆ ಒಂದು ಕಥೆಯೇ ಬೆಳೆದು ಬಂದಿದೆ. ಶ್ರೀರಾಮನು ಲಂಕೆಗೆ ಹೋಗಲು ಸಮುದ್ರ ಅಡ್ಡವಿತ್ತು. ಆಗ ಕಪಿ ಸೈನ್ಯವು ದೊಡ್ಡ ದೊಡ್ಡ ಕಲ್ಲು, ಬಂಡೆಗಳನ್ನು ಸಮುದ್ರಕ್ಕೆ ಹಾಕಿ ಸೇತುವೆ ಕಟ್ಟುತ್ತಿದ್ದವು. ದೊಡ್ಡವರು – ಸಣ್ಣವರು , ಗಂಡಸರು–ಹೆಂಗಸರು, ಮಕ್ಕಳು–ಮರಿಗಳು ಎಲ್ಲರೂ ಸಮುದ್ರಕ್ಕೆ ಕಟ್ಟೆ ಕಟ್ಟಲು ದುಡಿಯುತ್ತಿದ್ದರು. ಕರ್ತವ್ಯದೊಡನೆ ಭಕ್ತಿ ಭಾವವೇ ತುಂಬಿತ್ತು. ಎಲ್ಲರ ಗುರಿ ಒಂದೇ ಲಂಕೆಗೆ ಸಂಪರ್ಕ ಸಾಧಿಸುವದು.

ಸತ್ಯ ಸಾಧನೆಗಾಗಿ ಸೇವೆ ಮೈ ತುಂಬಿ ಬಂದಿತ್ತು. ಕಪಿ ಸೈನ್ಯಕ್ಕೆ ಕಲ್ಲು ಹೊರುವಾಗ, ನಡೆಯುವಾಗ, ಸಮುದ್ರಕ್ಕೆ ಬೀಸುವಾಗ ಆಯಾಸವಾಗುತ್ತಿತ್ತು. ಆ ದಣಿವನ್ನು ನೀಗಲು ಶ್ರೀ ರಾಮ ಶ್ರೀ ರಾಮ ಎನ್ನುತ್ತಿದ್ದವು. ಸಮುದ್ರದ ಭೋರ್ಗರೆತ, ಭೀಕರತೆ, ನೋವು, ಸಾವು ಇವರನ್ನು ಬಾಧಿಸಲಿಲ್ಲ. ಚೈತನ್ಯ ಪಾದರಸದಂತೆ ಹರಿದಾಡಿದಂತ್ತಿತ್ತು.

ಈ ನೋಟವನ್ನು ಅಳಿಲುಗಳು ನೋಡಿದವು. ತಾವು ಈ ಮಹಾಕಾರ್ಯದಲ್ಲಿ ಭಾಗವಹಿಸಬೇಕೆಂಬ ಅಭಿಲಾಷೆ ಮೂಡಿತು. ಏನು ಮಾಡೋಣವೆಂದು ಆಲೋಚಿಸಿದವು. ತಮಗಂತೂ ಕಲ್ಲು ಹೊರುವ ಶಕ್ತಿಯಿಲ್ಲ. ಕಪಿಗಳಿಗೆ ಸಹಾಯ ಮಾಡೋಣವೆಂದರೆ ದೇಹದ ರೂಪ ಸಾಲದು. ಕಪಿ ಸೈನ್ಯಕ್ಕೆ ಆಹಾರ ಪೂರೈಕೆ ಕೆಲಸವು ಆಗದು. ಸಮಾಜಕ್ಕೆ, ರಾಷ್ಟ್ರಕ್ಕೆ ವಿಪತ್ತು ಬಂದಾಗ ಕೈಲಾದಷ್ಟು ಸಹಾಯ ಮಾಡಬೇಕು. ಆದರೆ ಏನು ಮಾಡುವುದು? ಎಂದು ಅಳಿಲುಗಳು ಚಿಂತಿಸುತ್ತಿದ್ದವು. ಆ ಸಂದರ್ಭದಲ್ಲಿ ಎರಡು ಮರಿ ಅಳಿಲುಗಳು ಸಾಗರದ ಉಸುಕಿನಲ್ಲಿ ಏಳುತ್ತ –ಬೀಳುತ್ತ ಆಡುತ್ತಿದ್ದವು. ತಮ್ಮ ದೇಹದ, ಕೂದಲುಗಳಿಗೆ ಮರಳು ಮೆತ್ತಿದಾಗ ಮೈ ಕೊಡವಿಕೊಳ್ಳುತ್ತಿದ್ದವು. ಆಗ ಸಾಕಷ್ಟು ಉಸುಕು ಬಿತ್ತು. ಅದನ್ನು ಗಮನಿಸಿದ ತರುಣ ಅಳಿಲಿಗೆ, ತಕ್ಷಣ ವಿಚಾರ ಹೊಳೆಯಿತು. “ಬಂಧುಗಳೆ, ಸ್ನೇಹಿತರೆ ನಾವು ನಾಡು ಕಟ್ಟುವಲ್ಲಿ ಸಹಾಯ ಮಾಡೋಣ. ಸಮುದ್ರಕ್ಕೆ ಸೇತುವೆ ನಿರ್ಮಾಣದಲ್ಲಿ ದುಡಿಯೋಣ. ಎಲ್ಲರೂ ಉಸುಕಿನಲ್ಲಿ ಹೊರಳಾಡಿರಿ. ನಿಮ್ಮ ದೇಹಕ್ಕೆ ರೋಮಗಳಿಗೆ ಸಾಕಷ್ಟು ಉಸುಕು ಮೆತ್ತುತ್ತದೆ. ಸೇತುವೆ ಕಟ್ಟುವಲ್ಲಿ ಹೋಗಿರಿ. ಎರಡು ಕಲ್ಲುಗಳ ಮಧ್ಯೆ ಇರುವ ಸಂದಿನಲ್ಲಿ ಮೈ ಕೊಡವಿರಿ ಝಾಡಿಸಿರಿ. ಉಸುಕು ಕಲ್ಲಿನ ಸಂದು ಮುಚ್ಚಲಿ. ಸೇತುವೆ ಗಟ್ಟಿಯಾಗುತ್ತದೆ” ಎಂದಾಗ ಎಲ್ಲರಲ್ಲಿಯೂ ರಾಷ್ಟ್ರಭಕ್ತಿ ಭಾವ ಬೆಳೆದು ನಿಂತಿತು.

© KTBS NOT TO BE REPUBLISHED

ಧನ್ಯತಾ ಭಾವ ಗರಿಗೆದರಿತು. ಎಲ್ಲರು ಸಿದ್ಧರಾದರು. ಅಳಿಲುಗಳು ಉಸುಕಿಗೆ ಬಿದ್ದವು. ಸೇತುವೆ ಮೇಲೆ ಕಲ್ಲುಗಳ ಸಂದಿಯಲ್ಲಿ ಮೈಕೊಡುವಿದವು. ಕಲ್ಲಿನ ಸಂದಿ ಗೊಂದಿಗಳು ಮುಚ್ಚಿದವು. ಸೇತುವೆ ಗಟ್ಟಿಯಾಯಿತು.

ರಾಮ, ಲಕ್ಷ್ಮಣರು ಈ ದೃಶ್ಯ ನೋಡಿದರು. ಹೃದಯ ತುಂಬಿ ಬಂತು. “ ಈ ಭೂಮಿಯಲ್ಲಿ ದು:ಖಿಗಳನ್ನು ನೋಡಿ ಮರುಗದಿರುವ ಜೀವವು ಜೀವವೇ ಅಲ್ಲ. ಇದಕ್ಕೆ ಈ ಅಳಿಲುಗಳು ಸಾಕ್ಷಿಯಾಗಿವೆ” ಎಂದರು.

ಪ್ರೀತಿಯಿಂದ ಅವುಗಳ ಹತ್ತಿರ ಬಂದರು. ರಾಮನು ಕಣ್ತುಂಬ ಅಳಿಲುಗಳನ್ನು ನೋಡಿದ. ಅಂತ:ಕರಣ ಉಕ್ಕಿತು. ಅವುಗಳನ್ನು ಹಿಡಿದುಕೊಂಡು ಬೆನ್ನಮೇಲೆ ಕೈ ನೇವರಿಸಿದ. ತನ್ನ ಕೃತಜ್ಞತೆಯನ್ನು ಸೂಚಿಸಿದ. ಅಳಿಲುಗಳಿಗೆ ಸಂತೋಷವಾಯಿತು. ಅಂದಿನಿಂದ ಈ ಅಳಿಲುಗಳ ಬೆನ್ನಿನ ಮೇಲೆ ರಾಮನ ಮೂರು ಕೈ ಬೆರಳುಗಳು ಮೂಡಿದವು ಎಂಬುದು ಪ್ರತೀತಿ.

ಅದಕ್ಕಾಗಿ ‘ಅಳಿಲು ಸೇವೆ, ಮಳಲ ಭಕ್ತಿ’ ಎಂಬ ಗಾದೆ ಮಾತು ಹುಟ್ಟಿ ಬಂದಿದೆ.



ಓದಿ – ತಿಳಿ

ಕೊಂಕಿಸು–ತಿರುವು, ಡೊಂಕಿಸು. ಅಭಿಲಾಷೆ– ಬಯಕೆ, ರೋಮ– ಕೂದಲು, ಕಾರ್ಯ– ಕೆಲಸ

ತ್ರಿಕೋನ– ಮೂರುಕೋನದ ಆಕೃತಿ, ಪೂರೈಕೆ– ಒದಗಿಸುವಿಕೆ, ರಕ್ಷಿಸು– ಕಾಪಾಡು, ಉಸುಕು– ಮರಳು.

ಖುಷಿ– ಸಂತೋಷ, ಝಾಡಿಸು– ಕೊಡವು, ಒದರು, ಕೇಡು– ಕೆಡಕು, ತಕ್ಷಣ – ಕೂಡಲೇ, ಅಡ್ಡ– ತಡೆ ಕರ್ತವ್ಯ– ಮಾಡಬೇಕಾದ ಕೆಲಸ, ದೃಶ್ಯ– ನೋಟ, ಸತ್ಯ– ನಿಜ, ದು:ಖ– ನೋವು,ಸಂಕಟ, ಆಯಾಸ– ದಣಿವು, ಅಚ್ಚರಿ – ಆಶ್ಚರ್ಯ, ಸೋಜಿಗ, ಸಂತೋಷ– ಆನಂದ, ಒಳಿತು– ಒಳ್ಳೆಯದು, ಮಳಲು– ಮರಳು

ಗಮನಿಸಿ – ತಿಳಿ

ಮುದ್ದಿನ – ಪ್ರೀತಿಯ, ಲಂಕೆ– ಒಂದು ದ್ವೀಪ, ಸೇತುವೆ– ನದಿ ದಾಟಲು ಅಡ್ಡಲಾಗಿ ಕಟ್ಟಿದ ರಚನೆ, ಧನ್ಯತಾಭಾವ– ಕೃತಜ್ಞತಾ ಭಾವ, ಭೋರ್ಗರೆತ– ಸಮುದ್ರ ಉಕ್ಕಿ ಬರುವಾಗ ಉಂಟು ಮಾಡುವ ಧ್ವನಿ, ಚೈತನ್ಯ– ಚೇತನ ಶಕ್ತಿ, ಭೀಕರತೆ– ಭಯವನ್ನುಂಟುಮಾಡುವ ಪ್ರಸಂಗ, ಕೈನೇವರಿಸು– ಸಮಾಧಾನ ಪಡಿಸು, ಗರಿಗೆದರು– ಉತ್ಸಾಹ ತೋರಿಸು, ತಯಾರಾಗು. ಕೃತಜ್ಞತೆ– ಉಪಕಾರ ಸ್ಮರಣೆ. ಕಣ್ತುಂಬ– ಕಣ್ಣಿನಲ್ಲಿ ತುಂಬಿಕೊಳ್ಳವುದು, ಕೈಕಟ್ಟಿ ಕುಳಿತುಕೊ–ಸುಮ್ಮನೆ ಇರು, ಪಾದರಸ– ಬಿಳಿ ಲೋಹ, ಅದು ಬಹಳ ಚುರುಕು, ಸಣ್ಣ ಏರಿಳಿತವನ್ನು ಸಹ ತೋರಿಸುತ್ತದೆ. ಪ್ರತೀತಿ– ಜನಜನಿತವಾಗಿ ಬಂದ ತಿಳುವಳಿಕೆ, ಸಂದಿಗೊಂದಿಗಳು– ತೂತುಗಳು, ಬಿಲ.

ಅ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ಅಳಿಲು ಮರದ ಮೇಲೆ ಜಿಗಿಯುವ ರೀತಿಯನ್ನು ಹೇಳಿರಿ.

೨. ಸಾಮಾನ್ಯವಾಗಿ ಅಳಿಲು ಎಲ್ಲೆಲ್ಲಿ ಇರುತ್ತದೆ?

೩. ಅಳಿಲಿನ ಬಾಲ ಯಾವುದರಂತೆ ಇದೆ?

೪. ಅಳಿಲು ಏನನ್ನು ತಿನ್ನುತ್ತದೆ?

೫. ಮಕ್ಕಳಿಗೆ ಅಳಿಲು ಯಾವ ರೀತಿ ಖುಷಿ ಕೊಡುತ್ತದೆ?

೬. ಕಪಿ ಸೈನ್ಯ ಏನು ಮಾಡುತ್ತಿತ್ತು?

೭. ಕಪಿಗಳಿಗೆ ಯಾವ ಸಾಧನೆಗಾಗಿ ಮೈ ತುಂಬಿ ಬಂದಿತು?

೮. ಕಪಿ ಸೈನ್ಯ ದಣಿವನ್ನು ನೀಗಲು ಏನು ಅನ್ನುತ್ತಿದ್ದವು?

೯. ಸೇತುವೆ ಕಟ್ಟುವುದನ್ನು ನೋಡಿ ಅಳಿಲುಗಳಿಗೆ ಯಾವ ಅಭಿಲಾಷೆ ಮೂಡಿತು?

೧೦. ರಾಮನು ಅಳಿಲುಗಳನ್ನು ನೋಡಿ ಏನು ಮಾಡಿದನು?

ಆ. ಎರಡು– ಮೂರು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಅಳಿಲು ಸದಾ ಚೇತನದ ಚಿಲುಮೆ ಎನ್ನಲು ಕಾರಣವೇನು? ತಿಳಿಸಿರಿ

೨. ಸಮುದ್ರಕ್ಕೆ ಸೇತುವೆ ಕಟ್ಟಲು ಯಾರು ಯಾರು ದುಡಿಯುತ್ತಿದ್ದರು?

© KTBS NOT TO BE REPUBLISHED

೩. ತರುಣ ಅಳಿಲಿಗೆ ಹೊಳೆದ ವಿಚಾರವೇನು?

೪. ರಾಮ– ಲಕ್ಷ್ಮಣರು ಅಳಿಲುಗಳ ಸೇವೆ ಕಂಡು ಏನೆಂದರು?

ಇ. "ಅಳಿಲು ಸೇವೆ ಮಳಲ ಭಕ್ತಿ' ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.

____

____

____

____

ಈ. ಈ ಕೆಳಗಿನ ಶಬ್ದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿರಿ.

ಅಭಿಲಾಷೆ : ______________________

ಗರಿಗೆದರು : ______________________

ಸುಂದರ : ______________________

ಪುಟ್ಟ ಪುಟ್ಟ : ______________________

ಖುಷಿ ಕೊಡು : ______________________

@ KTBS
NOT TO BE REPUBLISHED

ಉ. ಹೊಂದಿಸಿ ಬರೆಯಿರಿ.

ಅ	ಬ	
ಅ. ಕೊರಳುಕೊಂಕಿಸಿ	ಬದುಕು ಸಾಗದು	________
ಆ. ಗಮನ ಸೆಳೆಯುವ	ಕಲ್ಲಿನ ಸಂದು ಮುಚ್ಚಲಿ	________
ಇ. ಸಮುದ್ರದ	ಕೊಂಬೆಗೆ ಹಾರುವುದು	________
ಈ. ಉಸುಕು	ಭೋರ್ಗರೆತ	________
ಉ. ಕೈ ಕಟ್ಟಿ ಕುಳಿತರೆ	ಮುದ್ದಿನ ಜೀವ	________

ಊ. ಸೂಕ್ತ ಪದ ಆರಿಸಿ ಬಿಟ್ಟ ಸ್ಥಳ ತುಂಬಿರಿ.

೧. ಅಳಿಲಿನ ಬೆನ್ನ ಮೇಲೆ ಇರುವ ಗೆರೆಗಳು ____________

ಅ. ಒಂದು ಆ. ಎರಡು ಇ. ನಾಲ್ಕು ಈ. ಮೂರು

೨. ಶ್ರೀರಾಮನು ಲಂಕೆಗೆ ಹೋಗಲು ಅಡ್ಡವಿದ್ದುದು ________

ಅ. ಗೋಡೆ ಆ. ನದಿ ಇ. ಸಮುದ್ರ ಈ. ಬೆಟ್ಟ

೩. ಈ ಭೂಮಿಯಲ್ಲಿ ಇವರನ್ನು ನೋಡಿ ಮರುಗದಿಹ ಜೀವವೇ ಅಲ್ಲ

ಅ. ಧನಿಕರನ್ನು ಆ. ಬಡವರನ್ನು ಇ. ಸುಖಗಳನ್ನು ಈ. ದು:ಖಗಳನ್ನು

೪. ಶ್ರೀರಾಮ ಅಳಿಲುಗಳ ಬೆನ್ನ ಮೇಲೆ ಕೈಯಾಡಿಸಿ ಸೂಚಿಸಿದುದು________

ಅ. ಕೃತಜ್ಞತೆ ಆ. ಸಿಟ್ಟು ಇ. ಪ್ರೀತಿ ಈ. ಸಂತೋಷ

೫. ಮುದ್ದಿನ ಜೀವಿ ಎಂದರೆ ____________

ಅ. ಬೆಕ್ಕು ಆ. ಇಲಿ ಇ. ಅಳಿಲು ಈ. ನಾಯಿ

ಅಭ್ಯಾಸ ಚಟುವಟಿಕೆ

ಅ. ಅಳಿಲು , ನಾಯಿ, ನರಿ, ಬೆಕ್ಕು, ಗಿಳಿ, ಕೋಗಿಲೆಗಳಂತೆ ಕೂಗಿ ತೋರಿಸು.

ಆ. ಅಳಿಲಿನ ಬಗ್ಗೆ ಕಥೆ ಹೇಳು

ಇ. ಈ ಪ್ರಾಣಿಗಳ ಚಿತ್ರ ಅಂಟಿಸಿ ಪ್ರತಿ ಪ್ರಾಣಿಯ ಬಗ್ಗೆಯೂ ನಾಲ್ಕು ವಾಕ್ಯಗಳಲ್ಲಿ ಮಾಹಿತಿ ನೀಡಿರಿ.

ನಾಯಿ ಕುದುರೆ ಆನೆ

____

____

____

____

@ KTBS NOT TO BE REPUBLISHED

ಈ. ಈ ವಾಕ್ಯಗಳನ್ನು ಓದಿರಿ.

ನಿನ್ನ ಹುಟ್ಟೂರು ಯಾವುದು?

ನಿನ್ನ ತಂದೆ ತಾಯಿಗಳ ಹೆಸರೇನು?

ನಿನ್ನ ತಂದೆ ಎಲ್ಲಿ ಕೆಲಸ ಮಾಡುತ್ತಿದ್ದಾರೆ?

ನಿನ್ನ ಗೆಳೆಯರು ಯಾರು ಯಾರು ?

ನೀನು ಶಾಲೆಗೆ ಏಕೆ ಬರುತ್ತಿರುವೆ?

ಇವೆಲ್ಲ ಪ್ರಶ್ನೆಗಳನ್ನು ವಿಷಯ ತಿಳಿಯಲು ಪ್ರಶ್ನೆ ಮಾಡುತ್ತಾರೆ. ಉತ್ತರ ಪಡೆಯುತ್ತಾರೆ. ಇವುಗಳನ್ನು ಪ್ರಶ್ನಾರ್ಥಕ ವಾಕ್ಯವೆಂದು ಹೇಳುತ್ತಾರೆ.

ಭಾಷಾ ಚಟುವಟಿಕೆ

ಈ ಪ್ರಶ್ನೆಗಳಿಗೆ ಉತ್ತರಿಸಿರಿ. ವಿಚಾರಮಾಡಿರಿ. ಖಂಡಿತವಾಗಿ ನಿಮ್ಮಲ್ಲಿ ಬದಲಾವಣೆ ಯಾಗುತ್ತದೆ.

೧. ಮಗು , ನೀನು ಬೆಳಿಗ್ಗೆ ಎಷ್ಟು ಹೊತ್ತಿಗೆ ಏಳುತ್ತಿಯಾ?

೨. ಆಗ ಏನೇನು ಮಾಡುವೆ? ಪಟ್ಟಿ ಮಾಡಿಕೊಂಡು ಕ್ರಮವಾಗಿ ಹೇಳು.

೩. ಬೆಳಗಿನ ಹೊತ್ತು ವ್ಯಾಯಾಮ ಮಾಡುತ್ತಿಯಾ? ಮಾಡುತ್ತಿದ್ದರೆ ಎಷ್ಟು ಹೊತ್ತು ಮಾಡುತ್ತಿಯಾ?

ಒಂದು ತಾಸು ವ್ಯಾಯಮ ಮಾಡುತ್ತಿದ್ದರೆ ನೀನು 'ಎ' ಗ್ರೇಡ್ ಮಗು.

೪. ಬೆಳಗಿನ ಹೊತ್ತು ಕನಿಷ್ಠ ಒಂದು ತಾಸು ಓದಬೇಕೆಂದು ಹಿರಿಯರು ಹೇಳುತ್ತಾರೆ. ನೀನು ಎಷ್ಟು ಹೊತ್ತು ಓದುವೆ?

೫. ಊಟಮಾಡುವ ಮುನ್ನ ಕೈ ಕಾಲು ತೊಳೆಯಬೇಕು ಎಂದು ಹೇಳುತ್ತಾರೆ ನೀನು ತೊಳೆದುಕೊಳ್ಳುವಿಯಾ?

೬. ಶಾಲೆಯಲ್ಲಿ ಪಾಠಗಳನ್ನು ಲಕ್ಷ್ಯವಿಟ್ಟು ಕೇಳಬೇಕು. ತಿಳಿಯದೆ ಇರುವಾಗ ಗುರುಗಳಿಗೆ ಪ್ರಶ್ನೆ ಕೇಳುವಿಯಾ?

೭. ಸಾಯಂಕಾಲ ಆಟವಾಡುವಿಯಾ?

೮. ರಾತ್ರಿ ಎರಡು ತಾಸು ಓದುವಿಯಾ?

✤ ✤ ✤

@ KTBS NOT TO BE REPUBLISHED

ಪಾಠ ೬

ಎದೆಗುಂದದ ಧೀರರು

ಪಾಠ ಪ್ರವೇಶ :

ಪ್ರತಿಯೊಬ್ಬ ಮನುಷ್ಯನ ಜೀವನ ಬೆಲೆ ಬಾಳುವಂತಹುದು. ಜೀವನದಲ್ಲಿ ಕಷ್ಟ, ಅಪಾಯ ತೊಂದರೆಗಳು ಬರುವುದು ಸಹಜ. ಅದಕ್ಕೆ ಧೈರ್ಯಗೆಡದೆ ವಿಚಾರ ಮಾಡಬೇಕು. ಸಮಯ ಪ್ರಜ್ಞೆ ಬಳಸಬೇಕು. ಜಾಣ್ಮೆಯನ್ನು ಪ್ರದರ್ಶಿಸಿ ಕಷ್ಟದಿಂದ ಹೊರಬರಬೇಕು. ಅದುವೆ ಜೀವನ.

ಬಸ್ ಅಪಘಾತದಲ್ಲಿ ಸುಧಾಚಂದ್ರನ್ ಎಂಬ ಹುಡುಗಿ ಕಾಲು ಕಳೆದುಕೊಂಡಳು. ಧೈರ್ಯಗೆಡದೆ ಕೃತಕ ಕಾಲು ಹಾಕಿಸಿಕೊಂಡಳು. ನೃತ್ಯ ಮಾಡಿದಳು. ಸಾಹಸ ಮೆರೆಸಿದಳು. ಅವಳ ಮಯೂರಿ ನೃತ್ಯ ಜನಪ್ರಿಯತೆ ಹಾಗೂ ಅಪಾರಕೀರ್ತಿ ತಂದುಕೊಟ್ಟಿತು.

ನನಗೆ ಕಾಲಿಲ್ಲವೆಂದು ಅವಳು ಕುಳಿತಿದ್ದರೆ, ಅವಳ ಬದುಕು ಅವಳಿಗೆ ಹೊರೆಯಾಗುತ್ತಿತ್ತು ನಿಮಗೆ ಗೊತ್ತಿರುವ ಇಂತಹ ಉದಾಹರಣೆ ಹೇಳಿರಿ. ಕುಂಟ, ಕುರುಡ, ಕಿವುಡ, ಮೂಗ, ಅಸಹಾಯಕರು ಅಪಾಯಕ್ಕೆ ಸಿಲುಕಿದಾಗ ನೀವೇನು ಮಾಡುವಿರಿ ಹೇಳಿರಿ. ತರಗತಿಯಲ್ಲಿ ಚರ್ಚಿಸಿ. ನೀವು ಸಹಾಯ ಮಾಡುವ ಕ್ರಮಗಳನ್ನು ಪಟ್ಟಿ ಮಾಡಿ



ಜೂಲಿಯೋ ಇಗ್ಲೇಶಿಯಸ್

ಸ್ಪೇನ್ ದೇಶದ ಬಾಲಕ ಜೂಲಿಯೋ ಇಗ್ಲೇಶಿಯಸ್. ತನ್ನ ಹತ್ತನೆಯ ವಯಸ್ಸಿನಲ್ಲಿಯೇ ಫುಟ್‌ಬಾಲ್ ಆಟಗಾರನಾಗುವ ಕನಸು ಕಂಡನು. ದಿನದ ಹೆಚ್ಚಿನ ಭಾಗವನ್ನು ಫುಟ್ಬಾಲ್ ಆಡುವುದರಲ್ಲಿಯೇ ಕಳೆದನು. ತಾನು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಪಂದ್ಯಗಳಲ್ಲಿ ಭಾಗವಹಿಸಬೇಕೆಂಬ ಆಸೆ. ದೇಶಕ್ಕೆ ಕೀರ್ತಿ ತರಬೇಕೆಂಬ ಹಂಬಲ. ಅದಕ್ಕಾಗಿ 'ರಿಯಲ್ ಮ್ಯಾಡ್ರಿಡ್ ಕ್ಲಬ್' ಸೇರಿದ. ನಿರಂತರ ಅಭ್ಯಾಸ ಮಾಡಿದ ತನ್ನ ಇಪ್ಪತ್ತನೆಯ ವಯಸ್ಸಿಗೆ ಉತ್ತಮ ಗೋಲ್ ಕೀಪರ್ ಎಂಬ ಖ್ಯಾತಿ ಪಡೆದನು. ರಾಷ್ಟ್ರ ಮಟ್ಟಕ್ಕೆ ಬೆಳೆದನು. ಆದರೆ ೧೯೬೩ರಲ್ಲಿ ಸ್ನೇಹಿತರ ಜೊತೆ ಕಾರಿನಲ್ಲಿ ಹೋಗುವಾಗ ಭೀಕರ ಅಪಘಾತಕ್ಕೆ ಒಳಗಾದ. ಆಸ್ಪತ್ರೆ ಸೇರಿದ. ಅಲ್ಲಿ ಚಿಕಿತ್ಸೆಯೇನೋ ನಡೆಯಿತು. ಆದರೆ ಸೊಂಟದ ಕೆಳಭಾಗ ಸಂಪೂರ್ಣ ಶಕ್ತಿಯನ್ನು ಕಳೆದುಕೊಂಡಿತು.ಇದರಿಂದ ವಿಶ್ವದ ಗೋಲ್‌ಕೀಪರನಾಗುವ ಅವನ ಕನಸು ನುಚ್ಚುನೂರಾಯಿತು.

ಜೂಲಿಯೋ ಗುಣಮುಖನಾಗಲು ತುಂಬ ದಿನಗಳು ಬೇಕಾದವು. ಇದರಿಂದ ಅವನಲ್ಲಿ ದು:ಖ, ಕೋಪ ಮನೆಮಾಡಿತು. ಮನನೊಂದನು. ನೋವು ಮರೆಯಲು ಹಾಡುಗಳನ್ನು ಬರೆದು ತಾನೆ ಹಾಡತೊಡಗಿದ. ಅವನ ಇಂಪಾದ ಧ್ವನಿ ಗಮನಿಸಿದ ದಾದಿಯೊಬ್ಬಳು ಗಿಟಾರೊಂದನ್ನು ತಂದು ಕೊಟ್ಟಳು. ಅವನೆಂದೂ ಅದುವರೆಗೆ ಗಿಟಾರನ್ನು ಮುಟ್ಟಿರಲಿಲ್ಲ. ಆದರೂ ಗಿಟಾರನ್ನು ನುಡಿಸುತ್ತ ಹಾಡತೊಡಗಿದ. ಹೀಗೆ ೧೮ ತಿಂಗಳು ಆಸ್ಪತ್ರೆಯಲ್ಲಿ ಕಳೆದನು. ಈಗ ಜೂಲಿಯೋ ಹಾಡುವುದರಲ್ಲಿ ಮತ್ತು ಗಿಟಾರ್ ನುಡಿಸುವುದರಲ್ಲಿ ಪರಿಣತಿ ಪಡೆದನು. ಅದು ಅವನ ಆತ್ಮ ವಿಶ್ವಾಸವನ್ನು ಹೆಚ್ಚಿಸಿತ್ತು.

© KTBS NOT TO BE REPUBLISHED

ತಾನೇ ಹಾಡುಗಳನ್ನು ಬರೆದ. ಹಾಡಿನಲ್ಲಿ ತಲ್ಲೀನನಾದ. **"ಜೀವನ ಹೀಗೆ ಸಾಗುತ್ತಿದೆ"** ಎಂಬ ಹೆಸರಿನ ಹಾಡುಗಳ ಅಲ್ಬಂಗಳನ್ನು ಹೊರತಂದನು. ಅದು ವಿಶ್ವಾದ್ಯಂತ ಜನಪ್ರಿಯವಾಗಿ ೩೦೦ ಮಿಲಿಯನ್ ಅಲ್ಬಂಗಳು ಮಾರಾಟವಾದವು. ವಿಶ್ವದ ಹತ್ತು ಪ್ರಮುಖ ಗಾಯಕರಲ್ಲಿ ಜೂಲಿಯೋ ಸಹ ಒಬ್ಬನಾದನು. ಅವನು ಈಗ ಶ್ರೇಷ್ಠ ಕಲಾವಿದನಾಗಿ ಕೋಟ್ಯಂತರ ಸಂಗೀತ ಪ್ರೇಮಿಗಳ ಕಣ್ಮಣಿಯಾದನು. ಜೀವನದಲ್ಲಿ ವಿಫಲತೆಯಿಂದ ಎದೆಗುಂದಬಾರದು. ಅದೃಷ್ಟದ ಒಂದು ಬಾಗಿಲು ಮುಚ್ಚಿದರೆ ಇನ್ನೊಂದು ದಾರಿ ತೆರೆದುಕೊಳ್ಳುತ್ತದೆ ಎಂದು ಹೇಳಿದನು. ಅದಕ್ಕೆ ಅವನ ಜೀವನವೇ ಸಾಕ್ಷಿ.

* * * * *


ಜಿತೇಂದ್ರನಾಥ ಮುಖರ್ಜಿ

ಬಂಗಾಳದ ಒಬ್ಬ ಪುಟ್ಟ ಬಾಲಕ ಕುಗ್ರಾಮವೊಂದರ ನದಿಯಲ್ಲಿ ಈಜಲು ಹೋಗಿದ್ದ. ಆ ನದಿಯಲ್ಲಿ ತುಂಬ ಜೊಂಡು ಬೆಳೆದಿತ್ತು. ಆ ಬಾಲಕ ಜೊಂಡಿನೊಳಗೆ ತನ್ನ ಕಾಲನ್ನು ಸಿಕ್ಕಿಸಿಕೊಂಡನು. ಹೊರಬರಲು ಒದ್ದಾಡುತ್ತಿದ್ದನು. ನದಿಯ ದಡದ ಮೇಲೆ ಜನರು ನಿಂತು ನೋಡುತ್ತಿದ್ದರು. ಅವರಿಗೆ ನದಿಯಲ್ಲಿ ಇಳಿಯಲು ಭಯ. ಈ ಸುದ್ದಿಯು ಅವನ ತಾಯಿಗೆ ತಿಳಿಯಿತು. ಅವಳು ಗಾಬರಿಯಿಂದ ನದಿಯ ಬಳಿಗೆ ಬಂದಳು. ಅಲ್ಲಿದ್ದ ಹಿರಿಯರು ಆ ತಾಯಿಗೆ ಸಮಾಧಾನ ಹೇಳಿದರು. ಜನರು ಬಾಲಕನನ್ನು ರಕ್ಷಿಸಲು ಯುವಕರನ್ನು ಕೇಳಿಕೊಂಡರು. ಆಗ ಹುಡುಗ ಅಲ್ಲಿಂದಲೆ ಜೋರಾಗಿ ಹೇಳಿದ. 'ನೀವ್ಯಾರು ನನ್ನ ಸಹಾಯಕ್ಕೆ ಬರಬೇಡಿ. ನಾನೆ ಈ ಜೊಂಡಿನಿಂದ ಬಿಡಿಸಿಕೊಂಡು ಬರುವೆ'. ಮಗನ ಮಾತನ್ನು ತಾಯಿ ಅನುಮೋದಿಸಿದಳು. "ದಯವಿಟ್ಟು ನೀವ್ಯಾರು ನದಿಗೆ ಧುಮುಕಬೇಡಿ. ನನ್ನ ಮಗ ಉಳಿಯಬೇಕೆಂಬುದು ನನ್ನಾಸೆ ಕೂಡ. ಆದರೆ ಅವನ ಕಷ್ಟವನ್ನು ಅವನೇ ಎದುರಿಸಲಿ. ಅವನೇ ಅದರಿಂದ ಪಾರಾಗಲಿ" ಎಂದು ಹೇಳಿದಳು. ಸ್ವಲ್ಪ ಸಮಯದ ನಂತರ ಹುಡುಗ ಸರ್ವ ಪ್ರಯತ್ನದಿಂದ ಈಜಿ ದಡ ತಲುಪಿದ. "ಅಮ್ಮ ನೋಡು! ನಾನು ಬಂದುಬಿಟ್ಟೆ. ಜೊಂಡನ್ನು ಹರಿದು ಬಂದೆ" ಎಂದು ಎದೆಸೆಟೆಸಿ ನುಡಿದ. ತಾಯಿ ಹೆಮ್ಮೆಯಿಂದ ಮಗನ ಕಡೆ ನೋಡಿದಳು. "ನನಗೆ ಗೊತ್ತಿತ್ತು ಮಗು. ನೀನು ಎಂತಹ ಕಷ್ಟವನ್ನಾದರೂ ಜಯಿಸಿ ಬರುವೆಯೆಂಬ ನಂಬಿಕೆ ನನಗಿದೆ" ತಾಯಿಯ ನಂಬಿಕೆಯನ್ನು ಎಂದೂ ಸುಳ್ಳಾಗಿಸಲಿಲ್ಲ. ಆ ಹುಡುಗನೇ ಜಿತೇಂದ್ರನಾಥ ಮುಖರ್ಜಿ.

ಈತ ಒಮ್ಮೆ ಕಾಡಿನಲ್ಲಿ ಹೋಗುತ್ತಿದ್ದ. ಇದ್ದಕ್ಕಿದಂತೆ ಹುಲಿಯೊಂದು ಎದುರಿಗೆ ಬಂತು. ಗರ್ಜಿಸಲು ಪ್ರಾರಂಭಿಸಿತು. ಜತೀನ ತನ್ನ ಸೊಂಟದಲ್ಲಿ ಸಿಕ್ಕಿಸಿಕೊಂಡ ಕತ್ತಿಯನ್ನು ಎತ್ತಿದ. ಒಬ್ಬಂಟಿಗನಾಗಿ ಹುಲಿಯನ್ನು ಎದುರಿಸಿದ. ಅವನ ಸಂಗಡಿಗರು ಭಯ ಬಿದ್ದು ಓಡಿದರು. ಊರಿನವರನ್ನು ಕರೆ ತಂದರು. ಅಷ್ಟರಲ್ಲಿ ಜತೀನ ಹುಲಿಯನ್ನು ಕೊಂದು, ಅದರ ದೇಹದ ಮೇಲೆ ಕಾಲಿಟ್ಟು ನಿಂತಿದ್ದ. ಅಲ್ಲಿಗೆ ಬಂದ ಜನರು ಅವನ ಶೌರ್ಯವನ್ನು ಕಂಡು ಬೆರಗಾದರು. ಇವನನ್ನು **"ಬಾಘ ಜತೀನ'** ಎಂದು ಕರೆದರು. ಅನಂತರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದನು. ಕ್ರಾಂತಿಕಾರಿಯೆಂಬ ಹಣೆ ಪಟ್ಟಿ ಹೊತ್ತನು. ಬ್ರಿಟಿಷರ ಗುಂಡಿಗೆ ಎದೆಯೊಡ್ಡಿ ಅಮರನಾದನು.

© KTBS NOT TO BE REPUBLISHED

ಪರಿಚಯ:



ಎಂ.ಎನ್. ಸುಂದರರಾಜ ಅವರು ನಿವೃತ್ತ ಪ್ರಾಧ್ಯಾಪಕರು. ಇವರು ಚಿತ್ರದುರ್ಗ ಜಿಲ್ಲೆಯ ದುಮ್ಮಿಯವರು. ಅವರು ಅಂಕಣ ಬರಹಗಾರರಾಗಿ, ಲೇಖಕರಾಗಿ ಪ್ರಸಿದ್ಧರಾಗಿದ್ದಾರೆ. ಇಲ್ಲಿ ನಮೂದಿಸಿರುವ ಘಟನೆಗಳನ್ನು **'ಹಿರಿಯರ ಹಾದಿ'** ಪುಸ್ತಕದಿಂದ ಆರಿಸಿಕೊಳ್ಳಲಾಗಿದೆ. ಇವರ ಕೃತಿಗಳೆಂದರೆ **'ಹುಡುಕಾಟ'** ಮತ್ತು **'ನನ್ನ ಜೀವನ ಮತ್ತು ನನ್ನ ಹಾದಿ'**.

ಓದಿ – ತಿಳಿ

ಭೀಕರ–ಭಯಂಕರ, ಚಿಕಿತ್ಸೆ– ವೈದ್ಯೋಪಚಾರ, ದಾದಿ–ಸೇವಕಿ, ಪರಿಣತಿ–ಕುಶಲತೆ, ತಲ್ಲೀನ–ಮಗ್ನವಾದ, ಅದರಲ್ಲಿಯೇ ಆಸಕ್ತವಾದ, ಅದೃಷ್ಟ–ಭಾಗ್ಯ, ಕುಗ್ರಾಮ–ಪ್ರಸಿದ್ಧಿಗೆ ಬಾರದ ಹಳ್ಳಿ, ಜೊಂಡು–ಒಂದು ಜಾತಿಯ ಹುಲ್ಲು, ದಡ–ತೀರ, ಅನುಮೋದನೆ–ಒಪ್ಪಿಗೆ, ಸಂಗಡಿಗರು–ಜೊತೆಗಾರರು, ಅಮರ– ಶಾಶ್ವತವಾದ, ಕ್ರಾಂತಿಕಾರಿ– ದಂಗೆಯನ್ನುಂಟು ಮಾಡುವವನು.

ಗಮನಿಸಿ – ತಿಳಿ

ಸ್ಪೈನ್– ಯುರೋಪ ಖಂಡದ ಒಂದು ದೇಶ, ರಿಯಲ್ ಮ್ಯಾಡ್ರಿಡ್ ಕ್ಲಬ್– ಸ್ಪೈನ್ ದೇಶದ ಒಂದು ಪ್ರಸಿದ್ಧ ಫುಟ್‌ಬಾಲ್ ಕ್ಲಬ್, ಗಿಟಾರ್– ಸಂಗೀತದ ಒಂದು ತಂತಿ ವಾದ್ಯ. ಅಲ್ಬಂ– ಹಾಡುಗಳ ಸಂಗ್ರಹದ ಧ್ವನಿ ಸುರುಳಿ, ಮನನೊಂದು– ಮನಸ್ಸಿನಲ್ಲಿ ದು:ಖ ಪಟ್ಟು, ಕಣ್ಮಣಿ– ಅಚ್ಚುಮೆಚ್ಚಾದ, ಎದೆಗುಂದು– ಭಯ ಪಡು, ಎದೆಸೆಟೆಸು– ನಿರ್ಭಯನಾಗು, ಹಣೆಪಟ್ಟಿ– ತಲೆಬರಹ, ಬಾಘ–ಹುಲಿ, ಗರ್ಜಿಸು–ಗುಟುರುಹಾಕು, ಹೂಂಕರಿಸು.

ಜಿತೇಂದ್ರನಾಥ ಮುಖರ್ಜಿ :– ಇವರು ಒಬ್ಬ ಸ್ವಾತಂತ್ರ್ಯ ಹೋರಾಟಗಾರರು. ಕ್ರಾಂತಿಕಾರಿ ತತ್ವಜ್ಞಾನಿ. ಬ್ರಿಟಿಷ್ ಆಡಳಿತದ ವಿರುದ್ಧ ಅನೇಕ ಹೋರಾಟಗಳನ್ನು ಮಾಡಿದರು. ತಾಯಿ– ಶರತ್ ಶಶಿ, ತಂದೆ ಉಮೇಶಚಂದ್ರ ಮುಖರ್ಜಿ. ಇವರ ಮಗನಾಗಿ ೦೭–೧೨–೧೮೭೯ ರಂದು ಜನಿಸಿದರು. ಇವರ ಹುಟ್ಟೂರು ಈಗಿನ ಬಾಂಗ್ಲಾದೇಶದ ನಾಡಿಯ ಜಿಲ್ಲೆಯ ಕಾಯಗ್ರಾಮ್ ಎಂಬ ಹಳ್ಳಿ.

© KTBS NOT TO BE REPUBLISHED

ಅಭ್ಯಾಸ

ಅ. ಕೆಳಗಿನ ಪ್ರಶ್ನೆಗಳಿಗೆ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ.

೧. ಜೂಲಿಯೋ ಯಾವ ಕನಸು ಕಂಡಿದ್ದನು?

೨. ಜೂಲಿಯೋ ನಿರಂತರ ಅಭ್ಯಾಸಕ್ಕಾಗಿ ಎಲ್ಲಿ ಸೇರಿದ?

೩. ಜೂಲಿಯೋ ಯಾವಾಗ ಭೀಕರ ಅಪಘಾತಕ್ಕೆ ಒಳಗಾದ?

೪. ತನ್ನ ನೋವನ್ನು ಮರೆಯಲು ಜೂಲಿಯೋ ಏನು ಮಾಡತೊಡಗಿದ?

೫. ಶ್ರೇಷ್ಠ ಕಲಾವಿದನಾದ ಜೂಲಿಯೋ ಯಾರ ಕಣ್ಮಣಿಯಾದನು?

೬. ಪುಟ್ಟ ಬಾಲಕ ಜತೀನ ನದಿಗೆ ಏಕೆ ಹೋಗಿದ್ದ?

೭. ಹಿರಿಯರು ಬಾಲಕನನ್ನು ರಕ್ಷಿಸಲು ಯಾರನ್ನು ಕೇಳಿಕೊಂಡರು?

೮. ಜತೀನನ ಶೌರ್ಯವನ್ನು ಕಂಡು ಜನ ಏನೆಂದು ಕರೆದರು?

೯. ಜತೀನ ಯಾರ ಗುಂಡಿಗೆ ಬಲಿಯಾದನು?

ಆ. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯದಲ್ಲಿ ಉತ್ತರಿಸಿರಿ.

೧. ಜೂಲಿಯೋನ ಕನಸು ನುಚ್ಚುನೂರಾಗಲು ಕಾರಣವೇನು?

೨. ಜೀವನದಲ್ಲಿ ಸೋಲಿಗೆ ಹೆದರಬಾರದು ಎಂಬುದಕ್ಕೆ ಜೂಲಿಯೋ ಏನು ಹೇಳಿದ್ದಾನೆ?

೩. ಹಿರಿಯರು ಬಾಲಕನನ್ನು ರಕ್ಷಿಸಲು ಯುವಕರಿಗೆ ಕೇಳಿಕೊಂಡಾಗ ಹುಡುಗ ಏನು ಹೇಳಿದ?

೪. ತಾಯಿ ಹೆಮ್ಮೆಯಿಂದ ಮಗನಿಗೆ ಹೇಳಿದ ಮಾತುಗಳು ಯಾವುವು?

ಇ. ಈ ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು.

೧. "ದಯವಿಟ್ಟು ನೀವ್ಯಾರೂ ನದಿಗೆ ಧುಮುಕಬೇಡಿ ".

____

____

© KTBS NOT TO BE REPUBLISHED

೨. "ಅಮ್ಮ ನೋಡು! ನಾನು ಬಂದು ಬಿಟ್ಟೆ".

____

____

ಈ. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಜೂಲಿಯೋ ಆಸ್ಪತ್ರೆಯಲ್ಲಿ ಕಳೆದ ದಿನಗಳನ್ನು ವಿವರಿಸಿ.

೨. ಜತೀನನು ಹುಲಿಯನ್ನು ಎದುರಿಸಿದ ರೀತಿ ವಿವರಿಸಿ.

ಉ. ಕೆಳಗಿನ ವಾಕ್ಯಗಳಲ್ಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.

೧. ಜೂಲಿಯೋ ತನ್ನ ಇಪ್ಪತ್ತನೆಯ ವಯಸ್ಸಿಗೆ ಉತ್ತಮ ____________ ಎಂಬ ಖ್ಯಾತಿ ಪಡೆದನು.

೨. ಜೂಲಿಯೋ ಕನಸು __________ ಆಯಿತು.

೩. ದಾದಿಯೊಬ್ಬಳು ______________ ಒಂದನ್ನು ತಂದು ಕೊಟ್ಟಳು.

೪. ಬಾಲಕ _______________ನೊಳಗೆ ತನ್ನ ಕಾಲನ್ನು ಸಿಕ್ಕಿಸಿಕೊಂಡು ಹೊರಬರಲು ಒದ್ದಾಡುತ್ತಿದ್ದನು.

೫. ತಾಯಿಯ ನಂಬಿಕೆಯನ್ನು ಎಂದೂ ಸುಳ್ಳಾಗಿಸದ ಆ ಹುಡುಗನೇ ________

ಊ. ಅ ಪಟ್ಟಿಯ ಪದಗಳೊಂದಿಗೆ ಬ ಪಟ್ಟಿಯ ಪದಗಳನ್ನು ಹೊಂದಿಸಿ ಬರೆಯಿರಿ.

ಅ	ಬ
೧. ಜೂಲಿಯೋ ಇಗ್ಲೇಶಿಯಸ್	ಅ. ಸಂಗೀತ ವಾದ್ಯ ____________
೨. ಗಿಟಾರ	ಆ. ಜಿತೇಂದ್ರನಾಥ ಮುಖರ್ಜಿ __________
೩. ಕ್ರಾಂತಿಕಾರಿ	ಇ. ಗರ್ಜಿಸು ____________
೪. ಹುಲಿ	ಈ. ಸ್ಪೇನ್ ____________

ಅಭ್ಯಾಸ ಚಟುವಟಿಕೆ

೧. ಸ್ವಾತಂತ್ರ್ಯ ಹೋರಾಟಗಾರರ ಭಾವಚಿತ್ರಗಳನ್ನು ಸಂಗ್ರಹಿಸಿ ಅಲ್ಬಂ ತಯಾರಿಸಿ, ಅವರ ಬಗ್ಗೆ ನಾಲ್ಕು ವಾಕ್ಯ ಬರೆಯಿರಿ.

೨. ತೆನಾಲಿರಾಮನ ಕಥೆಗಳನ್ನು ಓದಿ ತರಗತಿಯಲ್ಲಿ ಹೇಳಿರಿ.

೩. ಪತ್ರಿಕೆಯಲ್ಲಿ ಬರುವ ಮಕ್ಕಳ ಕಥೆಗಳನ್ನು ಸಂಗ್ರಹ ಮಾಡಿರಿ.

@KTBS NOT TO BE REPUBLISHED

ಅ. ಕೊಟ್ಟಿರುವ ವಾಕ್ಯವೃಂದವನ್ನು ಮನಸ್ಸಿನಲ್ಲಿ ಓದಿ ನಿಮಗೆ ಇಷ್ಟವಾದ ಗಾದೆಮಾತನ್ನು ಆಯ್ಕೆ ಮಾಡಿರಿ.

ಬಸಯ್ಯ ಕಡು ಬಡತನದ ಯುವಕ. ರೈತನಾಗಬೇಕೆಂಬ ಬಯಕೆ. ತಂದೆಯಿಂದ ಬಂದ ಎರಡು ಎಕರೆ ಭೂಮಿಯಿತ್ತು. ಅದು ಬಂಜರು ಗುಡ್ಡಗಳಿಂದ ಕೂಡಿದ ಭೂಮಿ. ನೀರಾವರಿ ಸೌಲಭ್ಯವಿಲ್ಲ. ಆದರೂ ಸಾಧಿಸುವ ಛಲವಿತ್ತು. ತನ್ನ ಭೂಮಿಯಲ್ಲಿದ್ದ ಗಿಡಗಂಟೆಗಳನ್ನು ತೆಗೆದ. ಅಲ್ಲಲ್ಲಿ ಇದ್ದ ಸಣ್ಣ ಪುಟ್ಟ ಬಂಡೆಗಲ್ಲುಗಳನ್ನು ಒಡೆಸಿ ಹೊರ ಹಾಕಿದ. ನೇಗಿಲಿನಿಂದ ಉಳುಮೆ ಮಾಡಿದ. ಕೊಟ್ಟಿಗೆ ಗೊಬ್ಬರ ಹಾಕಿ ಭೂಮಿಯನ್ನು ಹದ ಮಾಡಿದನು.

ಮಳೆಗಾಲದಲ್ಲಿ ತನ್ನ ಭೂಮಿಯ ಪಕ್ಕದಲ್ಲಿ ವ್ಯರ್ಥವಾಗಿ ಹರಿದು ಹೋಗುವ ನೀರನ್ನು ಕಂಡನು. ಸರ್ಕಾರದಿಂದ ಹಣ ಸಹಾಯ ಪಡೆದು ಹೊಂಡ ತೆಗೆಸಿದ. ಮಳೆ ನೀರನ್ನು ಸಂಗ್ರಹಿಸಿದ. ಕೃಷಿ ಅಧಿಕಾರಿಗಳ ಜೊತೆ ಚರ್ಚಿಸಿದ. ಸಂಗ್ರಹಿಸಿದ ಮಳೆ ನೀರಿಗೆ ಹನಿ ನೀರಾವರಿ ಅಳವಡಿಸಿದನು. ವಿವಿಧ ಬೆಳೆ ಪದ್ಧತಿ ಅಳವಡಿಸಿಕೊಂಡನು. ದಾಳಿಂಬೆ, ಸಪೋಟ, ತೆಂಗು, ಹೂ ಬೆಳೆಗಳನ್ನು ಬೆಳೆದ. ಅಧಿಕ ಇಳುವರಿ ಪಡೆದನು. ಕೈ ತುಂಬ ಹಣ ಸಂಪಾದಿಸಿದನು. ಸುತ್ತಮುತ್ತಲಿನ ರೈತರು ಇವನ ಸಾಹಸ ಕಂಡು ಬೆರಗಾದರು. ಯುವಕನ ಸಾಧನೆ ಕಂಡು ಸರ್ಕಾರ 'ಕೃಷಿ ಪಂಡಿತ' ಪ್ರಶಸ್ತಿ ನೀಡಿ ಗೌರವಿಸಿತು.

ಗಾದೆಗಳು :

೧. ಕಾಯಕವೇ ಕೈಲಾಸ

೨. ದುಡಿಮೆಯೇ ದುಡ್ಡಿನ ತಾಯಿ

೩. ಕೈ ಕೆಸರಾದರೆ ಬಾಯಿ ಮೊಸರು

೪. ಕಷ್ಟ ಪಟ್ಟರೆ ಪ್ರತಿಫಲ ಕಟ್ಟಿಟ್ಟ ಬುತ್ತಿ

© KTBS NOT TO BE REPUBLISHED

ಭಾಷಾಭ್ಯಾಸ


ಅ. ಮಕ್ಕಳೇ : ಈ ಪತ್ರಿಕೆಯನ್ನು ಓದಿರಿ.

ಶಿಕ್ಷಣ ವಾರ್ತೆ

ಮಾಸ ಪತ್ರಿಕೆ


ಸೆಪ್ಟಂಬರ್–2013 ಸಂಪಾದಕ. ಪಾಟೀಲ್ ಸಂಚಿಕೆ –10

ಶಿಕ್ಷಕರು ಸಮಾಜದ ಶಿಲ್ಪಿಗಳು, ಭ್ರಷ್ಟಾಚಾರ ಮುಕ್ತ ಸಮಾಜಕ್ಕೆ ಕರೆ



ಶಿಕ್ಷಕರು ಸಮಾಜದ ಶಿಲ್ಪಿಗಳು. ಅವರು ಮನಸ್ಸು ಮಾಡಿದರೆ ಹೊಸ ಸಮಾಜವನ್ನು ಕಟ್ಟಬಲ್ಲರು. ಸ್ವಾತಂತ್ರ್ಯ ಪೂರ್ವದಲ್ಲಿ ಭಾರತದಲ್ಲಿ ರಾನಡೆಯಂಥವರು ಕರ್ನಾಟಕದಲ್ಲಿ ಪಂಡಿತ ತಾರಾನಾಥರಾಯರಂಥವರು ರಾಷ್ಟ್ರೀಯ ಶಾಲೆಗಳನ್ನು ಸ್ಥಾಪಿಸಿದರು.

ಸ್ವಾತಂತ್ರ್ಯ ಹೋರಾಟಕ್ಕೆ ಯುವಕರನ್ನು ಸಿದ್ಧಗೊಳಿಸಿದರು. ಇಂದು ಭ್ರಷ್ಟಾಚಾರ ಮುಕ್ತಸಮಾಜ, ಸ್ವಜನ ಪಕ್ಷಪಾತವನ್ನು ಹೋಗಲಾಡಿಸಲು ಶಿಕ್ಷಕರು ಪ್ರಯತ್ನಿಸಬೇಕೆಂದು ರಾಜ್ಯಪಾಲರು ಶಿಕ್ಷಕರಿಗೆ ಕರೆ ನೀಡಿದರು.



ಶಿಕ್ಷಣವೇ ಆಸ್ತಿ

ಹಾಸನ : ತಂದೆ ತಾಯಿಗಳು ಮಕ್ಕಳಿಗೆ ಸಂಪತ್ತನ್ನು, ಹೊಲಗದ್ದೆಗಳನ್ನು ಮಾಡು ವುದಕ್ಕಿಂತ ಅವರನ್ನೆ ಆಸ್ತಿಯನ್ನಾಗಿ ಮಾಡಿರಿ. ಅದರಿಂದ ಅವರು ಉದ್ಧಾರವಾಗುವರು. ಸಮಾಜಕ್ಕೂ ಉಪಯೋಗವಾಗುವರು ಎಂದು ಶಾಸಕರು ಪಾಲಕರಿಗೆ ಕಿವಿಮಾತು ಹೇಳಿದರು.

ಮಕ್ಕಳ ಕವಿತೆ

ಮಳೆ ಬಂತು ಮಳೆ
ಇಳೆಗೆ ತಂತು ಬೆಳೆ
ಹಸಿರ ಹೊನ್ನು ತಳೆ
ಜನರ ಮುಖದಿ ಕಳೆ

– ಸಂಧ್ಯಾ, ೬ನೆಯ ತರಗತಿ

ಸರ್ಕಾರಿ ಹಿ.ಪ್ರಾ. ಸಿಂಗನೋಡಿ ಜಿ॥ ರಾಯಚೂರು

ಪಠ್ಯ ಪುಸ್ತಕಗಳಿಗಿಂತ ಸಹ ಪಠ್ಯಗಳೆ ಮಹತ್ವ

ಬಳ್ಳಾರಿ: ಪಠ್ಯ ಪುಸ್ತಕಗಳಿಗಿಂತ ಸಹ ಪಠ್ಯ ವಸ್ತುಗಳಾದ ಆಟ–ಸಾಂಸ್ಕೃತಿಕ ಚಟು ವಟಿಕೆಗಳು ಜೀವನಕ್ಕೆ ಸಹಕಾರಿ ಎಂಬ ಮಕ್ಕಳ ವಂಟಪ ಉದ್ಘಾಟಿಸಿ ಡಿಡಿಪಿಐ ಆದೇಶ ನೀಡಿದರು.



ಶಿಕ್ಷಕರೊಬ್ಬರಿಗೆ ಶಿಷ್ಯ ನೀಡಿದ ಭಾರಿ ಗುರು ಕಾಣಿಕೆ

ಬೀದರ: ತನಗೆ ವಿದ್ಯಾದಾನ ಮಾಡಿದ ಗುರಗಳಿಗೆ ಶಿಷ್ಯನೊಬ್ಬನು ಕಟ್ಟಿಸಿದ ಮನೆ ಯೊಂದನ್ನು ಗುರು ಕಾಣಿಕೆ ಯಾಗಿ ಅರ್ಪಿಸಿದ್ದಾನೆ.

ಹಿನ್ನೆಲೆ: ಶಾಲೆ ಬಿಟ್ಟು ದನ ಕಾಯಲು ಹೋಗುತ್ತಿದ್ದ ವಿದ್ಯಾರ್ಥಿಯನ್ನು ಶಾಲೆಗೆ ಕರೆದುಕೊಂಡು ಬಂದು ಅವನಿಗೆ ಶಿಕ್ಷಣ ಕೊಟ್ಟು ಬೀದರ ಹೈಸ್ಕೂಲಿಗೆ ಸೇರಿಸಿದರು. ಸರ್ಕಾರಿ ವಸತಿಶಾಲೆಯಲ್ಲಿ ಊಟೋಪಚಾರದ ವ್ಯವಸ್ಥೆ ಮಾಡಿದರು. ಈ ಹುಡುಗ ಮೆಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣ ರಾದಾಗ ಅಭಿಮಾನ ಪಟ್ಟು ದೂರದ ಬೆಂಗಳೂರು ಕಾಲೇಜಿಗೆ ಸೇರಿಸಿ ಬೋರ್ಡಿಂಗ್ ವ್ಯವಸ್ಥೆ ಮಾಡಿದರು. ಶಿಷ್ಯವೇತನದಲ್ಲಿ ಇಂಜನೀಯರಿಂಗ ಪದವಿ ಮುಗಿಸಿ ಪರದೇಶಕ್ಕೆ ಹೋಗಿ ಅಲ್ಲಿ ಹೆಚ್ಚಿನ ವಿದ್ಯಾಭ್ಯಾಸ ಮಾಡಿ ತನ್ನದೆ ಸಾಫ್ಟವೇರ್ ಕಂಪನಿ ಸ್ಥಾಪಿಸಿದ್ದಾನೆ. ತನ್ನ ಓದಿಗೆ ಪ್ರೋತ್ಸಾಹ ನೀಡಿದ ಓದಿನ ಹಸಿವನ್ನು ಹೆಚ್ಚಿಸಿದ ಗುರುವಿಗೆ ಗುರುಕಾಣಿಕೆಯಾಗಿ ಗಣೇಶ ಹಿರೆಕುಂಬಾರವರು ತಮ್ಮ ಗುರು ಶಂಕ್ರಪ್ಪ ದೊಡ್ಡಮನಿ ಅವರಿಗೆ ಮನೆ ಕಟ್ಟಿಸಿಕೊಟ್ಟನು. ಗುರುಪೂಜೆ ಗೈದು ಜನ್ಮ ಸಾರ್ಥಕ ಮಾಡಿಕೊಂಡಿದ್ದಾನೆ.



ಕರ್ನಾಟಕದಲ್ಲಿ 10 ಲಕ್ಷ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ. ಗೆ

ಬೆಂಗಳೂರು: ಕರ್ನಾಟಕದಲ್ಲಿ ಇದೆ ಮೊದಲ ಬಾರಿಗೆ 10ಲಕ್ಷದ 22ಸಾವಿರ ವಿದ್ಯಾರ್ಥಿಗಳು 2014 ಎಪ್ರಿಲ್ ಪರೀಕ್ಷೆ ಕುಳಿತುಕೊಳ್ಳಲಿದ್ದಾರೆ ಸ್ವಾತಂತ್ರ್ಯ ನಂತರ ಪ್ರಥಮ ಬಾರಿಗೆ 10. ಲಕ್ಷಕ್ಕೂ ಮೀರಿ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತುಕೊಳ್ಳುತ್ತಿರುವುದು ಬಹಳ ಸಂತಸದ ವಿಚಾರವೆಂದು ವಿದ್ಯಾ ಸಚಿವರು ಶಿಕ್ಷಕರ ಸಭೆಯಲ್ಲಿ ನುಡಿದರು.

ಮಕ್ಕಳ ಕಥೆ

ಅವಸರವೇ ಅಪಘಾತಕ್ಕೆ ಕಾರಣ

ಬರೆದವರು: ಬಸಪ್ಪ ಬೆಸ್ತರ್

ಎಳನೇಯ ತರಗತಿ ಸರ್ಕಾರಿ ಪ್ರಾ. ಶಾ. ಬೆಳಗಾಂ.

ನಾಗರ ಪಂಚಮಿಯಂದು ಹಲವು ತರಹದ ಉಂಡೆ ಲಾಡು ಅಮ್ಮ ಮಾಡಿದ್ದಳು. ಗಾಜಿನ ಭರಣಿಯಲ್ಲಿ ತುಂಬಿ ಇಟ್ಟಿದ್ದಳು.

ರಾಜು. ರತ್ನ ಅಮ್ಮನಿಗೆ ಉಂಡಿ ಬೇಡಿದರು. ಮಕ್ಕಳೆ, ನಾಗಪ್ಪನಿಗೆ ಹಾಲೆರದ ಮೇಲೆ ತಿನ್ನಿ. ಅಲ್ಲಿಯುವರಿಗೆ ತಡೆಯಿರಿ. ಈಗ ಗುಡಿಗೆ ಹೋಗೋಣಬನ್ನಿ ಎಂದು ಅಮ್ಮ ಕರೆದಳು.

ಅಮ್ಮ ನನಗೆ ತಲೆ ನೋವು ಎಂದು ರಾಜು ಹಿಂದೆ ಸರಿದ. ರತ್ನ ಅಮ್ಮನ ಜೊತೆಗೆ ಹೋದಳು. ಇತ್ತ ರಾಜು ಉಂಡಿ ಭರಣಿ ನೋಡಿದ. ಅದು ಕಪಾಟಿನ ಮೇಲೆ ಇತ್ತು. ಸ್ಟೂಲು ತಂದ ಅದರ ಮೇಲೆ ಎದ್ದು ನಿಂತ. ಒಂದು ಉಂಡಿ ಹಿಡಿದ ಅಹಾ ! ಎಂದನು. ಹತ್ತಾರು ಉಂಡಿ ಒಮ್ಮೆಲೆ ಹಿಡಿಯಲು ಹೋಗುತ್ತಿರುವಾಗ ಅಮ್ಮ ಬಂದಳು. ರಾಜು ಏನು ಮಾಡುತ್ತಿರುವೆ ಎಂದು ಕೂಗಿದಳು. ಭಯ ಪಟ್ಟನು ಕಾಲು ಅಲ್ಲಾಡಿತು. ಕೈ ಭರಣಿಯಲ್ಲಿತ್ತು. ಜೋಲಿ ಹೋಯಿತು. ದಬಕ್ಕನೆ ಬಿದ್ದನು. ತಲೆಗೆ ಗಾಯವಾಯಿತು. ಅಮ್ಮ 'ಹೀಗೆ ಮಾಡಬಾರದು. ಪೂಜೆ ಯಾದ ಮೇಲೆ ಕೊಡುತ್ತಿದ್ದೆ. ಅವಸರಪಟ್ಟರೆ ಅಪಘಾತ ಕಟ್ಟಿಟ್ಟ ಬುತ್ತಿ' ಎಂದಳು.

© KTBS NOT TO BE REPUBLISHED

ಆ. ಈ ಕೆಳಗಿನ ಪದಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.

೧. ಪರಿಣತಿ:

೨. ಅನುಮೋದನೆ:

೩. ಜನಪ್ರಿಯ

೪. ತಲ್ಲೀನ

ಇ. ಇವುಗಳನ್ನು ಧ್ವನಿಪೂರ್ಣವಾಗಿ ಓದಿರಿ.

೧. ಅಹಾ! ಆಗುಂಬೆಯ ಸೂರ್ಯಾಸ್ತ ಎಷ್ಟು ಚೆಂದ.

೨. ಅಯ್ಯೋ! ಸೂರ್ಯ ಸಮುದ್ರದಲ್ಲಿ ಜಿಗಿದುಬಿಟ್ಟ.

೩. ಓಹೋ! ಅವರೇ ಗೆದ್ದರು.

೪. ಛೇ! ಸತ್ಯವನ್ನು ಕೊಂದರು ಈ ಜನ.

ಭಾವನೆಗಳನ್ನು ಒಡಿದೆಬ್ಬಿಸಿ ಹೇಳುವ ರೀತಿ ಇದು.

ಅಹಾ! ಆಗುಂಬೆಯ ಸೂರ್ಯಾಸ್ತ ಎಷ್ಟು ಚೆಂದ
ಇದರ ಅರ್ಥ 'ಆಗುಂಬೆಯ ಸೂರ್ಯಾಸ್ತವು ಬಹಳ ಚೆಂದಾಗಿದೆ'.

NOT TO BE REPUBLISHED ©KTBS

ಈ. ಇವುಗಳಿಗೆ ಸರಳವಾದ ಅರ್ಥ ಬರೆಯಿರಿ.

೧. ಅಯ್ಯೋ ! ಸಮುದ್ರದಲ್ಲಿ ಸೂರ್ಯ ಜಿಗಿದೇ ಬಿಟ್ಟ.

೨. ಹೋ ! ಅವರೆ ಗೆದ್ದು ಬಂದರು.

೩. ಛೇ ಸತ್ಯವನ್ನು ಕೊಂದರು ಈ ಜನ !

ಭಾಷಾ ಚಟುವಟಿಕೆ

ಅ. ಕೆಳಗೆ ಕೊಟ್ಟಿರುವ ಸುಳಿವು ಪದಗಳ ಸಹಾಯದಿಂದ ಗಾದೆ ಮಾತುಗಳನ್ನು ಪೂರ್ಣಗೊಳಿಸಿ.

೧. ಕುಂಬಾರನಿಗೆ ____________ ದೊಣ್ಣೆಗೆ ನಿಮಿಷ

೨. ____________ ಸ್ವರ್ಗ ____________ ನರಕ

೩. ______________ ದುಡಿ ಅರಸನಾಗಿ ಉಣ್ಣು

೪. ತಾಯಿಗಿಂತ ____________ ಉಪ್ಪಿಗಿಂತ ____________

(ಆಳಾಗಿ, ಬಂಧುವಿಲ್ಲ. ಆಚಾರವೇ, ವರುಷ, ರುಚಿಯಿಲ್ಲ, ಅನಾಚಾರವೇ)

ಆ. ಕೊಟ್ಟಿರುವ ವಾಕ್ಯ ವೃಂದದ ಸಹಾಯದಿಂದ ಅರ್ಥ ಬರುವ ಘಟನೆಯನ್ನು ರಚಿಸಿರಿ.

೧. ಭೀಮನಾಯಕ ಒಬ್ಬ ದರೋಡೆಕೋರ

೨. ವೈದ್ಯರು ಸೂಕ್ತ ಚಿಕಿತ್ಸೆ ನೀಡಿ ಮಗುವನ್ನು ಉಳಿಸಿದರು.

೩. ಅವನು ವೈದ್ಯರ ಮನೆಯಲ್ಲಿ ಬೆಲೆ ಬಾಳುವ ವಸ್ತು ಕದ್ದೊಯ್ದನು.

೪. ನಡುರಾತ್ರಿಯಲ್ಲಿ ವೈದ್ಯರ ಮನೆಗೆ ಕರೆ ತಂದನು.

೫. ಭೀಮನಾಯಕನಿಗೆ ತನ್ನ ತಪ್ಪಿನ ಅರಿವಾಯಿತು. ವೈದ್ಯರಲ್ಲಿ ಕಳುವು ಮಾಡಿದ ಕಥೆ ಹೇಳಿ ಕ್ಷಮೆಯಾಚಿಸಿದ.

೬. ವೈದ್ಯರು ಈ ಬಗ್ಗೆ ಚಿಂತಿಸದೆ ಕರ್ತವ್ಯವೇ ದೇವರೆಂದು ನಂಬಿ ಕೆಲಸ ಮಾಡುತ್ತಿದ್ದರು.

೭. ದುಡಿದು ತಿನ್ನು, ಪರರ ಆಸ್ತಿ ಕದಿಯಬೇಡ. ನಿನಗೆ ಒಳ್ಳೆಯದಾಗುತ್ತದೆ ಎಂದು ವೈದ್ಯರು ಹೇಳಿದರು.

೮. ಭೀಮನಾಯಕನ ಮಗ ಜ್ವರದಿಂದ ಬಳಲುತ್ತಿದ್ದನು. ಸಾಯುವ ಸ್ಥಿತಿಯಲ್ಲಿದ್ದನು.

____

____

____

____

____

____

____

____

© KTBS NOT TO BE REPUBLISHED

ಪದ್ಯ ಪಾಠ ೭

ಅನ್ವೇಷಣೆ

ಪಾಠ ಪ್ರವೇಶ :

ನಮ್ಮ ಬದುಕು ಸುಂದರವಾದುದು. ಸಂತೋಷವಾದದು. ನಾವ್ಯಾರೂ ಇದನ್ನು ಗಮನಿಸುವುದೇ ಇಲ್ಲ. ಸುಖ ಸಂತೋಷಕ್ಕಾಗಿ, ಕಷ್ಟ ಪರಿಹಾರಕ್ಕಾಗಿ ಯಾರನ್ನೋ ಕೇಳುತ್ತೇವೆ. ದೇವರನ್ನು ಬೇಡುತ್ತೇವೆ. ಏನನ್ನೋ ಕೊಟ್ಟು ಅಥವಾ ಬಲಿ ನೀಡಿ ಸುಖಕ್ಕಾಗಿ ಹುಡುಕಾಡುತ್ತೇವೆ. ಸುಖದ ಮೂಲ ಎಲ್ಲಿದೆ ಎಂಬುದನ್ನು ಚರ್ಚಿಸಿರಿ.

ಬೆಲ್ಲದ ರುಚಿ ಹೇಗಿದೆ ? ಎಂದರೆ ಸಿಹಿ ಇದೆ. ಎನ್ನುತ್ತೀರಿ. ಅದು ಹೇಗೆ ಗೊತ್ತಾಯಿತು? ಎಂಬ ಪ್ರಶ್ನೆಗೆ ನಾನೇ ತಿಂದು, ರುಚಿ ಅನುಭವಿಸಿದೆ ಎಂದು ಹೇಳುವಿರಿ. ನಾನೇ ಬೆಲ್ಲ ತಿಂದಂತೆ. ರುಚಿ ಅನುಭವಿಸಿದಂತೆ. ನಮ್ಮ ಕಷ್ಟ ಸುಖಗಳಿಗೆ ನಾವೇ ಜವಾಬ್ದಾರರು. ಅದರ ಮೂಲ ನಮ್ಮಲ್ಲಿದೆ. ಇದನ್ನು ನಾವೇ ಸರಿಮಾಡಿಕೊಳ್ಳಬೇಕು.

ನಮಗೆಲ್ಲ ಅತಿ ಅಭಿಮಾನವಿದೆ, ಗರ್ವ ಇದೆ. ನಾನೇ ಹೇಳಿದ್ದು ಸರಿಯಿದೆ. ನಾನೇ ಮಾಡಿದ್ದು ಅತ್ಯುತ್ತಮ ಎಂಬ ಕಲ್ಪನೆ ಇದೆ. ಹೀಗಾಗಿ ಇನ್ನೊಬ್ಬರೊಡನೆ ಹಂಚಿಕೊಂಡು, ಹೊಂದಿಕೊಂಡು, ಬದುಕದೇ ಕಷ್ಟ ಪಡುತ್ತೇವೆ. ದು:ಖ ಅನುಭವಿಸುತ್ತೇವೆ. ಆದುದರಿಂದ ಹೊಂದಿಕೊಂಡು ಹೋಗಬೇಕೆನ್ನುವುದೇ ಕವಿ ಶ್ರೀ. ಜಿ,ಎಸ್.ಶಿವರುದ್ರಪ್ಪನವರ ಆಶಯವಾಗಿದೆ.

© KTBS
NOT TO BE REPUBLISHED

ಎಲ್ಲೋ ಹುಡುಕಿದೆ ಇಲ್ಲದ ದೇವರ
ಕಲ್ಲು ಮಣ್ಣುಗಳ ಗುಡಿಯೊಳಗೆ
ಇಲ್ಲೇ ಇರುವ ಪ್ರೀತಿ ಸ್ನೇಹಗಳ
ಗುರುತಿಸದಾದೆವು ನಮ್ಮೊಳಗೆ ॥






ಎಲ್ಲಿದೆ ನಂದನ ? ಎಲ್ಲಿದೆ ಬಂಧನ ?
ಎಲ್ಲಾ ಇವೆ ಈ ನಮ್ಮೊಳಗೆ
ಒಳಗಿನ ತಿಳಿಯನು ಕಲಕದೆ ಇದ್ದರೆ
ಅಮೃತದ ಸವಿಯಿದೆ ನಾಲಗೆಗೆ॥

ಹತ್ತಿರವಿದ್ದೂ , ದೂರ ನಿಲ್ಲುವೆವು
ನಮ್ಮ ಅಹಮ್ಮಿನ ಕೋಟೆಯಲಿ
ಎಷ್ಟು ಕಷ್ಟವೋ ಹೊಂದಿಕೆ ಎಂಬುದು
ನಾಲ್ಕು ದಿನದ ಈ ಬದುಕಿನಲಿ ॥

ಜಿ.ಎಸ್. ಶಿವರುದ್ರಪ್ಪ.

ಪರಿಚಯ:



ಜಿ.ಎಸ್. ಶಿವರುದ್ರಪ್ಪ : ಆಧುನಿಕ ಕನ್ನಡದ ಪ್ರಸಿದ್ಧಕವಿ. ವಿಮರ್ಶಕರು. ಇವರ ಪೂರ್ಣ ಹೆಸರು ಗುಗ್ಗರಿಶಾಂತವೀರಪ್ಪ ಶಿವರುದ್ರಪ್ಪ. ಬೆಂಗಳೂರು ವಿಶ್ವ ವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ. **'ಸಾಮಗಾನ'**, **'ದೇವಶಿಲ್ಪಿ.'** **'ದೀಪದ ಹೆಜ್ಜೆ'**, **'ಪ್ರೀತಿ ಇಲ್ಲದ ಮೇಲೆ'**, **'ಅನಾವರಣ'** ಪ್ರಮುಖ ಕವನ ಸಂಕಲನಗಳು.

ಶಿವರುದ್ರಪ್ಪನವರ 'ಕಾವ್ಯಾರ್ಥ ಚಿಂತನ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ(೧೯೮೪) 'ಸೋವಿಯತ್ ಲ್ಯಾಂಡ್ ನೆಹರು ಪ್ರಶಸ್ತಿ' ಇವರಿಗೆ ದೊರೆತಿವೆ. ೧೯೯೭ರಲ್ಲಿ ಪಂಪ ಪ್ರಶಸ್ತಿ ಪಡೆದರು. ಇವರು 'ರಾಷ್ಟ್ರಕವಿ' ಬಿರುದಿಗೆ ಭಾಜನರಾಗಿದ್ದಾರೆ. ಪ್ರಸ್ತುತ ಕವನವನ್ನು ಇವರ 'ಗೋಡೆ' ಕವನ ಸಂಕಲನದಿಂದ ಆಯ್ದುಕೊಳ್ಳಲಾಗಿದೆ.

ಓದಿ – ತಿಳಿ

ಅನ್ವೇಷಣೆ–ಹುಡುಕು, ಕಲಕು–ಕದಡು:, ಬಂಧನ–ಸೆರೆ, ಕಟ್ಟು, ಅಹಂ– ಗರ್ವ, ಪ್ರತಿಷ್ಠೆ, ಗುರುತಿಸು–ಗೊತ್ತು ಹಚ್ಚು: ನಂದನ–ಉದ್ಯಾನವನ, ಹೆಮ್ಮೆ–ಅಭಿಮಾನ, ಹಿರಿಮೆ, ಸಂತೋಷ, ಕೋಟೆ– ಸುತ್ತುವರಿದ ಬಲವಾದ ರಕ್ಷಣೆ ಗೋಡೆ.

© KTBS NOT TO BE REPUBLISHED

ಅಭ್ಯಾಸ

ಅ) ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರ ಬರೆಯಿರಿ.

೧) ನಾವು ದೇವರನ್ನು ಎಲ್ಲಿ ಹುಡುಕುತ್ತೇವೆ ?

೨) ನಾವು ಏನನ್ನು ಗುರುತಿಸಲಾಗಲಿಲ್ಲ ಎಂದು ಕವಿ ಹೇಳುತ್ತಾರೆ?

೩) ಅಮೃತದ ಸವಿ ನಾಲಗೆಗೆ ಸಿಗುವ ಬಗೆ ಹೇಗೆ?

೪) ಯಾವ ಕೋಟೆಯನ್ನು ಕಟ್ಟಿಕೊಂಡು ನಾವು ದೂರವಾಗಿದ್ದೇವೆ?

೫) ನಾಲ್ಕು ದಿನದ ಬದುಕಿನಲ್ಲಿ ಯಾವುದು ಕಷ್ಟವಾಗಿದೆ?

ಆ) ಈ ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಯಾವ ಕಾರಣಗಳಿಂದಾಗಿ ನಾವು ಹತ್ತಿರವಿದ್ದೂ ದೂರಾಗುತ್ತಿದ್ದೇವೆ?

೨. ಮೊದಲನೆಯ ನುಡಿಯಲ್ಲಿ ಕವಿ ಏನು ಹೇಳಲು ಬಯಸುತ್ತಿದ್ದಾನೆ?

ಇ) ಬಿಟ್ಟ ಪದ ತುಂಬಿರಿ.

೧. ಎಲ್ಲೋ ಹುಡುಕಿದೆ ____________ ದೇವರ ಕಲ್ಲು ಮಣ್ಣುಗಳ ಗುಡಿಯೊಳಗೆ.

೨. ಇಲ್ಲಿಯೇ ಇರುವ ____________ ಸ್ನೇಹಗಳ ಗುರುತಿಸದಾದೆವು ನಮ್ಮೊಳಗೆ.

೩. ಒಳಗಿನ ತಿಳಿಯನು ____________ ಇದ್ದರೆ ಅಮೃತದ ಸವಿಯಿದೆ ನಾಲಗೆಗೆ.

೪. ಹತ್ತಿರವಿದ್ದೂ ದೂರ ನಿಲ್ಲುವೆವು ನಮ್ಮ ________________ಕೋಟೆಯಲಿ

೫. ಎಷ್ಟು ಕಷ್ಟವೋ ______________ ಎಂಬುದು ನಾಲ್ಕು ದಿನದ ಈ ಬದುಕಿನಲಿ.

ಅಭ್ಯಾಸ ಚಟುವಟಿಕೆ

ಅ. ನಿನಗೆ ಹಾಡಲು ಬರುವ ಭಾವಗೀತೆಗಳ ಸಂಗ್ರಹ ಮಾಡು.

ಆ. ಈ ಕವಿತೆಯನ್ನು ಕಂಠಪಾಠ ಮಾಡಿರಿ.

ಭಾಷಾಭ್ಯಾಸ

ಅ) ಈ ಪದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಪ್ರಯೋಗಿಸಿರಿ.

ಕಲಹ : ________________________________

ಅಹಂ : ________________________________

ಪ್ರೀತಿ : ________________________________

ಸ್ನೇಹ : ________________________________

ಹೊಂದಿಕೆ : ________________________________

@ KTBS NOT TO BE REPUBLISHED

ಆ) **ಸತ್ಯವೇ ನಮ್ಮ ತಾಯಿ ತಂದೆ**
ಸತ್ಯವೇ ನಮ್ಮ ಬಂಧು ಬಳಗ
ಸತ್ಯ ವಾಕ್ಯಕೆ ತಪ್ಪಿ ನಡೆದರೆ
ಮೆಚ್ಚನಾ ಪರಮಾತ್ಮನು.

ಈ ಪದ್ಯವನ್ನು ೧೦ ಸಲ ಓದಿರಿ. ಯಾವಾಗಲೂ ಮೆಲುಕು ಹಾಕುತ್ತಾ ಪ್ರಶ್ನೆಗೆ ಉತ್ತರಿಸಿರಿ.

೧. ಪರಮಾತ್ಮ ಯಾರನ್ನು ಮೆಚ್ಚುವುದಿಲ್ಲ?

೨. ನಮ್ಮ ತಂದೆ-ತಾಯಿ ಯಾರು?

ಇ. ಈ ಜೋಡು ಪದಗಳನ್ನು ಓದಿರಿ.

ಮಾದರಿ: ಕಲ್ಲು-ಮಣ್ಣು

ಪ್ರೀತಿ-ಸ್ನೇಹ, ಹಳ್ಳಿ-ದಿಳ್ಳಿ, ಗುಡುಗು-ಸಿಡಿಲು,

ಈ. ಈ ವಾಕ್ಯಗಳನ್ನು ಓದಿ ಅರ್ಥೈಸಿರಿ.

೧. ತವರೂರು ಹಾದಿಯಲ್ಲಿ **ಕಲ್ಲು-ಮಣ್ಣು**ಗಳಿಲ್ಲ.

೨. ನಮ್ಮ ನಮ್ಮಲ್ಲಿರುವ **ಪ್ರೀತಿ- ಸ್ನೇಹ** ಗುರುತಿಸದಾದೆವು.

೩. ಮಳೆಯಿಂದ **ಹೊಳೆ- ಹಳ್ಳ**ಗಳು ತುಂಬಿ ಹರಿಯುತ್ತವೆ.

೪. ಮೋಡದ ಆಟ **ಗುಡುಗು-ಸಿಡಿಲು** ಉಂಟು ಮಾಡಿತು.

ಉ. ಈ ಪದಗಳಿಗೆ ಸರಿ ಸಮನಾದ ಜೋಡಿ ಪದವನ್ನು ಸುಳಿವು ನೋಡಿ ಬರೆಯಿರಿ.

ಹೊಲ	–	ಹೂ	–
ಗಿಡ	–	ಕಳ್ಳ	–
ಗುಡ್ಡ	–	ಮಳೆ	–
ಎಡ	–	ರೀತಿ	–

ಸುಳಿವು : ಮರ, ಹಣ್ಣು, ನೀತಿ, ಬೆಟ್ಟ, ಗದ್ದೆ, ಬೆಳೆ, ಸುಳ್ಳು, ಬಲ.

ಊ. ವಿರುದ್ಧಾರ್ಥಕ ಪದ ಬರೆ.

ಪ್ರೀತಿ ______________

ದೂರ ______________

ಕಷ್ಟ ______________

ಸಿಹಿ ______________

ಋ. ಪದ ರಚನೆ ಗಮನಿಸು.

ಮಾಡು	+	ವುದು	=	ಮಾಡುವುದು
ತಿನ್ನು	+	ಇಕೆ	=	ತಿನ್ನುವಿಕೆ
ಉಡು	+	ಇಗೆ	=	ಉಡಿಗೆ
ಕೊರೆ	+	ತ	=	ಕೊರೆತ
ಓಡು	+	ಟ	=	ಓಟ
ನಗು	+	ಎ	=	ನಗೆ
ಮುನಿ	+	ಇಸು	=	ಮುನಿಸು
ಅಳೆ	+	ಅತೆ	=	ಅಳತೆ

@ KTBS NOT TO BE REPUBLISHED

ಎ. ಪದಗಳನ್ನು ಬಿಡಿಸಿ ಬರೆಯಿರಿ.

ನೋಡುವುದು =

ನಂಬಿಕೆ =

ಹಾಸಿಗೆ =

ಕುಣಿತ =

ನೋಟ =

ಹೊರೆ =

ನಡತೆ =

ಒಪ್ಪಿಸು =

ಏ. ಈ ಕೆಳಗಿನ ವಾಕ್ಯಗಳನ್ನು ಓದಿರಿ. ಅವು ಏನನ್ನು ಹೇಳುತ್ತಿವೆ ಎಂಬುದನ್ನು ತಿಳಿಯಿರಿ. ಕಂಸದಲ್ಲಿ ಬರೆದುದನ್ನು ಓದಿರಿ.

೧. ಗುರುಗಳು : ಪ್ರಕಾಶ ಇತ್ತ ಕಡೆಗೆ ಬಾ **(ಆದೇಶ)**

೨. ಧರ್ಮಗುರುಗಳು: ದೇವರು ಎಲ್ಲರಿಗೂ ಒಳ್ಳೆಯದು ಮಾಡಲಿ **(ಪ್ರಾರ್ಥನೆ ಅಥವಾ ಬೇಡಿಕೆ)**

೩ ಕಸ್ತೂರಿ : ನೀನು ಅಂಗಡಿಗೆ ಹೋಗಿ ಸಕ್ಕರೆ ತೆಗೆದುಕೊಂಡು ಬರಬೇಕು **(ಆದೇಶ)**

೪. ನೀನು ಸ್ವಲ್ಪ ನೀರು ಕೊಡುವೆಯಾ **(ಪ್ರಾರ್ಥನೆ)**

ಇಂತಹ ಆದೇಶ ಹಾಗೂ ಪ್ರಾರ್ಥನೆ ಅಥವಾ ಬೇಡಿಕೆಯನ್ನು ಮಂಡಿಸುವ ವಾಕ್ಯಗಳಿಗೆ ವಿಧ್ಯರ್ಥಕ ವಾಕ್ಯಗಳೆಂದು ಕರೆಯುತ್ತಾರೆ.

@ KTBS NOT TO BE REPUBLISHED

ಭಾಷಾ ಚಟುವಟಿಕೆ

ಅ. ಈ ಕಥೆ ಓದಿರಿ. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

ಮಲೆನಾಡು ಅಲ್ಲೊಂದು ಹಳ್ಳ ಹರಿಯುತ್ತಿತ್ತು. ಅದನ್ನು ದಾಟಲು ಪುಟ್ಟ ಸಂಕವಿತ್ತು. ಒಬ್ಬರು ಹೋಗಬಹುದಾದ ಚಿಕ್ಕ ಸಂಕ. ಸಂಕದ ಮೇಲೆ ಎದುರು–ಬದರಿನಿಂದ ಎರಡು ಬೇಟೆ ನಾಯಿಗಳು ಬಂದವು. ನಾನು ಮೊದಲು ಹೋಗುತ್ತೇನೆ ಎಂದು ಬಿಳಿ ನಾಯಿ ಮುಂದೆ ಬಂದಿತು. ಕರಿನಾಯಿ ನಾನು ಮೊದಲು ಹೋಗುತ್ತೇನೆ ಎಂದು ಅದು ಮುಂದೆ ಬಂದಿತು. ಎರಡಕ್ಕೂ ಜಗಳವಾಗಿ ಕೊನೆಗೆ ಕಚ್ಚಾಡಲು ಪ್ರಾರಂಭಿಸಿದವು. ಅವು ಜಾರಿ ಹಳ್ಳದಲ್ಲಿ ಬಿದ್ದು ಜೀವ ಕಳೆದುಕೊಂಡವು.

ಮರುದಿನ ಎರಡು ಕುರಿಗಳು ಎದುರು–ಬದುರು ಬಂದವು. ಅವು ತೀರಾ ಸಮೀಪ ಬಂದಾಗ ದೊಡ್ಡ ಕುರಿ "ನಾನು ಇಲ್ಲಿಯೇ ಮಲಗುತ್ತೇನೆ. ನೀನು ನನ್ನ ಮೇಲೆ ಕಾಲಿಟ್ಟು ಜಾಗರೂಕತೆಯಿಂದ ದಾಟು". ಎಂದು ಕುರಿಮರಿಗೆ ಹೇಳಿತು. ಮರಿ ಕುರಿ, ಹಿರಿಯ ಕುರಿಯ ಮೇಲೆ ಕಾಲಿಟ್ಟು ದಾಟಿತು. ಸಂಕದಿಂದ ಸುಖವಾಗಿ ಆ ದಡ ಸೇರಿತು. ಇತ್ತ ದೊಡ್ಡ ಕುರಿ, ಮರಿ ಕುರಿ ಸಂಕ ದಾಟಿದ ಮೇಲೆ ತಾನು ದಾಟಿ, ಕ್ಷೇಮವಾಗಿ ಈಚಿನ ದಡ ಸೇರಿತು.

ಗರ್ವದಿಂದ ಸಂಕದ ಮೇಲೆ ಗುದ್ದಾಡಿ ನಾಯಿಗಳು ಪ್ರಾಣ ಕಳೆದುಕೊಂಡರೆ, ಪರಸ್ಪರ ಸಹಕಾರದಿಂದ ಕುರಿಗಳು ಪ್ರಾಣ ಉಳಿಸಿಕೊಂಡು ಸುಖವಾಗಿ ದಡ ಸೇರಿದವು. ಇದುವೇ ಸಹಕಾರದ ಸಹಬಾಳ್ವೆ.

೧. ಸಂಕ ಎಂದರೇನು?

____

೨. ನಾಯಿಗಳು ಏಕೆ ಪ್ರಾಣ ಕಳೆದುಕೊಂಡವು?

____

೩. ಕುರಿಗಳು ಸುಖವಾಗಿ ದಡವನ್ನು ಸೇರಿದವು. ಇದಕ್ಕೆ ಕಾರಣವೇನು ? ಬರೆಯಿರಿ.

____

✤ ✤ ✤

@ KTBS
NOT TO BE REPUBLISHED

6ನೆಯ ತರಗತಿ ದ್ವಿತೀಯ ಭಾಷೆ ಕನ್ನಡ ಪಠ್ಯ ಪುಸ್ತಕ ರಚನಾವಿವರ ತಃಖ್ತೆ
ಪ್ರಥಮ ಸೆಮಿಸ್ಟರ್

ಕ್ರ. ಸಂ.	ಪಾಠದ ಹೆಸರು	ಸಾಹಿತ್ಯ ಪ್ರಕಾರ	ಪ್ರಮುಖ ಸಾಮರ್ಥ್ಯಗಳು	ಭಾಷಾ ಚಟುವಟಿಕೆಗಳು	ಅಳವಡಿಸಿದ ಜೀವನ ಮೌಲ್ಯಗಳು	ಬೋಧನಾ ವಿಧಾನ	ಅವಧಿಗಳು
೧ಎ	ಪೂರ್ವ ಸಿದ್ಧತಾ ಪಾಠಗಳು	ಚಿತ್ರ - ನುಡಿ ಚಿತ್ರ ನೋಡು ಕಥೆ ಹೇಳು ಕವಿತೆ	ನೋಡು - ಮಾತಾಡು - ಅರ್ಥೈಸು ಆಲಿಸು - ಅರ್ಥೈಸು	ಚಿತ್ರ ನೋಡು - ಮಾತಾಡು ಕಥೆ ಹೇಳು - ಕವಿತೆ ಓದು ಅರ್ಥೈಸು	ಇನ್ನೊಬ್ಬರಿಗೆ ಸಹಾಯ ಮಾಡು. ಅತಿಆಸೆ ಗತಿಗೇಡು. ಸುಳ್ಳು ನುಡಿಯಬಾರದು	ಚಿತ್ರ ಪಟ ವಿಧಾನ ಕಥಾ ವಿಧಾನ ನಟನೆ, ಸಂಗೀತ ವಿಧಾನ	೫
೧ಬಿ	ಈ ಮಣ್ಣು ನಮ್ಮದು	ಕವಿತೆ	ಆಲಿಸುವಿಕೆ: ಬಳಕೆಯಲ್ಲಿರುವ ಗೀತೆ, ಕಥನ ವಿವರಣೆ ಮತ್ತು ಒಗಟುಗಳನ್ನು ಅರ್ಥಮಾಡಿಕೊಳ್ಳುವುದು.	ನಟನೆ ಮುಖಾಂತರ ಲಯಬದ್ಧವಾಗಿ ಹಾಡುವುದು. ಅರ್ಥೈಸು.	ದೇಶಭಕ್ತಿ	ಲಯಬದ್ಧ ಹಾಡುವಿಕೆ ಪ್ರಶ್ನೋತ್ತರ ಪದ್ಧತಿ	೭
೨	ಕೂಗುತಿ-ದೆ ಪಕ್ಷಿ	ಕಥೆ	ಸೂಕ್ತ ಸ್ವರ ಭಾರ ಮೂಲಕ ಸರಳ ಕಥೆಗಳನ್ನು ಹೇಳುವುದು.	ಒಗಟು ಒಡೆಯುವುದು ಕಥೆ ಹೇಳುವಿಕೆ ಅಭಿನಯಿಸುವಿಕೆ	ತಾನು ವಾಸಿಸುವ ಮರದ ಮೇಲಿನ ಪ್ರೀತಿ. ಪ್ರೀತಿ ಮೌಲ್ಯ	ಕಥಾ ಪದ್ಧತಿ ನಾಟಕ ಪದ್ಧತಿ	೮+೧
೩	ಕೆಳದಿ ಚೆನ್ನಮ್ಮ	ನಾಟಕ	ಸ್ಪಷ್ಟ ಉಚ್ಚಾರಣೆಯೊಂದಿಗೆ ನಿರರ್ಗಳವಾಗಿ ಮಾತನಾಡುವುದು. ಪಠ್ಯದಲ್ಲಿರುವ ಮಾಹಿತಿ ಗ್ರಹಿಸಿಕೊಂಡು ಯಾರು? ಯಾವಾಗ? ಎಲ್ಲಿ? ಏಕೆ? ಪ್ರಶ್ನೆಗಳಿಗೆ ಉತ್ತರಿಸುವುದು.	ಅಭಿನಯ: ಮಾತನಾಡುವುದು ಪದ್ಯಪೂರಕ ವಾಕ್ಯಖಂಡಕ್ಕೆ ಉತ್ತರಿಸುವುದು	ಕನ್ನಡಿಗರ ಪರಂಪರೆ, ಮೌಲ್ಯ, ಬೇಡಿ ಬಂದವರಿಗೆ ಆಶ್ರಯ, ಅದಕ್ಕಾಗಿ ಹೋರಾಟ	ನಾಟಕ ಅಭಿನಯ ಪಾತ್ರಗಳು ನಿರರ್ಗಳವಾಗಿ ಮಾತನಾಡುವುದು	೮+೨
೪	ನಮ್ಮೂರ ಕೆರೆ	ಪದ್ಯ	ಪದ್ಯವನ್ನು ಓದಿದ ಬಳಿಕ ಪ್ರಶ್ನೆಗಳಿಗೆ ಉತ್ತರಿಸುವುದು ಪ್ರಶ್ನೆ ರಚನೆಗೆ ಅವಕಾಶ ಒದಗಿಸುವುದು	ನೈರ್ಮಲ್ಯದ ಬಗ್ಗೆ ವೈಚಾರಿಕ ಚಟುವಟಿಕೆಗಳು ಟಿಪ್ಪಣಿ ರಚನೆ, ಪ್ರಶ್ನೆ ರಚನೆ, ವಾಕ್ಯ ರಚನೆ	ಪರಿಸರ ನೈರ್ಮಲ್ಯ	ಃಡಿಚಿiಟ ಖಣಾಡಿಚಿ-ಟiಣಿ ಒಜಣಖಾಜ ಅಥವಾ ಹರ್ಬಾರ್ಟನ ಪಂಚಸೋಪಾನ ಅಥವಾ ಚಟುವಟಿಕೆ ಅಥವಾ ಪ್ರಾತ್ಯಕ್ಷಿಕ ವಿಧಾನ	೭
೫	ಅಳಿಲು	ಗದ್ಯ ಪ್ರಬಂಧ ರೂಪ	ಸಂಚಿತ ಪ್ರಾಣಿ ಅಥವಾ ವಸ್ತು ಬಗ್ಗೆ ವಿವರಿಸು ಅಥವಾ ಮಾಹಿತಿ ನೀಡು.	ಅಳಿಲಿನ ಮುಖಾಂತರ ಸಾಮಾಜಿಕ ಸೇವಾ ಚಟುವಟಿಕೆ, ವರ್ತನಾ ಬದಲಾವಣೆ ಚಟುವಟಿಕೆ	ರಾಷ್ಟ್ರ ಕಾರ್ಯದಲ್ಲಿ ಸೇವೆ ನೀಡು	ಮೈಂಡ್ ಮ್ಯಾಪಿಂಗ್ ವಿಧಾನ ಅಥವಾ ಪ್ರಾತ್ಯಕ್ಷಿಕಾ ವಿಧಾನ	೭+೨
೬	ಎದೆ ಗುಂದದ ವೀರರು	ವ್ಯಕ್ತಿ ಪರಿಚಯ	ಸರಳ ಕಥೆ ಮತ್ತು ನಿಯತ ಕಾಲಿಕೆಗಳನ್ನು ಓದುವುದು ಹಾಗೂ ಪ್ರಶ್ನೋತ್ತರ ಬರಹ-ವಾಕ್ಯರಚನೆ	ಘಟನೆ - ಕಾರಣ ಪರಿಣಾಮ - ಆಲೋಚನಾ ವಿಧಾನ ಬೆಳವಣಿಗೆ ನಿಯತ ಕಾಲಿಕೆ ಓದುವ ಚಟುವಟಿಕೆ. ಬರಹ.	ಸಾಹಸ ಮನೋಧರ್ಮ ನಿರಾಸೆಯಾಗದಿರುವುದು	ಚಿತ್ರ ಮೂಲಕ ಘಟನಾ ಪದ್ಧತಿ	೮+೩
೭	ಅನ್ವೇಷಣೆ	ಪದ್ಯ	ಮಾತು: ಸಮರ್ಪಕವಾಗಿ (ರಾಗಬದ್ಧವಾಗಿ) ಕಂಠಪಾಠ ಒಪ್ಪಿಸುವುದು.	ಲಯಬದ್ಧವಾಗಿ ಹಾಡುವುದು. ಪ್ರಶ್ನೆಗಳಿಗೆ ಉತ್ತರ ಬರೆಯುವುದು. ವಾಕ್ಯಪ್ರಕಾರ ಅರಿಯುವುದು.	ಹೊಂದಿಕೆ ಮೌಲ್ಯ	ಹಾಡುವುದು ಹರ್ಬಾರ್ಟನ ಪಂಚಸೋಪಾನಗಳು	೭
						ಒಟ್ಟು	೬೫

© KTBS NOT TO BE REPUBLISHED

ಪದಕೋಶ

ಅ

ಅಚ್ಚರಿ – ಆಶ್ಚರ್ಯ,
ಅಜ್ಞಾನ – ಅರಿವಿಲ್ಲದಿರುವಿಕೆ
ಅಡ್ಡ – ತಡೆ,
ಅತ್ಯುತ್ತಮ – ಅತಿ ಉತ್ತಮ
ಅದೃಷ್ಟ – ಭಾಗ್ಯ,
ಅನುಮೋದಿಸು – ಒಪ್ಪಿಸು, ಸಮ್ಮತಿಸು
ಅಪಘಾತ – ಅನಿರೀಕ್ಷಿತವಾಗಿ ಒದಗಿದ ಅಪಾಯ
ಅಪಾಯ– ಕೇಡು, ಹಾನಿ.
ಅಭ್ಯಾಸ – ರೂಢಿ, ವ್ಯಾಸಂಗ.
ಅಭಿಮಾನ– ಹೆಮ್ಮೆ, ಅಹಂಕಾರ.
ಅಭಿಲಾಷೆ– ಆಸೆ, ಬಯಕೆ
ಅಮರ – ಶಾಶ್ವತವಾದ
ಅಮೃತ – ಸುಧೆ, ಹಾಲು.
ಅವಲಂಬನೆ – ಆಸರೆ, ಆಧಾರ.
ಅಹಂ– ನಾನು ಎಂಬ ಭಾವ, ಗರ್ವ

ಆ

ಆಕ್ರಮ– ದಾಳಿ ಮಾಡುವುದು
ಆಗರ – ಆಶ್ರಯ, ಮನೆ
ಆಘಾತ– ದೊಡ್ಡಕೇಡು ಉಂಟಾಗು,
ಆಧುನಿಕ – ಈಗಿನ, ಹೊಸ
ಆದೇಶ– ಅಪ್ಪಣೆ
ಆಯಾಸ–ಬಳಲಿಕೆ
ಆಶಯ– ಮನಸ್ಸಿನ ಭಾವ, ಅಭಿಪ್ರಾಯ
ಆಶ್ರಯ– ಆಸರೆ
ಆಸನ– ಕುಳಿತುಕೊಳ್ಳುವುದು ಕುಳಿತುಕೊಳ್ಳುವ ಸಾಧನ, ಪೀಠ
ಆಸೆ–ಬಯಕೆ.

ಈ

ಈಜು – ಈಸು

ಕ

ಕಂಗು– ಅಡಕೆಯ ಮರ.
ಕಂಗೊಳಿಸು– ಸುಂದರವಾಗಿ ಕಾಣು.
ಕಡಗ– ಕೈ ಅಥವಾ ಕಾಲಿಗೆ ಹಾಕಿಕೊಳ್ಳುವ ಬಳೆ,
ಕಡಲ್ಗಾಲುವೆ–ಸಮುದ್ರದ ಕಾಲುವೆ
ಕಣ– ತೀರ ಸಣ್ಣ ಚೂರು
ಕಣ್ಮಣಿ– ಅಚ್ಚುಮೆಚ್ಚಾದದ್ದು,
ಕಷ್ಟ– ಶ್ರಮ.
ಕ್ರಾಂತಿ– ಮೂಲಭೂತ ಬದಲಾವಣೆ
ಕಾಯ್ವ– ಕಾಯುವ, ರಕ್ಷಣೆ
ಕಣ್‌ತಪ್ಪಿಸು– ಮರೆ ಮಾಚು
ಕರ್ತವ್ಯ– ಕೆಲಸ
ಕನಿಕರ– ಮರುಕ, ದಯೆ
ಕಲಕಲ– ನೀರಿನ ಧ್ವನಿ
ಕಲಕು– ಕದಡು,
ಕಲರವ– ಮಧುರ ಧ್ವನಿ
ಕಲಿತನ– ಶೌರ್ಯ,
ಕಲ್ಪನೆ– ಊಹೆ
ಕಾವಲು– ರಕ್ಷಣೆ
ಕಿವುಡ– ಕಿವಿ ಕೇಳಿಸದವನು.
ಕೀರ್ತಿ– ಖ್ಯಾತಿ,

@ KTBS NOT TO BE REPUBLISHED

ಕುಗ್ರಾಮ– ತೀರ ಚಿಕ್ಕಹಳ್ಳಿ
ಕುತೂಹಲ– ವಿಸ್ಮಯ, ತವಕ
ಕುಂಟ– ಕಾಲು ಊನವಾದವನು
ಕುರುಡ– ಕಣ್ಣು ಕಾಣದವನು
ಕೂಗು– ಧ್ವನಿ ಮಾಡು
ಕ್ರೂರ– ನಿರ್ದಯವಾದ
ಕೃತಜ್ಞ– ಉಪಕಾರ ನೆನೆಯುವವನು
ಕೃತಜ್ಞತೆ– ಉಪಕಾರ ಸ್ಮರಣೆ,
ಕೈವಶ– ಸ್ವಾಧೀನಪಡಿಸಿಕೊಳ್ಳು
ಕೊಡವಿ–ಝಾಡಿಸಿ,
ಕೊಳೆ– ಕೆಟ್ಟು ನಾರು.
ಕೋಟೆ– ದುರ್ಗ.

ಖ

ಖ್ಯಾತ– ಪ್ರಸಿದ್ಧ,
ಖುಷಿ– ಸಂತೋಷ

ಗ

ಗಟಾರ– ಚರಂಡಿ,
ಗರ್ವ– ಸೊಕ್ಕು, ಹೆಮ್ಮೆ
ಗಾಬರಿ– ಭಯ,ಗೊಂದಲ.
ಗಾಯಕ– ಹಾಡುಗಾರ,
ಗುಂಡಿಗೆ– ಎದೆ, ಹೃದಯ, ಧೈರ್ಯ.
ಗುಡಿ– ದೇವಾಲಯ
ಗುರುತಿಸು– ಗೊತ್ತು ಹಚ್ಚು,
ಗುಲ್ಲು– ಗಲಾಟೆ,ಪುಕಾರು
ಗೂಡು– ನೆಲೆ,(ಪಕ್ಷಿಗಳ ನೆಲೆ) ಗೋಡೆಯಲ್ಲಿ ಕೊರೆದು ಉಂಟುಮಾಡಿದ ಜಾಗ.
ಗರ್ಜಿಸು– ಕೂಗು ಆರ್ಭಟಿಸು.
ಗೋಲ– ಗುಂಡಗಿರುವುದು

ಘ

ಘೋಷಿಸು– ಪ್ರಕಟಿಸು, ಜಾಹೀರು ಮಾಡು

ಚ

ಚರ್ಚೆ– ಪರ್ಯಾಲೋಚನೆ, ವಿವಾದ
ಚಿಂತನೆ– ಯೋಚನೆ, ಆಲೋಚನೆ, ಧ್ಯಾನ,
ಚಿಂತಿಸು– ಆಲೋಚಿಸು
ಚಿಂವ್ ಚಿಂವ್– ಗುಬ್ಬಿಯ ಧ್ವನಿ
ಚಿಕಿತ್ಸೆ– ರೋಗಕ್ಕೆ ಮಾಡುವ ವೈದ್ಯೋಪಚಾರ
ಚಿಲಿಪಿಲಿ– ಪಕ್ಷಿಗಳ ಕೂಗು
ಚೆಲ್ಲಾಟ– ವಿನೋದ, ವಿಲಾಸ

ಜ

ಜಾಣ್ಮೆ– ಜಾಣತನ
ಜನಪ್ರಿಯ– ಜನರಿಗೆ ಮೆಚ್ಚುಗೆಯಾದ.
ಜೀವ ಜಲ– ಜೀವ ಹಿಡಿಯಲು ಬೇಕಾದ ದ್ರವ ಅಥವಾ ನೀರು
ಜವಾಬ್ದಾರಿ– ಹೊಣೆಗಾರಿಕೆ
ಜೀವನ– ಬದುಕು
ಜೀವ ಜಂತು– ಪ್ರಾಣಿ ಪಶು ಹಾಗೂ ಕೀಟಗಳು
ಜೊಂಡು– ಒಂದು ಜಾತಿಯ ಹುಲ್ಲು.

ಝ

ಝಾಡಿಸು– ಕೊಡಹು, ದಬಾಯಿಸು.

ಟ

ಟೊಂಗೆ– ಕೊಂಬೆ, ಶಾಖೆ

ತ

ತಂಗಾಳಿ– ತಣ್ಣನೆಯ ಗಾಳಿ,
ತಂತ್ರಜ್ಞಾನ– ಸಿದ್ಧಾಂತ ಜ್ಞಾನ
ತಂಬೆಲರು– ತಂಗಾಳಿ,
ತಂಪು– ತಣ್ಣನೆಯದು,

@ KTBS NOT TO BE REPUBLISHED

ತರಗತಿ– ದರ್ಜೆ, ಇಯತ್ತೆ, ವರ್ಗ
ತಲ್ಲೀನ– ಅದರಲ್ಲಿಯೇ ಆಸಕ್ತವಾದ,
ತಲೆದೂಗು– ಅನುಮೋದಿಸು, ಮೆಚ್ಚು.
ತಕ್ಷಣ– ಕೂಡಲೆ,
ತಾಣ– ಸ್ಥಾನ, ಆಶ್ರಯ,
ತೀರ್ಮಾನ– ನಿರ್ಣಯ,
ತುರ್ತು– ಜರೂರು.
ತೊಂದರೆ– ಅಡ್ಡಿ, ಉಪದ್ರವ.

ದ

ದಡ– ತೀರ, ತಟ, ದಂಡೆ
ದಶ– ಹತ್ತು
ದಿಕ್ಕೆಟ್ಟು– ನೆಲೆ ಇಲ್ಲವಾದ
ದುಮ್ಮಾನ– ವ್ಯಸನ, ಚಿಂತೆ
ದುರ್ಲಭ– ಹೊಂದಲು ಅಸಾಧ್ಯವಾದ
ದುಷ್ಟ– ನೀಚ, ಕೆಟ್ಟವನು.
ದೃಢಭಕ್ತಿ– ಅಚಲಭಕ್ತಿ, ಅಚಲ ನಂಬಿಕೆ
ದೃಶ್ಯ– ನೋಟ, ನಾಟಕದ ಒಂದು ಭಾಗ
ದೈವ– ದೇವರು, ಅದೃಷ್ಟ.

ಧ

ಧನ್ಯತೆ– ಕೃತಾರ್ಥತೆ,
ಧರ್ಮ– ಧಾರಣ ಮಾಡಿದುದು, ನ್ಯಾಯ.
ಧ್ವನಿ– ಸಪ್ಪಳ, ಕಂಠ
ಧಾರೆ– ಒಂದೇ ಸಮ ನೀರು ಸುರಿಯುವಿಕೆ
ಧುಮುಕು– ನುಗ್ಗು, ರಭಸದಿಂದ ಒಳಸೇರು.
ಧೂಳಿ– ಗಾಳಿಬೀಸುವುದರಿಂದ ಉಂಟಾಗುವ ಹುಡಿ.
ಧೈರ್ಯ– ಕೆಚ್ಚು, ದಿಟ್ಟತನ.

ನ

ನಂದನ– ಉದ್ಯಾನವನ
ನಂಬಿಕೆ– ವಿಶ್ವಾಸ
ನಲುಗು– ಸೊರಗು, ಸುಕ್ಕಾಗು.
ನಾಣ್ಣುಡಿ– ಗಾದೆ, ಲೋಕೋಕ್ತಿ
ನಾಮ– ಹೆಸರು.
ನಿರ್ಮಾಣ– ಸೃಷ್ಟಿ, ರಚನೆ
ನಿರಾಕರಿಸು– ತಿರಸ್ಕರಿಸು
ನಿವೇಶನ– ಮನೆ ಮುಂತಾದ ಕಟ್ಟಡಗಳನ್ನು ಕಟ್ಟುವ ಸ್ಥಳ, ಸೈಟು,
ನುಚ್ಚು ನೂರು– ಪುಡಿಪುಡಿಯಾಗು.
ನೇವರಿಸು– ಮೃದುವಾಗಿ ಸವರು

ಪ

ಪಂದ್ಯ– ಸ್ಪರ್ಧೆ,ಪಣ, ಜೂಜು
ಪರಂಪರೆ– ಕುಲ, ವಂಶ, ಸಾಲು.
ಪರಿಚಿತ– ಗುರುತುಳ್ಳವನು, ಪರಿಚಯವುಳ್ಳವನು.
ಪರಿಣತಿ– ನೈಪುಣ್ಯ, ಪ್ರೌಢಿಮೆ.
ಪರಿಹಾರ– ನಷ್ಟವನ್ನು ತುಂಬಿಕೊಡುವುದು.
ಪಾತಾಳ– ಭೂಮಿಯ ಕೆಳಗಿನ ಲೋಕ.
ಪಾರಾಗು– ದಾಟು.
ಪುಟ್ಟಪುಟ್ಟ– ಚಿಕ್ಕಚಿಕ್ಕ, ಸಣ್ಣ ಸಣ್ಣ
ಪೂರೈಕೆ– ಒದಗಿಸುವಿಕೆ.
ಪೈರು– ಪಯಿರು.
ಪ್ರತೀತಿ– ಜನಜನಿತವಾಗಿ ಬಂದ ತಿಳುವಳಿಕೆ
ಪ್ರದರ್ಶಿಸು– ತೋರಿಸು
ಪ್ರಯಾಣ– ಪ್ರವಾಸ, ಪಯಣ.
ಪ್ರಯತ್ನ– ಯತ್ನ, ಎತ್ತುಗಡೆ.
ಪ್ರಾರಂಭಿಸು– ಮೊದಲು ಮಾಡು.
ಪ್ರವಾಸ– ಸಂಚಾರ.
ಪ್ರಸಿದ್ಧಿ– ಖ್ಯಾತಿ,
ಪ್ರಜ್ಞೆ– ಎಚ್ಚರ, ತಿಳುವಳಿಕೆ.

ಬ

ಬಂಧನ– ಕಟ್ಟು, ಸೆರೆಮನೆ ವಾಸ.
ಬತ್ತು– ಒಣಗು, ಸೊರಗು

© KTBS NOT TO BE REPUBLISHED

ಬದುಕು– ಜೀವನ, ಜೀವಿಸು.
ಬಲ– ಶಕ್ತಿ
ಬಲಾಢ್ಯ– ಬಲಶಾಲಿ.
ಬಲಿ– ಆಹುತಿ
ಬಾಧಿಸು– ಹಿಂಸೆ ಪಡಿಸು
ಬೆರಗಾಗು– ಆಶ್ಚರ್ಯಪಡು
ಬೇಹುಗಾರ– ಗೂಢಚಾರ
ಬೋಳು– ಬರಿದಾದ ಸ್ಥಿತಿ.

ಭ

ಭಯ– ಅಂಜಿಕೆ, ಹೆದರಿಕೆ
ಭಾಗವಹಿಸು– ಪಾಲ್ಗೊಳ್ಳು
ಭಾವುಕತೆ– ರಸಿಕತೆ, ತಲ್ಲೀನತೆ
ಭೀಕರ– ಭಯವನ್ನುಂಟು ಮಾಡುವ
ಭೂತಾಯಿ– ಭೂಮಿ ತಾಯಿ
ಭೋರ್ಗರೆ– ಆರ್ಭಟಿಸು.

ಮ

ಮನೋಭಾವ– ಮನಸ್ಸಿನ ರೀತಿ
ಮನೋಹರ– ಸೊಗಸಾದ, ರಮಣೀಯವಾದ
ಮಾವುತ– ಮಾವುಟಿಗ, ಆನೆಯನ್ನು ನಡೆಸುವವನು.
ಮಿಗಿಲು– ಹೆಚ್ಚಾದುದು, ಶ್ರೇಷ್ಠವಾದುದು.
ಮುತ್ತು– ಮುತ್ತಿಗೆ, ಚುಂಬನ, ನವರತ್ನಗಳಲ್ಲಿ ಒಂದು.
ಮೆತ್ತು– ಬಳಿ, ತುರುಕು, ಹೊಡೆ.
ಮೆರೆ– ಹೊಳೆ, ಎದ್ದು ತೋರು, ಅಲಂಕರಿಸು.
ಮೂಲ– ಬೇರು, ಬುಡ, ಹುಟ್ಟು, ನೆಲೆ, ಆದಿ.

ರ

ರಕ್ಷಿಸು– ಕಾಪಾಡು,
ರಾರಾಜಿಸು– ಹೊಳೆ, ಪ್ರಕಾಶಿಸು, ಶೋಭಿಸು.
ರಾಷ್ಟ್ರಭಕ್ತಿ– ದೇಶಭಕ್ತಿ,
ರುಚಿ– ಸವಿ, ಆಸಕ್ತಿ

ವ

ವಟವಟ– (ಕಪ್ಪೆ ಮೊದಲಾದುವು) ಸದ್ದು ಮಾಡು.
ವರ್ಣಿಸು– ವಿಸ್ತಾರವಾಗಿ ಹೇಳು.
ವನ– ಕಾಡು
ವಿಚಾರ– ವಿಷಯ
ವಿದಾಯ– ಬೀಳ್ಕೊಡುಗೆ,
ವಿಪತ್ತು– ಕೇಡು, ಆಪತ್ತು,
ವಿಶದ– ಸ್ವಚ್ಛವಾದ, ಸ್ಪಷ್ಟವಾದ, ವಿವರವಾದ
ವಿಶ್ವ– ಜಗತ್ತು.

ಶ

ಶರಣು– ರಕ್ಷಣೆ,
ಶಸ್ತ್ರಾಸ್ತ್ರ– ಆಯುಧ,
ಶ್ರೇಷ್ಠ– ಉತ್ತಮವಾದುದು
ಶೌರ್ಯ– ಪರಾಕ್ರಮ, ಕೆಚ್ಚು, ಸಾಹಸ.

ಸ

ಸಂಗಡಿಗರು– ಜೊತೆಗಾರರು
ಸಂಗ್ರಾಮ– ಯುದ್ಧ.
ಸಂತಾನ– ವಂಶ, ಮಗ ಅಥವಾ ಮಗಳು, ಪರಂಪರೆ.
ಸಂಪರ್ಕ– ಸಂಬಂಧ, ಸ್ಪರ್ಶ.
ಸಂಪೂರ್ಣ– ತುಂಬಿದ, ಪೂರ್ತಿಯಾಗಿ.
ಸಂಸ್ಥಾನ– ದೇಶದ ಒಂದು ವಿಭಾಗ
ಸಂಸ್ಕೃತಿ– ಮನಸ್ಸಿನ ಪಕ್ವತೆ, ನಾಗರಿಕತೆಯ ಬೌದ್ಧಿಕ ಸಾಧನ
ಸತ್ಕಾರ್ಯ– ಒಳ್ಳೆಯ ಕೆಲಸ.
ಸನ್ನಿಧಾನ– ಸಮೀಪ, ಹಿರಿಯ ವ್ಯಕ್ತಿಗಳನ್ನು ಕುರಿತು ಹೇಳುವಾಗ ಬಳಸುವ ಮಾತು.
ಸಮಸ್ಯೆ– ಕಗ್ಗಂಟು, ಬಿಡಿಸಲು ಕಷ್ಟವಾದ ಪ್ರಶ್ನೆ.
ಸಮಾಧಾನ– ನೆಮ್ಮದಿ, ತೃಪ್ತಿ, ತಾಳ್ಮೆ.
ಸಮಾಚಾರ– ವಿಷಯ, ಸುದ್ದಿ

@ KTBS NOT TO BE REPUBLISHED

ಸಮೀಪ– ಹತ್ತಿರ,
ಸವಿ– ರುಚಿ,
ಸಹಜ– ಸ್ವಾಭಾವಿಕ
ಸಹಾಯ– ನೆರವು,
ಸಾಕ್ಷಿ– ರುಜುವಾತು
ಸಾಹಸ– ಪರಾಕ್ರಮ,
ಸಿಲುಕು– ತೊಡರಿಕೊಳ್ಳು
ಸುಂಟರಗಾಳಿ– ಚಕ್ರಕಾರವಾಗಿ ಸುತ್ತಿ ಸುತ್ತಿ ಬರುವ ಗಾಳಿ
ಸುಡುಗಾಡು– ಸ್ಮಶಾನ, ಮಸಣ
ಸುತ್ತಮುತ್ತ– ಎಲ್ಲ ಕಡೆಗಳಲ್ಲೂ,
ಸುಭಾಷಿತ– ಒಳ್ಳೆಯಮಾತು.
ಸುಳಿ– ಜಲಾವರ್ತ, ಸುತ್ತು, ಅಲೆ.
ಸೆಲೆ– ನೀರು ಒಸರುವ ಜಾಗ.
ಸೇವೆ– ಊಳಿಗ, ಉಪಚಾರ.
ಸೈನ್ಯ– ದಂಡು, ಪಡೆ
ಸೊರಗು– ಬಾಡು, ಬತ್ತು.

ಹ

ಹಂಬಲ– ತೀವ್ರವಾದ ಆಸೆ
ಹಚ್ಚ ಹಸಿರು– ಹಸುರಾದ.
ಹಠಾತ್ತಾಗಿ– ಥಟ್ಟನೆ, ಒಮ್ಮಿಂದೊಮ್ಮೆಲೆ.
ಹೆಮ್ಮೆ– ಹಿರಿಮೆ, ಅಭಿಮಾನ.
ಹೊಂದಿಕೆ– ಹೊಂದಾಣಿಕೆ, ಸ್ನೇಹ.
ಹೊಂಬಣ್ಣ– ಬಂಗಾರದ ಬಣ್ಣ
ಹೊಣೆ– ಜವಾಬ್ದಾರಿ,
ಹೊಳೆ– ನದಿ, ಮಿನುಗು
ಹೊಂಚು– ಅಡಗಿಕೊಂಡು ಕಾಯ್ದಿರುವಿಕೆ
ಹೌಹಾರು– ಗಾಬರಿಯಾಗು, ಬೆಚ್ಚಿಬೀಳು.

@ KTBS
NOT TO BE REPUBLISHED

ಎರಡನೆಯ ಸೆಮಿಸ್ಟರ್

ಪದ್ಯ ಪಾಠ –೧

ಕನ್ನಡಮ್ಮ

ಪ್ರವೇಶ :

ನಮ್ಮಮ್ಮ ನಮ್ಮನ್ನು ಹೇಗೆ ಸಲಹುತ್ತಾಳೆ? ಹೇಗೆ ಮುದ್ದಾಡುತ್ತಾಳೆ? ಅವಳು ಮಾತು ಕಲಿಸುವ ಪರಿ ಯಾವುದು? ಅವಳೇಕೆ ಹಾಗೆ ಮಾಡುತ್ತಾಳೆ? ಈ ಬಗ್ಗೆ ಒಂದೊಂದು ವಾಕ್ಯ ಹೇಳಿ.

ನಾವು ನಾಡನ್ನು ತಾಯಿಗೆ ಹೋಲಿಸುತ್ತೇವೆ. ಏಕೆಂದರೆ ಅದು ನಮ್ಮನ್ನು ರಕ್ಷಿಸುತ್ತದೆ, ಸಲಹುತ್ತದೆ, ರಂಜಿಸುತ್ತದೆ, ಬೆಳೆಸುತ್ತದೆ. ಈ ಅಂಶಗಳನ್ನು ಭಾಗೀರಥಿ ಹೆಗಡೆ ಅವರು ಈ ಕವಿತೆಯಲ್ಲಿ ಧನ್ಯತಾಭಾವದೊಂದಿಗೆ ಒಡಮೂಡಿಸಿದ್ದಾರೆ.

ಹೊತ್ತು ಹೆತ್ತು ಸಲಹಿದವಳು
ತುತ್ತನಿತ್ತು ಬೆಳೆಸಿದವಳು
ಎತ್ತಿ ಮುದ್ದಾಡಿದವಳು ತಾಯಿಯಲ್ಲವೆ?
ನಮ್ಮ ತಾಯಿಯಲ್ಲವೆ?

ನುಡಿಗೆ ನಾದ ತುಂಬಿದವಳು
ಎದೆಗೆ ಹಾಡನೂಡಿದವಳು
ಒಡಲಿಗನ್ನವುಣಿಸಿದವಳು ಅಮ್ಮನಲ್ಲವೆ?
ಕನ್ನಡಮ್ಮನಲ್ಲವೆ?

ಮಣ್ಣಿನಲ್ಲಿ ಚಿನ್ನವಿರಿಸಿ
ಕಣ್ಣಿನಲ್ಲಿ ಬೆಳಕು ಬರಿಸಿ
ನಮ್ಮ ನಿಮ್ಮ ಕಾಯುವವಳು ಅಮ್ಮನಲ್ಲವೆ?
ಕನ್ನಡಮ್ಮನಲ್ಲವೆ?

ಮೊರೆವ ಕಡಲ ತೆರೆಗಳಾಗಿ
ಸುರಿವ ಮಳೆಯ ಹನಿಗಳಾಗಿ
ನಿರತ ಲಾಲಿ ಹಾಡುವವಳು ಅಮ್ಮನಲ್ಲವೆ?
ಕನ್ನಡಮ್ಮನಲ್ಲವೆ?

© KTBS
NOT TO BE REPUBLISHED

ಅಮ್ಮ ನಿನಗೆ ನೂರು ನಮನ
ಕಣ್ಣ ಬಿಟ್ಟು ನೋಡು ನಮ್ಮ
ನಿನ್ನ ಕೈಯನೆತ್ತಿ ಹರಸು, ತಾಯಿಯಲ್ಲವೆ?
ನಾಡದೇವಿಯಲ್ಲವೆ?

– ಭಾಗೀರಥಿ ಹೆಗಡೆ

ಕವಯತ್ರಿ ಪರಿಚಯ:



ಭಾಗೀರಥಿ ಹೆಗಡೆಯವರು ಉತ್ತರಕನ್ನಡ ಜಿಲ್ಲೆಯ ಸಿದ್ದಾಪುರತಾಲೂಕಿನ ತಟ್ಟಿಕಾಯ ಗ್ರಾಮದಲ್ಲಿ ಜನ್ಮವೆತ್ತಿದ್ದಾರೆ. ೧೨ಕೃತಿಗಳು ಪ್ರಕಟವಾಗಿವೆ. **'ಗುಬ್ಬಿಯ ಸ್ವರ್ಗ'**, ಮಕ್ಕಳಿಗಾಗಿಯೇ ರಚಿಸಿದ ಕೃತಿ, ಇವರ **'ಕನ್ನಡಮ್ಮ'** ಕೃತಿ ಕನ್ನಡ ನಾಡಿನ ಹಿರಿಮೆಯನ್ನು ಕುರಿತಾಗಿದೆ. ಮಕ್ಕಳು ಹಾಡಿ ನಲಿದು ಕುಣಿವ ಪದ್ಯ ಇದು.

ಓದಿ– ತಿಳಿ

ಹೆತ್ತು–ಜನುಮ ನೀಡಿ. ಚಿನ್ನ–ಬಂಗಾರ. ಹೊನ್ನು. ಧರೆ–ಭೂಮಿ. ಸಲಹು–ಕಾಪಾಡು. ರಕ್ಷಿಸು. ಮೊರೆ–ಆರ್ಭಟಿಸು. ಗರ್ಜಿಸು. ಧಾರೆ–ಒಂದೇ ಸಮನೆ ನೀರು ಸುರಿಯುವಿಕೆ. ನಾದ–ಮಧುರ ಧ್ವನಿ. ಕಡಲು–ಸಮುದ್ರ. ನಮನ–ವಂದನೆ. ಊಡು–ಕುಡಿಸು. ಬಿಂಬ–ಪ್ರತಿರೂಪ. ಹರಸು–ಆಶೀರ್ವಾದ ಮಾಡು. ಹಾರೈಸು. ಒಡಲು–ಹೊಟ್ಟೆ. ಪೊರೆ–ರಕ್ಷಣೆ. ಸಲಹು.

ಗಮನಿಸಿ– ತಿಳಿ

ನಾಡದೇವಿ – ರಾಜ್ಯದ ದೇವತೆ, ಭುವನೇಶ್ವರಿ. ಸಾಧುಸಂತರು–ಯೋಗಿಗಳು, ಋಷಿಗಳು. ಲಾಲಿ – ಜೋಗುಳ ಹಾಡು.

@KTBS NOT TO BE REPUBLISHED

ಅಭ್ಯಾಸ

ಅ. ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ನಮ್ಮನ್ನು ಮುದ್ದಾಡುವವಳು ಯಾರು?

೨. ಕನ್ನಡಮ್ಮ ತನ್ನ ಕಂದಮ್ಮಗಳನ್ನು ಲಾಲಿಸುವುದು ಹೇಗೆ?

೩. ನಮಗೆ ಅನ್ನ ಉಣ್ಣಿಸಿದವರು ಯಾರು?

೪. ಅಮ್ಮ ಬೆಳಕನ್ನು ಎಲ್ಲಿ ಬರಿಸುತ್ತಾಳೆ?

೫. ಕೈಯನ್ನೆತ್ತಿ ಹರಸುವವಳು ಯಾರು?

ಆ. ಈ ಪ್ರಶ್ನೆಗಳಿಗೆ ೨–೩ ವಾಕ್ಯಗಳಲ್ಲಿ ಉತ್ತರಿಸಿರಿ.

೧. ನಮ್ಮಮ್ಮ ಕಾಯುವ ರೀತಿ ಹೇಳಿರಿ.

೨. ಅಮ್ಮ ಲಾಲಿ ಹಾಡುವ ಪರಿ ತಿಳಿಸಿರಿ.

೩. ನಾಡದೇವಿಯನ್ನು ಮಗು ಏನೆಂದು ಪ್ರಾರ್ಥಿಸುವುದು?

ಇ. ಈ ಪ್ರಶ್ನೆಗಳಿಗೆ ೩–೪ ವಾಕ್ಯಗಳಲ್ಲಿ ಉತ್ತರಿಸಿರಿ.

೧. ತಾಯಿ ನಮ್ಮನ್ನು ಮುದ್ದಾಡುವ ರೀತಿ ಹೇಳಿರಿ.

೨. ಲಾಲಿ ಹಾಡು ಹೇಳುವ ರೀತಿ ಹೇಳಿರಿ.

ಈ. ಬಿಟ್ಟ ಸ್ಥಳ ತುಂಬಿರಿ.

೧. ಹೊತ್ತು ________________ ಸಲಹಿದವಳು

೨. ನುಡಿಗೆ ________________ ತುಂಬಿದವಳು

೩. ನಮ್ಮ ನಿಮ್ಮ ಕಾಯುವವಳು ________________ ನಲ್ಲವೆ?

೪. ಅಮ್ಮ ನಿನಗೆ ________________

ಉ. ಹೊಂದಿಸಿ ಬರೆಯಿರಿ.

೧. ತುತ್ತನಿಟ್ಟು – ತುಂಬಿದವಳು ________________

೨. ಒಡಲಿಗೆ ಅನ್ನ – ಕಾಯುವವಳು ________________

೩. ನುಡಿಗೆ ನಾದ – ಬೆಳೆಸಿದವಳು ________________

೪. ನಮ್ಮ ನಿಮ್ಮ – ಉಣ್ಣಿಸಿದವಳು ________________

ಊ. ಪದ್ಯ ಪೂರ್ಣಗೊಳಿಸಿರಿ.

ಅಮ್ಮ ನಿನಗೆ ನೂರು ________________________

____

____

ನಾಡದೇವಿಯಲ್ಲವೆ?

@ KTBS NOT TO BE REPUBLISHED

ಅಭ್ಯಾಸ ಚಟುವಟಿಕೆ

ಅ) ಕನ್ನಡ ನಾಡು ನುಡಿಗಾಗಿ ದುಡಿದವರ ಚಿತ್ರ ಸಂಗ್ರಹಿಸಿರಿ.

ಆ) ಕನ್ನಡ ಅಭಿಮಾನ ಮೂಡಿಸುವ ಕುವೆಂಪುರವರ, ಬೇಂದ್ರೆಯವರ ಕವಿತೆ ಸಂಗ್ರಹಿಸಿರಿ.

ಭಾಷಾಭ್ಯಾಸ

ಅ. ಕನ್ನಡ ನಾಡು ಪರಿಚಯ ಮಾಡಿಕೊಳ್ಳಿರಿ. ಬಿಟ್ಟ ಸ್ಥಳ ತುಂಬಿರಿ.

ಕ್ರ. ಸಂ.	ವಿವರಗಳು	ಪ್ರಶ್ನೆಗೆ ಉತ್ತರಿಸಿರಿ
೧.	ಕನ್ನಡ ನಾಡನ್ನು ಗಂಧದ ಬೀಡು ಎನ್ನುತ್ತಾರೆ.	ಶ್ರೀಗಂಧದ ಮರಗಳು ಎಲ್ಲಿವೆ? ________
೨.	ಕನ್ನಡ ನಾಡನ್ನು ಚಿನ್ನದ ಗೂಡು ಎನ್ನುತ್ತಾರೆ.	ಚಿನ್ನ ಎಲ್ಲಿ ಸಿಗುತ್ತದೆ? ________
೩.	ಕನ್ನಡ ನಾಡು ಕರಾವಳಿ ಹೊಂದಿದೆ.	ಯಾವ ದಿಕ್ಕಿಗೆ ಕರಾವಳಿ ಇದೆ? ________
೪.	ಕನ್ನಡ ನಾಡು ಶಿಲ್ಪಕಲೆಯ ತವರೂರು.	ದೇವಾಲಯಗಳ ಎರಡು ಹೆಸರು ಬರೆ. ________
೫.	ಕನ್ನಡ ನಾಡು ಭತ್ತದ ಕಣಜ.	ಯಾವ ಜಿಲ್ಲೆಗಳಲ್ಲಿ ಹೆಚ್ಚು ಭತ್ತ ಬೆಳೆಯುತ್ತಾರೆ ________
೬.	ಕನ್ನಡ ನಾಡಿನ ಐ.ಟಿ. ಬಿ.ಟಿ. ಕೇಂದ್ರ	ಯಾವ ನಗರದಲ್ಲಿ ಬಹಳ ಇವೆ? ________
೭.	ಕನ್ನಡ ನಾಡಿನಲ್ಲಿರುವ ಮೂರು ಅಣೆಕಟ್ಟುಗಳು	ಯಾವುವು ? ಹೆಸರು ಬರೆಯಿರಿ. ________
೮.	ಕನ್ನಡ ನಾಡಿನಲ್ಲಿ ಬಿದರಿ ಕಲೆ ಪ್ರಸಿದ್ಧವಾಗಿದೆ	ಆ ಊರಿನ ಹೆಸರೇನು? ________
೯.	ಕರ್ನಾಟಕದಲ್ಲಿ ಬೆಳೆದು ಬಂದ ಸಂಗೀತಕಲೆ	ಅದು ಯಾವುದು ? ________

@ KTBS NOT TO BE REPUBLISHED

ಆ. ಇವುಗಳನ್ನು ಗಮನಿಸಿ ಓದಿರಿ. ಪದ ರಚನೆಯಲ್ಲಿ ಆಗುವ ಕ್ರಿಯೆ ಗಮನಿಸಿರಿ.

ಊರು + ಊರು = ಊರೂರು (ಉ ಲೋಪವಾಗಿದೆ)

ಉ + ಊ

ಮರ + ಅನ್ನು = ಮರವನ್ನು (ವ ಎಂಬ ಹೊಸ ಅಕ್ಷರ ಬಂದಿದೆ)

ಅ + ಅ

ಮಳೆ + ಕಾಲ = ಮಳೆಗಾಲ (ಕ ಬದಲಾಗಿ ಗ ಆದೇಶವಾಗಿದೆ)

ಎ + ಕ

ಈ ಪದಗಳನ್ನು ಬಿಡಿಸಿ ಬರೆಯಿರಿ. ಆದ ಬದಲಾವಣೆ ತಿಳಿದುಕೊಳ್ಳಿರಿ.

ಮಣ್ಣಲ್ಲಿ ಇಲ್ಲಿಲ್ಲ ಮಾತನ್ನು

______________, ______________, ______________

ಮಣ್ಣಲ್ಲಿ ಪದದಲ್ಲಿ **ಉ** ಲೋಪವಾಗಿದೆ.

ಇಲ್ಲಿಲ್ಲ ಪದದಲ್ಲಿ ಇ ಲೋಪವಾಗಿದೆ

ಮಾತನ್ನು ಪದದಲ್ಲಿ **ಉ** ಲೋಪವಾಗಿದೆ.

ಹೀಗೆ ಸಂಧಿಯಾಗುವಾಗ ಅಕ್ಷರ ಲೋಪವಾಗುವುದಕ್ಕೆ ಲೋಪಸಂಧಿ ಎನ್ನುತ್ತಾರೆ.

@ KTBS NOT TO BE REPUBLISHED

ಭಾಷಾ ಚಟುವಟಿಕೆ

ಊದಬತ್ತಿ

ಇದು ಗಂಧದ ಬತ್ತಿ. ಗಂಧದ ಲೇಪನವನ್ನು ತೆಳ್ಳನೆಯ ಕಡ್ಡಿಗೆ ಹಚ್ಚಿರುತ್ತಾರೆ. ಅದನ್ನು ಒಣಗಿಸಿದಾಗ ಅದು ಊದಬತ್ತಿಯಾಗುತ್ತದೆ. ಅದನ್ನು ಉರಿಸಿದಾಗ ಮಾತ್ರ ಸುಗಂಧ ಬೀರುತ್ತದೆ. ಅಂದರೆ ಸುಟ್ಟಾಗ ಶ್ರೀಗಂಧ ಪರಿಮಳ ನೀಡುತ್ತದೆ. ಜೀವನದ ಸಾರ್ಥಕತೆ ಪಡೆಯುತ್ತದೆ. ಹಾಗೆಯೇ ಯಾವ ಮನುಷ್ಯನು ತ್ಯಾಗಿಯಾಗಿ, ಸಮಾಜಮುಖಿಯಾಗಿ ಕಷ್ಟಗಳಲ್ಲಿ ಪ್ರಾಮಾಣಿಕತೆಯಿಂದ ದುಡಿಯುತ್ತಾನೋ ಅವನೇ ಸಮಾಜ ಸೇವಕ. ಅಂತಹ ವ್ಯಕ್ತಿಗಳು ಅನೇಕರು ಇದ್ದಾರೆ ಅವರಲ್ಲಿ ಗಾಂಧೀಜಿ, ಬುದ್ಧ, ಬಸವಣ್ಣ, ಅಂಬೇಡ್ಕರ ಪ್ರಮುಖರು.

೧. ಊದಬತ್ತಿ ಎಂದರೇನು?

೨. ಅದು ಯಾವಾಗ ಸುಗಂಧ ಬೀರುತ್ತದೆ?

೩. ಯಾರು ಸಮಾಜ ಸೇವಕರು?

೪. ಸಮಾಜ ಸೇವಕರ ಇಬ್ಬರ ಹೆಸರನ್ನು ಹೇಳಿ.

೫. ಒಬ್ಬರ ತ್ಯಾಗದ ಬಗ್ಗೆ ವಿವರಣೆ ಕೊಡಿ.

ಪಾಠ -೨


ಸಾಹಸಿ ಮೊನಾಲಿಸಾ

ಪ್ರವೇಶ :

ಯುದ್ಧವನ್ನು ಗೆಲುವುದು ಸಾಹಸ. ಗಡಸು ಭೂಮಿಯನ್ನು ಉತ್ತಿ ಬಿತ್ತುವುದೂ ಸಾಹಸ. ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಗಳಿಸುವುದೂ ಸಾಹಸ. ಇವು ಆಕಸ್ಮಿಕವಾಗಿ ದಿಢೀರನೆ ಬರುವುದಿಲ್ಲ. ಬಾಲ್ಯದಲ್ಲಿಯೇ ಈ ನಡತೆ ಬೆಳೆಸಬೇಕು.

ಇದೇ ರೀತಿ ಪ್ರೀತಿ, ದಯೆ, ಅಂತಃಕರಣಗಳು ಇನ್ನೊಬ್ಬರಿಗೆ ತೋರಿಸಲೇಬೇಕು. ಇನ್ನೊಬ್ಬರ ಕಷ್ಟದಲ್ಲಿ ಸಹಾಯ, ಅನುಕಂಪ, ಇರಬೇಕು.

ಅಂಗವಿಕಲರ ಬಗ್ಗೆ, ರೋಗಿಗಳ ಬಗ್ಗೆ, ಅಜ್ಜ-ಅಜ್ಜಿಯರಿಗೆ ನೀವು ಯಾವ ರೀತಿ ಸಹಾಯ ಮಾಡಬೇಕು ಎಂಬುದನ್ನು ಎಲ್ಲರೂ ಕೂಡಿ ಚರ್ಚಿಸಿರಿ. ಪಟ್ಟಿ ಮಾಡಿರಿ.



© KTBS NOT TO BE REPUBLISHED

ಒಡಿಶಾ ರಾಜ್ಯದಲ್ಲಿ ಒಂದು ನಗರ ಗೋಪಬಂಧು. ಆ ನಗರದ ಯು.ಜಿ.ಎಂ.ಇ. ಶಾಲೆಯ ಗಂಟೆ ಬಾರಿಸಿತು. ಮಕ್ಕಳೆಲ್ಲ ಹೋ.. ಎನ್ನುತ್ತ ಮನೆಯ ಕಡೆ ಹೊರಟರು. ಎರಡನೆಯ ತರಗತಿಯ ಮೊನಾಲಿಸಾ ಮೆಲ್ಲನೆ ಮನೆಗೆ ಹೊರಟಿದ್ದಳು. ಆಕೆಯ ಹಿಂದೆ ಹತ್ತು ವರುಷದ ಕುರುಡ ಹುಡುಗನೂ ಹೊರಟಿದ್ದನು.

ರಸ್ತೆಯ ಬದಿಯ ಹುಲ್ಲನ್ನು ಎರಡು ದಷ್ಟಪುಷ್ಟ ಹೋರಿಗಳು ಮೇಯುತ್ತಿದ್ದವು. ಚಿನ್ನಾಟಮಾಡುತ್ತಿದ್ದವು. ಅವು ಒಮ್ಮಿಂದೊಮ್ಮೆಲೆ ಗುದ್ದಾಟಕ್ಕೆ ನಿಂತವು. ಒಂದನ್ನು ಇನ್ನೊಂದು ಕೊಂಬಿನಿಂದ ತಿವಿಯುತ್ತ, ಇರಿಯುತ್ತ ಮೆರೆದಾಡತೊಡಗಿದವು. ಅದನ್ನು ಮೊನಾಲಿಸಾ ನೋಡಿದಳು. ರಸ್ತೆಯ ಬದಿಗೆ ಸಾಗುತ್ತಿರುವಾಗ, ಅವು ಅವಳ ಕಡೆಗೆ ಜಿಗಿದು ಬಂದವು. ಆ ಕ್ಷಣ ಗಾಬರಿಗೊಂಡಳು. ಇನ್ನೇನು ತಿವಿಯಬೇಕೆನ್ನುವಷ್ಟರಲ್ಲಿ ಜೀವದ ಹಂಗಿಲ್ಲದೆ ಜೋರಾಗಿ ಆ ಬದಿಗೆ ಓಡಿದಳು. ಬದುಕಿದೆಯಾ ಬಡ ಜೀವ ಎನ್ನುವಷ್ಟರಲ್ಲಿ ಚಿಟ್ಟನೆ ಚೀರಿದ ಅಳುವ ಶಬ್ದ ಕೇಳಿತು. ಅದರ ಬೆನ್ನಹಿಂದೆಯೇ 'ನನ್ನನ್ನು ಕಾಪಾಡಿ! ಕಾಪಾಡಿ' ಎಂದು ಹುಡುಗನೊಬ್ಬ ಕಿರುಚುತ್ತಿದ್ದ.

ಮೊನಾಲಿಸಾ ಧ್ವನಿಯತ್ತ ಹೊರಳಿ ನೋಡಿದಳು. ಆ ಕುರುಡ ಹುಡುಗ ದನಗಳ ತಿವಿತಕ್ಕೆ ಒಳಗಾಗಿ ಬಿದ್ದಿದ್ದನು. ರಕ್ತ ಸೋರುತ್ತಿತ್ತು. ಸಹಾಯಕ್ಕಾಗಿ ಅತ್ತ ಇತ್ತ ಕೈಯಾಡಿಸುತ್ತಿದ್ದನು. ಎದ್ದು ನಿಂತರೆ ಅವನು ಆ ದನಗಳ ತುಳಿತಕ್ಕೆ ಸಿಕ್ಕು ಬೀಳುತ್ತಿದ್ದ. ಅದೆ ಸಮಯಕ್ಕೆ ಆ ರಸ್ತೆಯಲ್ಲಿ ಎರಡು ಕಾರುಗಳು ವೇಗವಾಗಿ ಎದುರು ಬದುರು ಬರುತ್ತಿದ್ದವು. ಕ್ಷಣ ತಡಮಾಡಿದರೆ ಹುಡುಗ ಸಾಯುತ್ತಾನೆಂದು ಚಿಂತಿಸಿದಳು. ಹೋರಿಗಳಿಗೆ ಹೆದರದೆ, ಕಾರುಗಳಿಂದಾಗುವ ಅಪಾಯವನ್ನು ಲೆಕ್ಕಿಸದೆ ಓಡಿದಳು. ಆ ಕುರುಡ ಹುಡುಗನ ಕೈ ಹಿಡಿದಳು. ದರದರನೆ ಎಳೆದು ರಸ್ತೆಯ ಅಂಚಿಗೆ ತಂದಳು. ಆತನನ್ನು ಬದುಕಿಸಿದಳು. ತಾನು ಕುಸಿದು ಕುಳಿತಳು. ರಸ್ತೆಯಲ್ಲಿ ಸಾಗುತ್ತಿದ್ದ ಕಾರಿನವನು ಇದನ್ನೆಲ್ಲ ನೋಡಿದ. ಅವನು ತನಗೇನೂ ಸಂಬಂಧವಿಲ್ಲದಂತೆ ಹೊರಟು ಹೋದನು. ಇನ್ನೊಬ್ಬ ಕಾರಿನ ಚಾಲಕ ಕಾರನ್ನು ನಿಲ್ಲಿಸಿದ. ಆ ದನಗಳನ್ನು ಓಡಿಸಿದ. ಬಿದ್ದ ಮಗುವನ್ನು ಎಬ್ಬಿಸಿದ. ಕಾರಿನಲ್ಲಿ ಪ್ರಥಮ ಚಿಕಿತ್ಸೆಯ ಪೆಟ್ಟಿಗೆ ತೆಗೆದ. ರಕ್ತ ಒಸರುತ್ತಿದ್ದ ಕಾಲನ್ನು ಡೆಟಾಲಿನಿಂದ ಒರೆಸಿದ. ಬ್ಯಾಂಡೇಜ್ ಕಟ್ಟಿದ. ಥರಥರನೆ ನಡುಗುತ್ತಿದ್ದ ಕುರುಡ ಹುಡುಗನಿಗೆ ಸಮಾಧಾನ ಹೇಳಿದನು. ಮೊನಾಲಿಸಾಳನ್ನು ಎಬ್ಬಿಸಿದ. " ಭೇಷ್! ಮಗು! ನಿನ್ನ ಧೈರ್ಯ ಮೆಚ್ಚಿದೆನು. ನಿನ್ನ ಸಮಯ ಪ್ರಜ್ಞೆ ಒಬ್ಬ ಕುರುಡನ ಜೀವ ಉಳಿಸಿತು. ನಿನ್ನ ಸಹಾನುಭೂತಿ ದೊಡ್ಡದು" ಎಂದು ಮಗುವನ್ನು ಎತ್ತಿ ಮುದ್ದಾಡಿದನು.

ಆಗ ಮಗು "ಮಾಮಾ, ನೀನು ಬಹಳ ಒಳ್ಳೆಯವನು. ಆ ತುಂಟು ದನಗಳನ್ನು ಓಡಿಸಿದೆ. ಈ ಕಣ್ಣುಕಾಣದ ಹುಡುಗನ ಗಾಯದ ರಕ್ತ ಒರೆಸಿ ಬ್ಯಾಂಡೇಜ್ ಕಟ್ಟಿ ಸಂತೈಸಿರುವೆ. ಆಪತ್ತಿಗೆ ಆದವನೆ ನೆಂಟ. ಇತರರಿಗೆ ಸಹಾಯ ಮಾಡುವ ದೊಡ್ಡ ಗುಣವಿದೆ. ದೇವರು ನಿನ್ನನ್ನು ಚೆನ್ನಾಗಿಟ್ಟಿರಲಿ" ಎಂದು ಧನ್ಯವಾದ ಹೇಳಿದಳು.

ಏಳು ವರುಷದ ಬಾಲಕಿಯ ಮುಗ್ಧ ಮಾತುಗಳಿಗೆ ಬೆರಗಾದನು. "ಅಬ್ಬಾ! ನೀನೆಷ್ಟು ಜಾಣೆ! ನಿನ್ನ ಹೆತ್ತ ತಂದೆ ತಾಯಿಗಳು ಧನ್ಯರು. ನಿನ್ನ ಗುರುಗಳು ನಿನಗೆ ಒಳ್ಳೆಯ ಶಿಕ್ಷಣ ನೀಡಿದ್ದಾರೆ. ಪರರ ನೋವನ್ನು ತನ್ನ ನೋವೆಂದು ತಿಳಿಯುವ ನಿನ್ನ ಭಾವನೆ ಮೆಚ್ಚುವಂತಹದ್ದು. ನಿನ್ನ ಭವಿಷ್ಯ ಬೆಳಗಲಿ" ಎಂದನು. ಅಷ್ಟರಲ್ಲಿ ಹತ್ತಾರು ಜನ ಸೇರಿದರು. ಈ ಸುದ್ದಿ ಊರ ತುಂಬಾ ಹರಡಿತು. ಸಂಘ ಸಂಸ್ಥೆಗಳು ಸಾರ್ವಜನಿಕರು ಶಾಲೆಗೆ ಬಂದರು. ಅವಳಿಗೆ ಬಹುಮಾನ ನೀಡಿ ಸನ್ಮಾನಿಸಿದರು. ಅವಳ ಸಾಹಸವನ್ನು ಸೂಚನಾ ಫಲಕದ ಮೇಲೆ ಪ್ರಕಟಿಸಿದರು. ಮುಖ್ಯೋಪಾಧ್ಯಾಯರು ಚಿತ್ರ ಸಹಿತ ವಿವರಣೆ ನೀಡಿದರು.

© KTBS NOT TO BE REPUBLISHED

ಜಿಲ್ಲಾಧಿಕಾರಿಗಳು ಶಾಲೆಗೆ ಬಂದು ಮಗುವನ್ನು ಅಭಿನಂದಿಸಿದರು. "ದಯವೇ ಧರ್ಮದ ಮೂಲ" ಎಂದರು. ಅವಳ ಮಾನವೀಯತೆ ಹಾಗೂ ಸಹಾನುಭೂತಿಯನ್ನು ಹೊಗಳಿದರು. ಧೈರ್ಯ ಸಾಹಸಗಳೆ ಗೆಲುವಿನ ಮೆಟ್ಟಿಲು ಎಂದರು. ಅಬ್ದುಲ್ ಹಮೀದನ ಸಾಹಸದ ಕಥೆ ನೆನಪಿಸಿದರು. ಮಕ್ಕಳೆಲ್ಲರೂ ಖುಷಿ ಪಟ್ಟು ಚಪ್ಪಾಳೆ ತಟ್ಟಿದರು. ಎಲ್ಲರಿಗೂ ಸಿಹಿ ಹಂಚಿದರು. ಒಡಿಶಾ ರಾಜ್ಯ ಸರ್ಕಾರದ ಮಕ್ಕಳ ಕಲ್ಯಾಣ ಮಂಡಳಿ ಆಕೆಯನ್ನು ಗೌರವಿಸಿತು. ಅಪ್ರತಿಮ ಸಾಹಸಿಗಳಿಗೆ ಮೀಸಲಾದ "ಗೀತಾ ಛೋಪ್ರ" ಪ್ರಶಸ್ತಿಯನ್ನು ಭಾರತ ಸರ್ಕಾರ ನೀಡಿತು.

ಶಾಲೆಯಲ್ಲಿ ಇವಳ ಹೆಸರು ಮೊನಾಲಿಸಾದೇವಿ. ಇವಳು ಭುವನೇಶ್ವರದವಳು. ಈಕೆಯ ತಂದೆ ದಿಜರಾಜ ಮಲ್ಲಿಕ್. ತಾಯಿ ಶ್ರೀಮತಿ ದಿಜರಾಜಮಲ್ಲಿಕ್. ಜನನ ೨೫-೦೭-೧೯೮೦. ಈ ಘಟನೆಯು ೧೯೮೭ನೆಯ ಜನವರಿ ೧೬ ರಂದು ಜರುಗಿತು. ಆಗ ಅವಳು ಯು.ಜಿ.ಎಂ.ಇ. ಶಾಲೆಯ ಎರಡನೆಯ ತರಗತಿಯ ವಿದ್ಯಾರ್ಥಿನಿ. ಇವಳು ನೃತ್ಯ ಹಾಗೂ ಸಂಗೀತದಲ್ಲಿ ನಿಪುಣೆ. ಭಾರತ-ಜಪಾನ ಮೈತ್ರಿ ಸಂಘದ ವಾರ್ಷಿಕೋತ್ಸವದ ನೃತ್ಯ ಕಾರ್ಯಕ್ರಮದಲ್ಲಿ ಭಾಗವಹಿಸಿದಳು. ಅಮೋಘ ನೃತ್ಯ ಪ್ರದರ್ಶನ ನೀಡಿದಳು. ಅಂದಿನ ಒಡಿಶಾ ರಾಜ್ಯದ ರಾಜ್ಯಪಾಲ ವಿಶ್ವಂಬರನಾಥ ಪಾಂಡೆಯವರಿಂದ ಪುರಸ್ಕಾರ ಪಡೆದಳು. ಆಗ ಇವಳು ನಾಲ್ಕನೆಯ ತರಗತಿ ವಿದ್ಯಾರ್ಥಿನಿ.

ಓದಿ – ತಿಳಿ

ಮೆಲ್ಲನೆ – ನಿಧಾನ, ರೂಢಿ – ಅಭ್ಯಾಸ, ಬಳಕೆ, ಚಿನ್ನಾಟ – ವಿನೋದದ ಆಟ, ಗುದ್ದಾಟ – ಹೊಡೆದಾಟ, ತಿವಿ – ಇರಿ, ಚುಚ್ಚು, ಹಂಗು – ಆಸೆ, ಜೋರು – ವೇಗ, ರಭಸ, ಮುಗ್ಧ – ಸರಳ ಸ್ವಭಾವ, ಹೆದರು – ಭಯಪಡು, ಅಂಚು – ಕೊನೆ, ಒಸರು – ಸೋರು, ಅಂತಃಕರಣ–ದಯೆ, ಅನುಕರಣೀಯ – ಅನುಸರಿಸುವಂಥದ್ದು, ಸಹಾನುಭೂತಿ – ದಯೆ, ಅನುಕಂಪ, ಸಾಹಸ – ಪರಾಕ್ರಮ, ಮೈತ್ರಿ–ಸ್ನೇಹ, ಅಮೋಘ – ಸಾರ್ಥಕವಾದ, ಪುರಸ್ಕಾರ – ಪ್ರಶಸ್ತಿ.

ಗಮನಿಸಿ – ತಿಳಿ

ಗರಸುಭೂಮಿ	: ಗಡಸು ಭೂಮಿ,
ಒಡಿಶಾ	: ಭಾರತದ ರಾಜ್ಯಗಳಲ್ಲಿ ಒಂದು. ಇದರ ಹಿಂದಿನ ಹೆಸರು ಒರಿಸ್ಸಾ. ತುಂಬಾ ಪ್ರಾಚೀನ ಹೆಸರು ಕಳಿಂಗ.
ಡೆಟಾಲ್	: ರೋಗಾಣುಗಳನ್ನು ನಾಶ ಮಾಡುವ ದ್ರವರೂಪದ ಔಷಧಿ.
ಬ್ಯಾಂಡೇಜ್	: ಗಾಯದ ಮೇಲೆ ಕಟ್ಟುವ ಪಟ್ಟಿ.
ಗೀತ ಛೋಪ್ರ ಬಹುಮಾನ	: ಭಾರತ ಸರ್ಕಾರ ನೀಡುವ ಮಕ್ಕಳ ಶೌರ್ಯ ಪ್ರಶಸ್ತಿ.
ರಾಜ್ಯಪಾಲ	: ರಾಜ್ಯದ ಮುಖ್ಯಸ್ಥ.

@ KTBS NOT TO BE REPUBLISHED

ಅಭ್ಯಾಸ

ಅ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿರಿ.

೧. ಮೊನಾಲಿಸಾ ಯಾವ ಶಾಲೆಯಲ್ಲಿ ಓದುತ್ತಿದ್ದಳು?

೨. ದಷ್ಟಪುಷ್ಟ ಹೋರಿಗಳು ಮೇಯುತ್ತ ಏನು ಮಾಡುತ್ತಿದ್ದವು?

೩. ಕುರುಡ ಹುಡುಗ ಏನೆಂದು ಕೂಗಿಕೊಂಡನು?

೪. ಮೊನಾಲಿಸಾ ಹುಡುಗನನ್ನು ಹೇಗೆ ರಕ್ಷಿಸಿದಳು?

೫. ಮುಖ್ಯೋಪಾಧ್ಯಾಯರು ಮೊನಾಲಿಸಾಳ ಸಾಹಸವನ್ನು ಎಲ್ಲಿ ಪ್ರಕಟಿಸಿದರು?

೬. ಜಿಲ್ಲಾಧಿಕಾರಿಗಳು ಯಾರ ಸಾಹಸದ ಕಥೆಯನ್ನು ನೆನಪಿಸಿದರು?

೭. ಭಾರತ ಸರ್ಕಾರ ಮೊನಾಲಿಸಾಗೆ ಯಾವ ಪ್ರಶಸ್ತಿ ನೀಡಿತು?

೮. ಮೊನಾಲಿಸಾ ಯಾವ ವಿಷಯಗಳಲ್ಲಿ ನಿಪುಣೆಯಾದಳು?

ಆ. ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಮೊನಾಲಿಸಾ ಯಾವ ದೃಶ್ಯವನ್ನು ಕಂಡು ಗಾಬರಿಯಾದಳು?

೨. ಕಾರಿನ ಚಾಲಕ ಹುಡುಗನಿಗೆ ಏನು ಚಿಕಿತ್ಸೆ ನೀಡಿದನು?

೩. ಜಿಲ್ಲಾಧಿಕಾರಿ ಮೊನಾಲಿಸಾಳನ್ನು ಅಭಿನಂದಿಸಿ ಹೇಳಿದ ಮಾತುಗಳಾವುವು?

ಇ. ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು?

೧. "ಆಪತ್ತಿಗೆ ಆದವನೆ ನೆಂಟ"

ಯಾರು ಹೇಳಿದರು ______________________________

ಯಾರಿಗೆ ಹೇಳಿದರು ______________________________

೨. "ನಿನ್ನ ಭವಿಷ್ಯ ಬೆಳಗಲಿ"

ಯಾರು ಹೇಳಿದರು ______________________________

ಯಾರಿಗೆ ಹೇಳಿದರು ______________________________

೩. "ಭೇಷ್! ಮಗು! ನಿನ್ನ ಧೈರ್ಯ ಮೆಚ್ಚಿದೆನು"

ಯಾರು ಹೇಳಿದರು ______________________________

ಯಾರಿಗೆ ಹೇಳಿದರು ______________________________

© KTBS NOT TO BE REPUBLISHED

ಈ. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಕುರುಡ ಹುಡುಗ ಅಪಾಯಕ್ಕೆ ಒಳಗಾದ ರೀತಿಯನ್ನು ವಿವರಿಸಿ.

೨. ಕಾರಿನವನು ಮೊನಾಲಿಸಳನ್ನು ಕುರಿತು ಆಡಿದ ಒಳ್ಳೆಯ ಮಾತುಗಳನ್ನು ವಿವರಿಸಿ.

ಉ. ಕೆಳಗಿನ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರ ನೀಡಿದೆ. ಅವುಗಳಲ್ಲಿ ಅತಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.

೧. ಒಡಿಶಾ ರಾಜ್ಯದಲ್ಲಿ ಈ ನಗರ ಉಂಟು. ____________________

ಅ) ದೇಶಬಂಧು ಆ) ಗೋಪಬಂಧು ಇ) ವಿಶ್ವಬಂಧು ಈ) ಬೋಪಬಂಧು

೨. ಮೊನಾಲಿಸಾ ಕುರುಡ ಹುಡುಗನ ಕೈ ಹಿಡಿದು ____________________ ಎಳೆದು ರಸ್ತೆಯ ಅಂಚಿಗೆ ತಂದಳು.

ಅ) ದರದರನೆ ಆ) ಬರಬರನೆ ಇ) ದಡಬಡನೆ ಈ) ಥರಥರನೆ

೩. ದೇವರು ನಿನ್ನನ್ನು ____________________ ಎಂದು ಧನ್ಯವಾದ ಹೇಳಿದಳು.

ಅ) ಒಳ್ಳೆಯದಾಗಲಿ ಆ) ಚೆನ್ನಾಗಿಟ್ಟಿರಲಿ ಇ) ಕಾಪಾಡಲಿ ಈ) ರಕ್ಷಿಸಲಿ

೪. ಮೊನಾಲಿಸಾ ತಂದೆಯ ಹೆಸರು ____________________

ಅ) ದಿಜರಾಜ ಮಲ್ಲಿಕ್ ಆ) ದೇವರಾಜ ಮಲ್ಲಿಕ್
ಇ) ಶೋಭ ಮಲ್ಲಿಕ್ ಈ) ದಿನೇಶ ಮಲ್ಲಿಕ್

ಊ. ಅ ಪಟ್ಟಿಯ ಪದಗಳಿಗೆ ಬ ಪಟ್ಟಿಯ ಸರಿಯಾದ ಪದಗಳನ್ನು ಹೊಂದಿಸಿ ಬರೆಯಿರಿ.

	ಅ		ಬ	
೧.	ಭಾರತ–ಜಪಾನ	–	ಭುವನೇಶ್ವರ	____________
೨.	ದಯವೇ	–	ಗೆಲುವಿನ ಮೆಟ್ಟಿಲು	____________
೩.	ಮೊನಾಲಿಸಾ	–	ಮೈತ್ರಿ ಸಂಘ	____________
೪.	ಧೈರ್ಯ ಸಾಹಸ	–	ಧರ್ಮದ ಮೂಲ	____________

ಋ. ಕೆಳಗಿನ ಪ್ರಶ್ನೆಗಳಿಗೆ ಸೂಕ್ತ ಪದಗಳನ್ನು ಆರಿಸಿ ಬರೆಯಿರಿ.

೧. 'ಸಹಾನುಭೂತಿ' ಪದದ ಅರ್ಥ ____________

ಅ) ಅನುಕಂಪ ಆ) ಪ್ರೀತಿ ಇ) ಸ್ನೇಹ ಈ) ಸಹಕಾರ

© KTBS NOT TO BE REPUBLISHED

೨. ರವಿಯ ಗಾಯಕ್ಕೆ **ಬ್ಯಾಂಡೇಜ್** ಕಟ್ಟಲಾಯಿತು. ಗೆರೆ ಎಳೆದ ಪದವು

ಅ) ಅನ್ಯ ದೇಶಿ ಪದ ಆ) ನುಡಿಗಟ್ಟು

ಇ) ದೇಶಿಯ ಪದ ಈ) ಜೋಡಿಪದ

೩. 'ಮೆಲ್ಲನೆ' ಪದದ ವಿರುದ್ಧ ಪದ ______________

ಅ) ನಿಧಾನ ಆ) ಜೋರು ಇ) ಆತುರ ಈ) ಶೀಘ್ರ

೪. ರೂಢಿ, ಅಭ್ಯಾಸ, ಬಳಕೆ, ಕ್ರಮ ಇವುಗಳಲ್ಲಿ ಗುಂಪಿಗೆ ಸೇರದ ಪದ ______

ಅ) ರೂಢಿ ಆ) ಅಭ್ಯಾಸ ಇ) ಬಳಕೆ ಈ) ಕ್ರಮ

ಅಭ್ಯಾಸ ಚಟುವಟಿಕೆ

೧) ಈ ಪಾಠವನ್ನು ನಾಟಕ ಮಾಡಿ ಅಭಿನಯಿಸಿರಿ.

೨) ಈ ಗದ್ಯಪಾಠದಲ್ಲಿ ಬಂದಿರುವ ಮಾನವೀಯತೆಗೆ ಸಂಬಂಧಿಸಿದ ಪದಗಳನ್ನು ಪಟ್ಟಿ ಮಾಡಿರಿ.

ಪ್ರೀತಿ, ಅಂತಃಕರಣ __________ __________ __________ __________

__________ __________ __________ __________ __________

೩) ಶೌರ್ಯ ಪ್ರಶಸ್ತಿ ಪಡೆದ ನಾಲ್ಕು ಮಕ್ಕಳ ಹೆಸರು ಬರೆದು, ಅವರು ಮಾಡಿದ ಸಾಹಸವನ್ನು ಬರೆಯಿರಿ.

ಕ್ರಮ ಸಂಖ್ಯೆ	ಹೆಸರು	ರಾಜ್ಯ	ಮಾಡಿದ ಸಾಹಸ
೧			
೨			
೩			
೪			

© KTBS NOT TO BE REPUBLISHED

ಭಾಷಾಭ್ಯಾಸ

ಅ. ಈ ಅರ್ಥಗಳಿಗೆ ಒಂದೇ ಪದ ಬರೆಯಿರಿ.

ವಿನೋದ ಆಟ : ______________________

ಇನ್ನೊಬ್ಬರಿಗೆ ತೋರಿಸುವ ದಯೆ : ______________________

ಗೌರವವನ್ನು ನೀಡು : ______________________

ಸರಳ ಸ್ವಭಾವ ಇರುವವ	:	____________________
ಸಾಂತ್ವನ ನೀಡು	:	____________________

ಆ. ಇಂತಹ ಪದಗಳ ಪಟ್ಟಿ ಮಾಡಿರಿ.

ಮಾದರಿ : ಹಾವಿನ ಸಿಟ್ಟಿನ ಧ್ವನಿ – ಭುಸ್‌ಬುಸ್

೧) ಮನುಷ್ಯ ಕೋಪ ಬಂದಾಗ – ಮುಸ್ ಮುಸ್

೨) ಪಕ್ಷಿಗಳು ಹಾವು ನೋಡಿ ಭಯಬಿದ್ದಾಗ – ಚಿಂವ್ ಚಿಂವ್ (ಆಕ್ರಂದನ.)

೩) ಸಿಂಹಕ್ಕೆ ಕೋಪ ಬಂದಾಗ – ಗರ್ಜನೆ.

೪) ನಾಯಿಗೆ ಕೋಪ ಬಂದಾಗ – ಬೌ ಬೌ

೫) ಆನೆಗೆ ಕೋಪ ಬಂದಾಗ – ಘೀಳಿಡುತ್ತದೆ.

೬) ಮಕ್ಕಳಿಗೆ ಖುಷಿಯಾದಾಗ – ಹೋ.. (ಎಂದು ಕೂಗುತ್ತಾರೆ.)

ಇ. ವ್ಯಾಕರಣಾಂಶ : ಇವುಗಳನ್ನು ಗಮನಿಸಿ ಓದಿರಿ.

ಕೈ	+	ಆಡಿಸು	=	ಕೈಯಾಡಿಸು	ಹೊಲ	+	ಅನ್ನು	=	ಹೊಲವನ್ನು
ಧ್ವನಿ	+	ಅತ್ತ	=	ಧ್ವನಿಯತ್ತ	ಕುಲ	+	ಅನ್ನು	=	ಕುಲವನ್ನು
ಕೈ	+	ಎತ್ತು	=	ಕೈಯೆತ್ತು	ಮನ	+	ಅನ್ನು	=	ಮನವನ್ನು
ಗಿರಿ	+	ಅನ್ನು	=	ಗಿರಿಯನ್ನು	ಮಧು	+	ಅನ್ನು	=	ಮಧುವನ್ನು
ಮೈ	+	ಅನ್ನು	=	ಮೈಯನ್ನು	ಹೂ	+	ಇಂದ	=	ಹೂವಿಂದ

ಇಲ್ಲಿ ಸಂಧಿಯಾಗುವಾಗ ಯ ಮತ್ತು ವ ಅಕ್ಷರ ಬಂದಿದೆ ಎಂಬುದನ್ನು ಗಮನಿಸಿರಿ ಇದನ್ನು **ಆಗಮ ಸಂಧಿ** ಎನ್ನುತ್ತಾರೆ.

ಈ. ಲೇಖನ ಚಿಹ್ನೆಗಳು :

. ಪೂರ್ಣವಿರಾಮ ಚಿಹ್ನೆ

, ಅರ್ಧವಿರಾಮ ಚಿಹ್ನೆ

; ಅಲ್ಪವಿರಾಮ ಚಿಹ್ನೆ

? ಪ್ರಶ್ನಾರ್ಥಕ ಚಿಹ್ನೆ

! ಭಾವಸೂಚಕ ಚಿಹ್ನೆ

“ ” ಉದ್ಧರಣ ಚಿಹ್ನೆ

© KTBS NOT TO BE REPUBLISHED

ವಾಕ್ಯಗಳನ್ನು ಅರ್ಥವಾಗುವಂತೆ ಓದಬೇಕಾದರೆ, ಬರೆಯಬೇಕಾದರೆ ಲೇಖನ ಚಿಹ್ನೆಗಳನ್ನು ಬಳಸಬೇಕು.

ಉದಾ :–

೧) ಮೊನಾಲಿಸಾ ಮನೆಗೆ ಹೊರಟಳು.

೨) ರಸ್ತೆ ಬದಿಯಲ್ಲಿ, ಎರಡು ದಷ್ಟಪುಷ್ಟ ಹೋರಿಗಳು ಹುಲ್ಲು ಮೇಯುತ್ತಿದ್ದವು.

೩) ಅವು ಮಗುವನ್ನು ತಿವಿಯಲು ; ಕೊಲ್ಲಲು ಓಡೋಡಿ ಬಂದವು.

೪) ಏನಿದು? ಎಂದು ಕಣ್ಣರಳಿಸಿ ನೋಡಿದಳು.


೫) ಅಯ್ಯೋ ! ಮಗುವನ್ನು ದನಗಳು ಕೊಲ್ಲುತ್ತಿವೆ.

೬) ಜಿಲ್ಲಾಧಿಕಾರಿಗಳು “ಇನ್ನೊಬ್ಬರಿಗೆ ಸಹಾಯ ಮಾಡಬೇಕು” ಎಂದರು,

ಭಾಷಾ ಚಟುವಟಿಕೆ

ಮಾವಿನ ಮರವೆ

ಮಾವಿನ ಮರವೆ ಮಾವಿನ ಮರವೆ
ಮಣ್ಣಲಿ ಬೆಳೆದು ಮಾಡುವೆ ಏನು ?
ಮಗುವೆ ಕೇಳು ಹೇಳುವೆ ನಾನು
ಬೆಳೆಯುತ ನಾನು ನೆರಳನು ಕೊಡುವೆನು!



ಮಾವಿನ ಮರವೆ ಮಾವಿನ ಮರವೆ
ನೆರಳನು ನೀನು ಕೊಡುವುದು ಏಕೆ ?
ಬಿಸಿಲಿನ ಝಳಕೆ ಜನ–ದನ ದಣಿವರು
ನೆರಳಲಿ ಕುಳಿತು ವಿರಾಮ ಪಡೆವರು!

ಮಾವಿನ ಮರವೆ ಮಾವಿನ ಮರವೆ
ಹಕ್ಕಿಗಳೇಕೆ ನಿನ್ನ ಬಳಿ ಬರುವವು ?
ಹಕ್ಕಿ–ಪಕ್ಷಿಗಳು ಗೂಡನು ಕಟ್ಟುವವು
ತತ್ತಿಯ ಇಟ್ಟು ಕಾವನು ಕೊಡುವವು!

© KTBS NOT TO BE REPUBLISHED

ಮಾವಿನ ಮರವೆ ಮಾವಿನ ಮರವೆ
ಕಾಯಿ-ಹಣ್ಣು ಏಕೆ ಬಿಡುವೆ?
ಉಪ್ಪಿನಕಾಯಿಗೆ ನಾನು ಬೇಕೇ ಬೇಕು
ಊಟದ ಜೊತೆಗೆ ಹೋಳೊಂದು ಸಾಕು!

ಮಾವಿನ ಮರವೆ ಮಾವಿನ ಮರವೆ
ಕಾಯಿ-ಹಣ್ಣಿನೊಳಗೆ ಓಟೆಯು ಏಕೆ?
ಮಾವಿನ ಓಟೆ ನಿಮಗಾಡಲು ಆಟ
ಮಾವಿನ ಮರಕೆ ಮತ್ತದು ಬೀಜ!

ಮಾವಿನ ಮರವೆ ಮಾವಿನ ಮರವೆ
ನಿನ್ನ ಬದುಕಿನ ಪರಿ ಬಲು ಉಪಕಾರಿಯು !
ತಿಳಿಯಿತೆ ಮಗುವೆ ನನ್ನಯ ಕಥೆಯು
ಬದುಕಿನ ನೀತಿಯು ಹೀಗೆಯೇ ಇರಲಿ

-ಚಂದ್ರಕಾಂತ ಕರದಳ್ಳಿ

@ KTBS
NOT TO BE REPUBLISHED

ಆಟವಾಡಿರಿ :

ಕೆಲವರು ಮಾವಿನ ಮರಕ್ಕೆ ಪ್ರಶ್ನೆ ಕೇಳಿರಿ.
ಕೆಲವರು ಮಾವಿನ ಮರವಾಗಿ ಉತ್ತರಿಸಿ
ಇನ್ನೂ ಕೆಲವರು ಬೋರ್ಡಿನ ಮೇಲೆ ಅವರು ಹೇಳಿದ ಉತ್ತರ ಬರೆಯಿರಿ.


✤ ✤ ✤


ಪಾಠ – ೩

ಮಲ್ಲಕಂಬ

ಪ್ರವೇಶ :

ಆಟವೆಂದರೆ ಮಕ್ಕಳಿಂದ ಹಿಡಿದು ಮುದುಕರವರೆಗೂ ಬಹಳ ಇಷ್ಟ. ನಮ್ಮ ದೇಶದಲ್ಲಿ ಅನೇಕ ಗ್ರಾಮೀಣ ಆಟಗಳಿವೆ. ಕೆಲವು ಆಟಗಳು ಬಹಳ ಪ್ರಸಿದ್ಧಿ ಪಡೆದು ಜಗತ್ತಿನ ಎಲ್ಲ ಕಡೆಗೂ ಹಬ್ಬಿವೆ. ಅದರಲ್ಲಿ ಮುಖ್ಯವಾದವು ಎಂದರೆ ಚದುರಂಗ (ಚೆಸ್) ಕಬಡ್ಡಿ, ಚಿಲ್ಲಿನ ಜಾಣ್ಮೆ ಹಾಗೂ ಕುಸ್ತಿ ಪಂದ್ಯಗಳು. ಕುಸ್ತಿಗೆ ಪೂರಕವಾದ ಪಂದ್ಯವೇ ಮಲ್ಲಕಂಬ ಅಥವಾ ಮಲ್ಲಗಂಬ. ಕುಸ್ತಿ ಆಡುವವನು ತಾನು ಹಾಕುವ ಪಟ್ಟುಗಳನ್ನು ಮಲ್ಲಗಂಬಕ್ಕೆ ಹಾಕಿ ಕಲಿಯುತ್ತಾನೆ. ಮಹಾರಾಷ್ಟ್ರ ಮತ್ತು ಕರ್ನಾಟಕದಲ್ಲಿ ಮಲ್ಲಕಂಬದ ಆಟ ಪ್ರಸಿದ್ಧ. ಬೆಳಗಾವಿ, ಬಳ್ಳಾರಿ, ಕೊಪ್ಪಳ, ವಿಜಾಪುರ, ಮೈಸೂರು ಜಿಲ್ಲೆಗಳ ಗರಡಿಮನೆಗಳಲ್ಲಿ ಮಲ್ಲಗಂಬದ ಆಟವೇರ್ಪಡಿಸುತ್ತಾರೆ.





@ KTBS NOT TO BE REPUBLISHED

(ರಾಜ್ಯೋತ್ಸವ ಸಂದರ್ಭದ ಮೆರವಣಿಗೆಯಲ್ಲಿ ಮಲ್ಲಕಂಬದ ಮೇಲೆ ಕಸರತ್ತು ನಡೆಯುತ್ತಾ ಇದೆ. ಸಾವಿರಾರು ಜನ ನೋಡುತ್ತಿದ್ದಾರೆ. ಒಂದು ಎತ್ತಿನಗಾಡಿ. ಅದರ ಮೇಲೆ ಮಣೆಮೇಲಿಟ್ಟ ಮಲ್ಲಕಂಬ. ಅದರ ಮೇಲೆ ಜಟ್ಟಿಯಾಳುಗಳು. ಹುಡುಗರು ವಿವಿಧ ಕಸರತ್ತು, ಸಾಹಸ ಮೆರೆಸುತ್ತಿದ್ದಾರೆ. ಸಾವಿರಾರು ಜನ ಅಚ್ಚರಿಯಿಂದ ನೋಡುತ್ತಿದ್ದಾರೆ)

ಇಬ್ರಾಹಿಂ : ದೇಖೋ ಭೈಯ್ಯಾ ಅವಾ ಹ್ಯಾಂಗ ಹತ್ತ್ಯಾನ ನೋಡು. ಅಬ್ಬಬ್ಬ ಕಂಬದ ತುದಿ ಮುಟ್ಟತಾನಂದ್ರ ಪಸಕ್ಕನೆ ಜಾರಿಬಿಟ್ಟ, ಬಿದ್ದ.. ಬಿದ್ದ.. ನೋಡು.

ಪೀಟರ್ : ಏ.. ಇಬ್ರಾಹಿಂ ಆ ತೇಗಿನ ಕಂಬ ಏಕದಂ ಸಾಪ ಐತಿ. ಅದರ ಮ್ಯಾಲ ಔಡಲೆಣ್ಣಿ ತೆಳ್ಳಗ ಸವರ್‍ಯಾರ. ಕೈಯಿಟ್ರ ಜಾರತೈತಿ. ಅದಕ ಹಂಗ ಜಾರತಾರ. ಹತ್ತಾರ... ಬೀಳ್ತಾರ. ಅಲ್ನೋಡು, ಮತ್ತೆ ಹತ್ತಿದ, ಭಾರಿ ಆಟಪಾ ಇದು. ಅಲಲಾ ಏನ ಕಸರತ್ತಿದು. ಈ ಆಟಕ್ಕ ಏನಂತಾರ ಸೂಡಿ ಶಂಕರ.

ಸೂಡಿಶಂಕರ : ಇದಕ್ಕ ಮಲ್ಲಕಂಬದ ಆಟ ಅಂತಾರ. ಇದು ಒಂದು ಕಸರತ್ತು. ಕುಸ್ತಿ ಆಡೋರು ಇದರ ಮ್ಯಾಲೆ ತಯಾರಿ ಮಾಡ್ತಾರ.

ಇಬ್ರಾಹಿಂ : ಹಂಗಂದರೇನು ? ಈ ಮಲ್ಲಕಂಬದ ಮೇಲಿನ ಕಸರತ್ತು ಎದಕ ಉಪಯೋಗ ?

ಸೂಡಿಶಂಕರ : ಕುಸ್ತಿ ಆಡೋರ್ಗೆ, ಕುಸ್ತಿ ಆಡುವಾಗ ಬೇಕಾದ ಪಟ್ಟುಗಳನ್ನು ಇಂತಹ ಕಂಬದ ಮ್ಯಾಲ ಅಭ್ಯಾಸ ಮಾಡ್ತಾರ. ಎದುರಾಳಿನ ಸೋಲಸಾಕ ತಂತ್ರ ಇಲ್ಲೇ ಕಲಿತಾರ. ಕುಸ್ತಿ ಆಡೋದು ನೀನು.... ನೋಡಿರಬೇಕಲ್ಲ? ಪೀಟರ. ಮೈಸೂರು ದಸರಾದಾಗ, ಬೆಳಗಾವ್ಯಾಗ, ಕೊಪ್ಪಳದಾಗ, ಹೊಸಪೇಟ್ಯಾಗ, ಧಾರವಾಡದಾಗ, ಗದಗಿನ್ಯಾಗ ಭಾಳ ಆಡ್ತಾರ.

ಪೀಟರ್ : ಇದು ಭಾಳ ಹಿಂದಿನ ಆಟ ಕಾಣ್ತದ. ಗೊತ್ತಿದ್ರ ಹೇಳಲ್ಲ.

ಸೂಡಿ ಶಂಕರ : ಹಿಂದಕ ಭೀಮ, ಜರಾಸಂಧ, ಹನುಮಂತ, ವಾಲಿ, ಸುಗ್ರೀವರು ಆಡ್ತಿದ್ರಂತ. ಇದು ಪುರಾಣ ಕಾಲದಿಂದ ನಡೆದು ಬಂದೈತಿ.

ಇಬ್ರಾಹಿಂ : ಇತಿಹಾಸ ಕಾಲದ್ದು ಹೇಳಲ್ಲ ?

ಸೂಡಿಶಂಕರ : ಹೈದರಾಬಾದ್ ನಿಜಾಮನ ಆಸ್ಥಾನದಾಗ ಅಲಿ ಮತ್ತು ಗುಲ್ ಎಂಬ ಕುಸ್ತಿಪಟುಗಳು ಇದ್ರಂತ. ಅವರು ಪುಣೆಯ ಬಾಳಾಜಿ ಪೇಶ್ವೆ ದರ್ಬಾರಿಗೆ ಬಂದರಂತೆ. "ನಿಮ್ಮ ರಾಜ್ಯದ ಮಲ್ಲರು ನಮ್ಮನ್ನ ಕುಸ್ತಿಯಲ್ಲಿ ಸೋಲಿಸಬೇಕು. ಇಲ್ಲದೇ ಹೋದರೆ ನಮ್ಮನ್ನು ಕುಸ್ತಿಯಲ್ಲಿ ಸೋಲಿಸುವಂತಹ ಮಲ್ಲರು ಇಲ್ಲವೆಂದು ಪ್ರಶಸ್ತಿ ಪತ್ರ ನೀಡಬೇಕು" ಎಂದು ಸವಾಲು ಹಾಕಿದರಂತೆ.

ಪೀಟರ್ : ಭಾಳ ಛಂದೈತಿ. ಮುಂದೇನಾತು ?

ಸೂಡಿಶಂಕರ : ಕೇಳ್ರಿ. ಆಗ ಅಲ್ಲಿದ್ದ ಹದಿನೆಂಟು ವರುಷದ ಹುಡುಗ ಬಾಳಂಭಟ್ಟ ಎದ್ದು ನಿಂತು, ಅವರ ಸವಾಲು ಒಪ್ಪಿಕೊಂಡನಂತ. ಕುಸ್ತಿ ತಯಾರಿಗಾಗಿ ಒಂದು ತಿಂಗಳು ಅವಧಿ ಪಡದ್ನಂತ.

ಪೀಟರ್ : ಹಂಗಾ..

ಸೂಡಿಶಂಕರ : ಆ ಹುಡುಗ ನಾಸಿಕ ಜಿಲ್ಲೆಯ ದಟ್ಟ ಅರಣ್ಯದಲ್ಲಿದ್ದ ಸಪ್ತಗಿರಿದೇವಿಯ ಗುಡಿಗೆ ಹೋದ. ಗುಡಿಯ ಮುಂದಿನ ದೀಪದ ಕಂಬದ ಮೇಲೆ ಕೋತಿ ಕಸರತ್ತು ಮಾಡುತ್ತಿತ್ತು ಅದನ್ನು ನೋಡಿದ. ಅದೇ ರೀತಿ ಶಕ್ತಿ ನೀಡು ಎಂದು ದೇವಿಗೆ ಪ್ರಾರ್ಥಿಸಿದ. ದಿನವೂ ಮಂಗನಂತೆ ಆ ದೀಪದ ಕಂಬದ ಮೇಲೆ ಕಸರತ್ತು ಮಾಡುತ್ತಿದ್ದನು. ಕುಸ್ತಿ ಪಟ್ಟುಗಳನ್ನು ಕಲಿಯುತ್ತಿದ್ದನು. ಅದರ ಜೊತೆಗೆ ಯೋಗವನ್ನೂ ಮಾಡಿದ. ಆ ಕಪಿಯು ಅವನು ಮಾಡುತ್ತಿದ್ದ ಅಭ್ಯಾಸವನ್ನು ನೋಡುತ್ತಿತ್ತು. ತಪ್ಪು ಮಾಡಿದಾಗ ಮಾಡಿ ತೋರಿಸುತ್ತಿತ್ತು. ಈ ಅಭ್ಯಾಸವು ಫಲ ನೀಡಿತು. ದೇವರ ಆಶೀರ್ವಾದ ಪಡೆದು ಆಸ್ಥಾನಕ್ಕೆ ಹೋದನು. ನಿಜಾಮ ರಾಜ್ಯದ ಜಟ್ಟಿಗಳನ್ನು ಸೋಲಿಸಿದ.

@ KTBS NOT TO BE REPUBLISHED

ಇಬ್ರಾಹಿಂ : ಈ ಕಥಿ ಭಯಂಕರ ಛಂದೈತಿ ಬಿಡು.

ಪೀಟರ್ : ಈ ಮಲ್ಲಕಂಬ ವ್ಯಾಯಾಮವನ್ನು ನಮ್ಮ ಶಾಲೆಯಲ್ಲಿ ಯಾಕ ಕಲಿಸಬಾರದು?

ಇಬ್ರಾಹಿಂ : ಹೆಡ್ಮಾಸ್ತರರಿಗೆ ಹೇಳೋಣ. ನಾವು ಕಲಿಯೋಣ ಬಾ.

ಓದಿ– ತಿಳಿ

ಜಟ್ಟಿ–ಕುಸ್ತಿಪಟು, ಅಚ್ಚರಿ–ಆಶ್ಚರ್ಯ, ಬೆರಗು. ಹಂಗಾ – ಹಾಗಾಯ್ತೇನು? ಪ್ರಾರ್ಥಿಸು–ಬೇಡು, ಪಟ್ಟು–ತಂತ್ರ, ಕುಸ್ತಿ ಆಡುವಾಗ ಉಪಯೋಗಿಸುವ ವಿವಿಧ ತಂತ್ರ, ವರಸೆ, ಅಡವು (ದ.ಕ) ಆಸ್ಥಾನ–ರಾಜಸಭೆ, ದರ್ಬಾರು.

ಗಮನಿಸಿ –ತಿಳಿ

ಮಲ್ಲಕಂಬ – ಕೆಲವು ಕಡೆ ಇದನ್ನು ಮಲ್ಲಗಂಬ ಎಂದು ಹೇಳುತ್ತಾರೆ. ಈ ಕಂಬವನ್ನು ತೇಗದ ಕಟ್ಟಿಗೆಯಿಂದ ಮಾಡುತ್ತಾರೆ. ಇದರ ಎತ್ತರ ಅಜಮಾಸು ೩ ೧/೨ ಮೀಟರ್ ಅಥವಾ ೧೦–೧೧ ಮೊಳ. ತಳಭಾಗದಲ್ಲಿ ಕಂಬದ ಸುತ್ತಳತೆ ಅಂದಾಜು ೫೦–೬೦ ಸೆಂಟಿಮೀಟರ್ ಕಂಬ ಮೇಲೆ ಬಂದಂತೆಲ್ಲಾ ಸಣ್ಣಗಾಗುತ್ತದೆ. ಇದರ ಮೇಲ್ಮೈ ಬಹಳ ಸಾಫ್ (ನುಣುಪು) ಇರುತ್ತದೆ. ಮೇಲೆ ಔಡಲೆಣ್ಣೆ ಸವರಿರುತ್ತಾರೆ. ಇವು ಸ್ಥಿರ ಮಲ್ಲಕಂಬ, ಮಣಿಯ ಮೇಲಿಟ್ಟ ಮಲ್ಲಕಂಬ, ಹಗ್ಗದ ಮಲ್ಲಕಂಬ ಮೊದಲಾದ ರೀತಿಯಲ್ಲಿ ಇರುತ್ತವೆ. ಮಲ್ಲಗಂಬ ಮಾನವ ಜನಾಂಗಕ್ಕೆ ಹನುಮಂತನ ಕೊಡುಗೆ ಎನ್ನುತ್ತಾರೆ.

ದೇಖೋ ಭೈಯ್ಯಾ – ನೋಡಣ್ಣ, ಭೀಮ – ಧರ್ಮರಾಜನ ತಮ್ಮ,

ಔಡಲೆಣ್ಣೆ – ಹರಳೆಣ್ಣೆ, ಕೈಯೆಣ್ಣೆ

ಜರಾಸಂಧ – ಮಗಧ ರಾಜ್ಯದ, ರಾಜ ಮಹಾಭಾರತ ಕಾಲದಲ್ಲಿದ್ದ ಶಕ್ತಿಮಾನ ವ್ಯಕ್ತಿ.

ಹನುಮಂತ – ಶಕ್ತಿಪುರುಷ, ರಾಮನ ಭಕ್ತ. ವಾಲಿ–ಸುಗ್ರೀವರು : ರಾಮಾಯಣ ಕಾಲದಲ್ಲಿ ಕಿಷ್ಕಿಂಧೆ ರಾಜ್ಯದಲ್ಲಿದ್ದ ಅಣ್ಣತಮ್ಮಂದಿರು, ಇವರು ಬಹಳ ಶೂರರು. ಅಬ್ಬಬ್ಬ : ಅಬ್ಬಾ ಎಂಬುದು ಅಚ್ಚರಿ ಪದ.

ಭಯಂಕರ ಛಂದೈತಿ : ಬಹಳಷ್ಟು ಚಂದವಿದೆ. ಉತ್ತರ ಕರ್ನಾಟಕದಲ್ಲಿ ಭಯಂಕರ ಪದವನ್ನು ಬಹಳಷ್ಟು ಎಂಬರ್ಥದಲ್ಲಿ ಉಪಯೋಗಿಸುತ್ತಾರೆ, ಹೆಡ್ಮಾಸ್ತರ – ಮುಖ್ಯೋಪಾಧ್ಯಾಯ ದಾದಾ ದೇವಧರ (೧೭೫೫–೧೮೫೨) ಇವರು ತಮ್ಮ ಹದಿನಾರನೆಯ ವಯಸ್ಸಿನಲ್ಲಿ ಪುಣೆಗೆ ಬಂದು ಅಲ್ಲಿ ಹಲವು ಮಲ್ಲರನ್ನು ಸೋಲಿಸಿ ರಾಜಾಶ್ರಯ ಪಡೆದಿದ್ದರು. ಇವರು ವೇದ ಹಾಗೂ ಯೋಗದಲ್ಲಿ ಪಂಡಿತರು. ಇವರು ರಾಜಗುರು ಸ್ಥಾನ ಹೊಂದಿದ್ದರು. ಇವರು ಮಹಾರಾಷ್ಟ್ರದಲ್ಲಿ ಮಲ್ಲಕಂಬ ಪ್ರಚುರಪಡಿಸಿದರು.

@KTBS NOT TO BE REPUBLISHED

ಅಭ್ಯಾಸ

ಅ. ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ಕಂಬದ ಮೇಲಿನ ಕಸರತ್ತು ಎಲ್ಲಿ ನಡೆಯುತ್ತಿತ್ತು?

೨. ಮಲ್ಲಕಂಬದ ಮೇಲೆ ಹತ್ತಿದವರು ಏಕೆ ಜಾರುತ್ತಿದ್ದರು?

೩. ಮಲ್ಲಕಂಬದ ಅಭ್ಯಾಸ ಏಕೆ ಮಾಡುತ್ತಾರೆ?

೪. ಹಿಂದೆ ಮಲ್ಲಕಂಬದ ಮೇಲೆ ಯಾರು ವ್ಯಾಯಾಮ ಮಾಡಿದ್ದರು?

೫. ಪೇಶ್ವೆ ಅವರ ದರ್ಬಾರಿಗೆ ಬಂದ ಕುಸ್ತಿಪಟುಗಳು ಯಾರು?

೬. ಕುಸ್ತಿ ಸವಾಲನ್ನು ಯಾರು ಒಪ್ಪಿಕೊಂಡರು?

೭. ಬಾಳಂಭಟ್ಟನು ಕುಸ್ತಿಪಟ್ಟುಗಳನ್ನು ಕಲಿಯಲು ಎಲ್ಲಿ ಹೋದನು?

ಆ. ಈ ಕೆಳಗಿನ ಪ್ರಶ್ನೆಗಳಿಗೆ ೩-೪ ವಾಕ್ಯಗಳಲ್ಲಿ ಉತ್ತರಿಸಿರಿ.

೧. ಸಾವಿರಾರು ಜನರು ಅಚ್ಚರಿಯಿಂದ ಏನನ್ನು ನೋಡುತ್ತಿದ್ದರು? ವಿವರಿಸಿ.

೨. ಇಬ್ರಾಹಿಂ ಮಲ್ಲಕಂಬದ ಮೇಲಿನ ಕಸರತ್ತನ್ನು ನೋಡಿ ಹೇಳಿದ್ದೇನು? ಅವನ ಮಾತಿನಲ್ಲಿಯೇ ಹೇಳಿರಿ.

೩. ಅಲಿ ಮತ್ತು ಗುಲ್ ಏನೆಂದು ಸವಾಲು ಹಾಕಿದರು?

೪. ಬಾಳಂಭಟ್ಟನು ಯಾವ ರೀತಿಯಲ್ಲಿ ಕಸರತ್ತು ಮಾಡಿದನು? ಅವನಿಗೆ ಸಹಾಯ ಮಾಡಿದವರು ಯಾರು? ವಿವರಿಸಿ.

ಇ. ಈ ಕೆಳಗಿನ ಮಾತುಗಳನ್ನು ಯಾರು? ಯಾರಿಗೆ? ಯಾವಾಗ? ಹೇಳಿದರು?

೧. 'ಕಂಬದ ತುದಿ ಮುಟ್ಟುತಾನಂದ್ರ ಪಸಕ್ಕನೆ ಜಾರಿಬಿಟ್ಟ'

೨. 'ಔಡಲೆಣ್ಣಿ ತೆಳ್ಳಗ ಸವರ್‍ಯಾರ ಕೈಯಿಟ್ಟರ ಜಾರತೈತಿ'

೩. 'ತಪ್ಪು ಮಾಡಿದಾಗ ಮಾಡಿ ತೋರಿಸುತ್ತಿತ್ತು'

ಈ. ಕೆಳಗೆ ನೀಡಿದ ನಾಲ್ಕು ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬಿಟ್ಟ ಸ್ಥಳ ತುಂಬಿರಿ.

೧. ಮಲ್ಲಕಂಬ ಈ ಮಣೆಯ ಮೇಲಿಟ್ಟಿದ್ದರು__________

ಅ) ಲಾರಿ ಬ) ಬಸ್ಸು ಕ) ಎತ್ತಿನಗಾಡಿ ಡ) ರೈಲುಗಾಡಿ.

೨. ಮಲ್ಲಕಂಬಕ್ಕೆ ಸವರಿದ ಎಣ್ಣೆ __________

ಅ) ಎಳ್ಳಿನ ಆ) ಔಡಲ ಇ) ಶೇಂಗಾದ ಈ) ಬೇವಿನ

© KTBS NOT TO BE REPUBLISHED

೩. ಮಲ್ಲಕಂಬದ ಮೇಲೆ ಕುಸ್ತಿ ಆಡುವಾಗ ಬೇಕಾದ ______________ ಗಳನ್ನು ಅಭ್ಯಾಸ ಮಾಡುತ್ತಾರೆ.

ಅ) ಪಟ್ಟು ಆ) ಮಟ್ಟು ಇ) ಪೇಚು ಈ) ರೀತಿ

೪. ಅಲಿ ಮತ್ತು ಗುಲ್ ಕುಸ್ತಿ ಪಟುಗಳು ಬಾಳಾಜಿ ಪೇಶ್ವೆಯ ____________ ಈ ಸ್ಥಳಕ್ಕೆ ಬಂದರು.

ಅ) ಅರಮನೆಗೆ ಆ) ರಾಜ್ಯಕ್ಕೆ ಇ) ಮನೆಗೆ ಈ) ದರ್ಬಾರಿಗೆ

೫. ಹುಡುಗ ಈ ____________ ಜಿಲ್ಲೆಯ ಸಪ್ತಗಿರಿ ದೇವಿಯ ಗುಡಿಗೆ ಹೋದನು.

ಅ) ಭೀಡ್ ಆ) ಅಹಮದನಗರ ಇ) ಪುಣೆ ಈ) ನಾಸಿಕ

ಊ. 'ಅ' ಪಟ್ಟಿಯ ಪದಗಳಿಗೆ 'ಬ' ಪಟ್ಟಿಯ ಸರಿಯಾದ ಪದಗಳನ್ನು ಹೊಂದಿಸಿ ಬರೆಯಿರಿ.

ಅ		ಬ	
೧. ರಾಜ್ಯೋತ್ಸವ	–	ಕೊಡುಗೆ	____________
೨. ಮಲ್ಲಕಂಬ	–	ಪಟ್ಟುಗಳು	____________
೩. ಕುಸ್ತಿ	–	ಮೆರವಣಿಗೆ	____________
೪. ಗುಡಿಯ ಮುಂದೆ	–	ಸವಾಲು	____________
೫. ಹನುಮಂತನ	–	ದೀಪದ ಕಂಬ	____________

@ KTBS NOT TO BE REPUBLISHED

ಅಭ್ಯಾಸ ಚಟುವಟಿಕೆ

೧. ಕುಸ್ತಿಯ ಚಿತ್ರ, ಮಲ್ಲಕಂಬ ಏರುವ ಚಿತ್ರ ಮತ್ತು ಗರಡಿ ಮನೆಗಳ ಚಿತ್ರಗಳನ್ನು ಸಂಗ್ರಹಿಸಿರಿ.

೨. ಬೇರೆ ಬೇರೆ ಗ್ರಾಮೀಣ ಆಟಗಳ ಹೆಸರು ಬರೆಯಿರಿ.

೩. ನೀವು ವನಭೋಜನಕ್ಕೆ ಹೋಗಿ ಬನ್ನಿ. ಆ ಸಿದ್ಧತೆ ಹೇಗೆ ಮಾಡುವಿರಿ ವಿವರಿಸಿರಿ. ಯಾರು ಯಾರು ಏನನ್ನು ತರಬೇಕು ಎಂಬುದನ್ನು ಸಂಬಂಧಿಸಿದವರಿಗೆ ಹೇಳಿ. ವನ ಭೋಜನ ಹೇಗಾಯಿತು ಎಂಬುದನ್ನು ನಿಮ್ಮ ಮುಖ್ಯಗುರುಗಳಿಗೆ ವಿವರವಾಗಿ ತಿಳಿಸಿರಿ. ವನಭೋಜನಕ್ಕೆ ಕುಳಿತಾಗ ಹೇಳಿದ ಮಂತ್ರ ಅಥವಾ ಹಾಡು ಹೇಳಿರಿ.

ಭಾಷಾಭ್ಯಾಸ

ಅ. ೬ನೇ ತರಗತಿಯ ಹಿರೇಮಣಿ ಗೌರಿಯ ನೇತೃತ್ವದಲ್ಲಿ ಮಕ್ಕಳೆಲ್ಲಾ ಒಂದು ಕಡೆ ಸೇರಿದರು. ಜನವರಿ ೨೬, ಗಣರಾಜ್ಯೋತ್ಸವವನ್ನು ಶಾಲೆಯಲ್ಲಿ ಆಚರಿಸಬೇಕು. ಯಾವ ಯಾವ ಕೆಲಸಗಳನ್ನು ಯಾರು ಯಾರು ಮಾಡಬೇಕೆಂದು ನಿರ್ಧರಿಸಲು ಸಭೆ ಸೇರಿದರು.

ಬಸವರಾಜ : ನಾನು ಬೆಳಗಿನ ಜಾವ ೪.೩೦ಕ್ಕೆ ಎದ್ದು ಎಲ್ಲರನ್ನು ಎಬ್ಬಿಸಲು ನಿಮ್ಮ ಮನೆಗಳಿಗೆ ಬರುತ್ತೇನೆ.

ದೀಪಾ: ______________________

ಮೇರಿ : ______________________

ಹಸೀನಾ : ______________________

ಆರಿಫ್ : ______________________

ಚೆನ್ನ : ______________________

ಮಕ್ಕಳೆಲ್ಲ ಗಣರಾಜ್ಯೋತ್ಸವವನ್ನು ಸಂಭ್ರಮದಿಂದ ಆಚರಿಸಿ ಶಾಲೆಯ ಮುಖ್ಯಗುರುಗಳ, ಶಾಲಾ ಉಸ್ತುವಾರಿ ಸಮಿತಿಯ ಹಾಗೂ ಪಾಲಕರ ಮೆಚ್ಚುಗೆ ಗಳಿಸಿದರು.

ಆ. ಕೆಳಗಿನ ಪದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಬಳಸಿರಿ.

೧. ಮೆರವಣಿಗೆ : ______________________

೨. ಆಸ್ಥಾನ : ______________________

೩. ಫಲ ನೀಡು : ______________________

೪. ಪ್ರಶಸ್ತಿ ಪತ್ರ : ______________________

೫. ಕಸರತ್ತು : ______________________

ಇ. ಕೆಳಗಿನವುಗಳಿಗೆ ಟಿಪ್ಪಣಿ ಬರೆಯಿರಿ :

೧. ಮಲ್ಲಕಂಬ

೨. ಬಾಳಂಭಟ್ಟ

೩. ಅಲಿ ಮತ್ತು ಗುಲ್

@ KTBS NOT TO BE REPUBLISHED

ಗಮನಿಸಿ ಓದಿರಿ

ಅ. ಈ ಪಾಠದಲ್ಲಿ ಉತ್ತರ ಕರ್ನಾಟಕದ ಆಡುಮಾತುಗಳಿವೆ. ಅವುಗಳನ್ನು ಗ್ರಾಂಥಿಕ ರೂಪದಲ್ಲಿ ಬರೆದಿದೆ. ಗಮನಿಸಿರಿ.

೧. ಹ್ಯಾಂಗ – ಹೇಗೆ

೨. ಮ್ಯಾಲ – ಮೇಲೆ

೩. ಜಾರತೈತಿ – ಜಾರುತ್ತದೆ.

೪. ಅಲ್ನೋಡು – ಅಲ್ಲಿ ನೋಡು

೫. ಕಲಿತಾರ – ಕಲಿಯುತ್ತಾರೆ

೬. ಇದ್ರಂತ – ಇದ್ದರಂತೆ.

ಆ. ಕೆಳಗಿನ ಶಬ್ದಗಳನ್ನು ಬಿಡಿಸಿ ಬರೆದಿದೆ. ಗಮನಿಸಿ– ಓದಿರಿ.

ಬಂಡೆ	+	ಕಲ್ಲು	=	ಬಂಡೆಗಲ್ಲು
ಸಿರಿ	+	ಕನ್ನಡ	=	ಸಿರಿಗನ್ನಡ
ಗರುಡ	+	ಕಂಬ	=	ಗರುಡಗಂಬ
ಮಳೆ	+	ಕಾಲ	=	ಮಳೆಗಾಲ
ಮೈ	+	ತುಂಬಿ	=	ಮೈದುಂಬಿ
ಹೂ	+	ತೋಟ	=	ಹೂದೋಟ
ಬೆಟ್ಟ	+	ತಾವರೆ	=	ಬೆಟ್ಟದಾವರೆ
ಹೂ	+	ಪುಟ್ಟಿ	=	ಹೂಬುಟ್ಟಿ
ಕಣ್	+	ಪನಿ	=	ಕಂಬನಿ

© KTBS NOT TO BE REPUBLISHED

ಭಾಷಾ ಚಟುವಟಿಕೆ

ಇದನ್ನು ಓದಿ, ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ.

ಅಂಡಮಾನ್ ಮತ್ತು ನಿಕೋಬಾರ ಈ ಸಣ್ಣಸಣ್ಣ ದ್ವೀಪಗಳಲ್ಲಿ ಅನೇಕ ರಾಷ್ಟ್ರೀಯ ಉದ್ಯಾನವನಗಳು, ವನ್ಯಜೀವಿ ಧಾಮಗಳಿವೆ. ಈ ಪ್ರದೇಶದ ಭೂ ಮತ್ತು ಜಲಚರಗಳು ವಿಶೇಷವಾದಂತಹವು. ಅವುಗಳನ್ನು ರಕ್ಷಿಸಲು ಸರ್ಕಾರ ಕಟ್ಟು ನಿಟ್ಟಿನಕ್ರಮ ತೆಗೆದುಕೊಂಡಿದ್ದಾರೆ. ಕಳ್ಳ ಬೇಟೆಗಾರರ ಮೇಲೆ ಕಠಿಣ ಕ್ರಮ ಜರುಗಿಸಲಾಗುತ್ತದೆ. ಇಲ್ಲಿ ಒಟ್ಟು ೯೬ ರಾಷ್ಟ್ರೀಯ ಉದ್ಯಾನವನ ಹಾಗೂ ವನ್ಯ ಜೀವಿಧಾಮಗಳಿವೆ. ಇವುಗಳಲ್ಲಿ ಪ್ರಸಿದ್ಧವಾದುದು ಮಹಾತ್ಮಗಾಂಧಿ ಮರೈನ್ ರಾಷ್ಟ್ರೀಯ ಉದ್ಯಾನವನ. ಇದು ೨೮೨ ಚದುರ ಕಿ.ಮೀ. ಇದೆ. ಇದು ತುಂಬಾ ಸುಂದರವಾದುದು.

ಪ್ರಶ್ನೆಗಳು

೧. ಅಂಡಮಾನ್ ನಿಕೋಬಾರ ಸಣ್ಣ ಸಣ್ಣ ದ್ವೀಪಗಳಲ್ಲಿ ಇರುವ ಪ್ರಸಿದ್ಧ ರಾಷ್ಟ್ರೀಯ ಉದ್ಯಾನವನ ಯಾವುದು ?

೨. ಅಂಡಮಾನ ನಿಕೋಬಾರ ಸರ್ಕಾರ ವನ್ಯ ಜೀವಿರಕ್ಷಣೆಗೆ ಯಾವ ಕ್ರಮ ಕೈಗೊಂಡಿದ್ದಾರೆ?


೩. ಇಲ್ಲಿ ಎಷ್ಟು ಉದ್ಯಾನವನ ಹಾಗೂ ವನ್ಯ ಜೀವಿಧಾಮಗಳಿವೆ ?

ಪದ್ಯ ಪಾಠ–೪

ಸುಂಟರಗಾಳಿ

ಪ್ರವೇಶ :

ನಮ್ಮ ಸುತ್ತಮುತ್ತ ಗಾಳಿ ಇದೆ. ಬೆಳಕು ನೀಡುವ ಸೂರ್ಯನಿದ್ದಾನೆ. ಗಿಡಮರಗಳಿವೆ. ಕೆರೆ, ಹಳ್ಳ, ಕೊಳ್ಳ, ನದಿ, ಬೆಟ್ಟಗಳಿವೆ. ಇದುವೆ ಪ್ರಕೃತಿ ಅಥವಾ ನಿಸರ್ಗ. ಈ ಪ್ರಕೃತಿಯಲ್ಲಿ ಗಾಳಿಯ ಪಾತ್ರ ಬಹಳ ಮಹತ್ವದ್ದು. ಜೀವ, ಜಂತು, ಗಿಡ, ಮರ, ಸಸ್ಯಗಳಿಗೆಲ್ಲ ಉಸಿರಾಡಲು ಗಾಳಿ ಬೇಕು. ಆದರೆ ಈ ಗಾಳಿ ಆಷಾಢ ಮಾಸದಲ್ಲಿ ಬೀಸುವ ರೀತಿ ಯಾವುದು? ಚರ್ಚೆ ಮಾಡಿ ಉತ್ತರ ಹೇಳಿ. ಬೇಸಿಗೆಯಲ್ಲಿ ತಣ್ಣನ್ನ ಗಾಳಿ ಬೀಸಿದಾಗ ಮೈ ಮನಕ್ಕೆ ಅದು ಏನನ್ನು ನೀಡುತ್ತದೆ? ಅನೇಕ ಸಲ ಬಿರು ಬೇಸಿಗೆಯಲ್ಲಿ ಭೂಮಿಯ ತಾಪ ಹೆಚ್ಚಾಗಿರುತ್ತದೆ. ಆಗ ಜೋರಾಗಿ ಬೀಸುವ ಗಾಳಿ ಕಂಡಿದ್ದೀರಿ. ಸುರುಳಿಯಾಕಾರವಾಗಿ ಸೊಯ್ಯನೆ ಬೀಸುವ ಗಾಳಿಯೇ ಸುಂಟರ ಗಾಳಿ. ಇಂತಹ ಗಾಳಿ ಬೀಸಿದಾಗ ಏನಾಗುತ್ತದೆ? ಹೇಳಿ ಕಯ್ಯಾರ ಕಿಞ್ಞಣ್ಣರೈ ಕವಿಗಳು ಕಂಡ ಸುಂಟರಗಾಳಿ ಪದ್ಯವನ್ನು ದೊಡ್ಡ ಧ್ವನಿಯಿಂದ ಓದಿ ನೋಡಿ.



@ KTBS
NOT TO BE REPUBLISHED

ಏನಿದು ಧೂಳಿ ? ಓಹೋ ಗಾಳಿ!
ತಿರ್ರನೆ ಬಂತೈ ಸುಂಟರಗಾಳಿ ॥ಪ॥
ತೆಂಗಿನ ಮರಗಳು, ಕಂಗಿನ ಮರಗಳು
ಬಾಳೆಯು ತಾಳೆಯು ಮಾವು ಹಲಸುಗಳು
ಎಲ್ಲಾ ತೂಗಿವೆ, ತಲೆಗಳು ಬಾಗಿವೆ !

ಏನಿದು ಧೂಳಿ? ಓಹೋ ಗಾಳಿ
ಸುಳಿಯುತ ಬಂತೈ ಸುಂಟರಗಾಳಿ।
ಕಣ್ಣು ಮುಚ್ಚುತ ಬಾಲವನೆತ್ತಿ !
ದನ ಓಡುತ್ತಿದೆ ಎತ್ತಲೊ ಸುತ್ತಿ !
'ಅಂಬಾ' ಎನುತ ಕರು ಬೆಂಬತ್ತಿ
ಏನಿದು ಧೂಳಿ ?

ಹೋಯಿತು ಹೆಂಚು! ಹಾರಿತು ಹುಲ್ಲು!
ಬೊಬ್ಬೆಯ ಬೊಬ್ಬೆಯ ಭಯವೆಲ್ಲೆಲ್ಲು
ಕೇಳುವರಾರಿ ಮಂದಿಯ ಗುಲ್ಲು
ಏನಿದು ಧೂಳಿ ?

ಏನಿದು ಕೋಪ? ಯಾರಲಿ ಶಾಪ?
ಓಹೋ, ಹೆಚ್ಚಿತೆ ಭೂಮಿಯ ತಾಪ?
ತಡೆಯುವರುಂಟೆ ? ಅಯ್ಯೋ ಪಾಪ !
ಏನಿದು ಧೂಳಿ?

ಬಾನಿನ ಬಯಲಿಂದಿಳಿಯುತ ಬಂತೋ?
ಪಾತಾಳದ ಹೊಟ್ಟೆಯೊಳಗಡಗಿತ್ತೋ
ಕಡಲು ಕಡೆಯುತಲಿದೆ ಹುಟ್ಟಿತೋ?
ಏನಿದು ಧೂಳಿ ಓಹೋ ಗಾಳಿ !
ಸುಳಿಯುತ ಬಂತೈ ಸುಂಟರ ಗಾಳಿ

@ KTBS
NOT TO BE REPUBLISHED

– **ಕಯ್ಯಾರ ಕಿಞ್ಞಣ್ಣರೈ**

ಕವಿ ಪರಿಚಯ:



ಕಯ್ಯಾರ ಕಿಞ್ಞಣ್ಣರೈ ಇವರು ಕಾಸರಗೋಡಿನ ಕಯ್ಯಾರದವರು. ಇವರು ಸ್ವಾತಂತ್ರ್ಯ ಹೋರಾಟಗಾರರು. ಕವಿ, ಲೇಖಕ ಹಾಗೂ ಪರ್ತಕರ್ತರಾಗಿ ಕೆಲಸ ಮಾಡಿದ್ದಾರೆ. ವಿದ್ಯಾರ್ಥಿಯಾಗಿದ್ದಾಗಲೆ ೧೨ನೆಯ ವಯಸ್ಸಿನಲ್ಲಿ **ಸುಶೀಲ** ಕೃತಿ ರಚಿಸಿದರು. ಮಹಾತ್ಮ ಗಾಂಧೀಜಿಯವರಿಂದ ಪ್ರಭಾವಿತರು. ಕನ್ನಡದ ದೊಡ್ಡ ಅಭಿಮಾನಿ. ಇವರ ಅನೇಕ ಕವಿತೆ, ಕಾದಂಬರಿ, ಪ್ರಬಂಧಗಳನ್ನು ಬರೆದಿದ್ದಾರೆ. **ಏರುತಿಹುದು ಹಾರುತಿಹುದು ನೋಡು ನಮ್ಮ ಬಾವುಟ** ಇವರ ಪ್ರಸಿದ್ಧ ಕವನ.

ಓದಿ ತಿಳಿ

ಬಂತೈ – ಬಂದಿತು. ಕಂಗು – ಅಡಿಕೆ. ಧೂಳಿ – ಧೂಳು. ಬೊಬ್ಬೆ – ಜೋರಾಗಿ ಕೂಗು, ಚೀರು, ಗುಲ್ಲು – ಗದ್ದಲ. ತಾಪ – ಉಷ್ಣತೆ. ಬಾನು – ಆಕಾಶ, ಕಡಲು – ಸಮುದ್ರ.

ಗಮನಿಸಿ ತಿಳಿ

ಸುಂಟರ ಗಾಳಿ – ಸುತ್ತುತ್ತ ರಭಸದಿಂದ ಬೀಸುವ ಗಾಳಿ. ತಿರ್ರನೆ – ತಿರುತಿರುಗಿ ವೇಗವಾಗಿ ಸುರುಳಿಯಾಕಾರದಲ್ಲಿ ಸುತ್ತುವುದು, ಬೆಂಬತ್ತು – ಹಿಂಬಾಲಿಸಿ ಹೋಗು. ಶಾಪ – ಕೆಡುಕಾಗಲೆಂದು ಬಯಸಿ ಹೇಳುವ ಮಾತು, ಪಾತಾಳ – ಭೂಮಿಯ ತಳದಲ್ಲಿರುವ ಲೋಕ.

ಅಭ್ಯಾಸ

ಅ. ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿರಿ.

೧. ಸುಂಟರಗಾಳಿ ಏನನ್ನು ಎಬ್ಬಿಸಿತು?

೨. ಸುಂಟರಗಾಳಿ ಬರುವ ರೀತಿ ಹೇಳಿ?

೩. ಸುಂಟರಗಾಳಿ ಬಂದಾಗ ಯಾವ ಯಾವ ಮರಗಳು ತೂಗಿ ಬಾಗಿದವು?

೪. ಸುಂಟರಗಾಳಿ ಬೀಸಿದಾಗ ಕರು ಏನೆನ್ನುತ್ತಿತ್ತು?

೫. ಸುಂಟರಗಾಳಿ ಬೀಸಿದಾಗ ದನಗಳು ಏನು ಮಾಡಿದವು?

೬. ಸುಂಟರಗಾಳಿ ಎಲ್ಲಿಂದ ಬಂತು ಎಂದು ಕವಿ ಊಹಿಸುತ್ತಾನೆ?

೭. ಸುಂಟರಗಾಳಿ ಬಂದಾಗ ಜನ ಅಂದುಕೊಂಡಿದ್ದೇನು?

ಆ. ಬಿಟ್ಟ ಸ್ಥಳಗಳನ್ನು ಸೂಕ್ತ ಪದ ಆಯ್ಕೆ ಮಾಡಿ ತುಂಬಿರಿ.

೧. ತಿರ್ರನೆ ಬಂತೈ ________________.

ಅ) ಸುಳಿಗಾಳಿ ಆ) ಸುಂಟರಗಾಳಿ ಇ) ಬಿರುಗಾಳಿ ಈ) ಸಮುದ್ರಗಾಳಿ

೨. ಕೇಳುವರಾರೀ ಮಂದಿಯ ________________.

ಅ) ಸೊಲ್ಲು ಆ) ಕಲ್ಲು ಇ) ಜೊಲ್ಲು ಈ) ಗುಲ್ಲು

೩. ಓಹೋ ಹೆಚ್ಚಿತೆ ಭೂಮಿಯ ________________.

ಅ) ತಾಪ ಆ) ಕೋಪ ಇ) ಲೋಪ ಈ) ಶಾಪ

೪. ಈ ಸುಂಟರಗಾಳಿ ಇದರ ಹೊಟ್ಟೆಯೊಳಗೆ ಅಡಗಿತ್ತು ________________.

ಅ) ಪಾತಾಳ ಆ) ಭೂಮಿ ಇ) ಆಕಾಶ ಈ) ಕಡಲು

@ KTBS NOT TO BE REPUBLISHED

ಇ. ಅ ಪಟ್ಟಿಯ ಪದಗಳಿಗೆ ಬ ಪಟ್ಟಿಯ ಪದಗಳನ್ನು ಹೊಂದಿಸಿ ಬರೆಯಿರಿ.

ಅ		ಬ	
೧. ಸುಳಿಯುತ ಬಂತೈ	–	ಅ. ಓಹೋ ಗಾಳಿ	________
೨. ತೆಂಗಿನ ಮರಗಳು	–	ಆ. ಭೂಮಿಯ ತಾಪ	________
೩. ಅಂಬಾ ಎನುತಿದೆ	–	ಇ. ತಲೆದೂಗಿವೆ	________
೪. ಏನಿದು ಧೂಳಿ	–	ಈ. ಸುಂಟರಗಾಳಿ	________
೫. ಓಹೋ ಹೆಚ್ಚಿತೆ	–	ಉ. ಕರು	________

ಈ. ಈ ಕೆಳಗಿನ ಪ್ರಶ್ನೆಗಳಿಗೆ ೩–೪ ಸಾಲಿನಲ್ಲಿ ಉತ್ತರಿಸಿರಿ.

೧. ಸುಂಟರಗಾಳಿ ಬೀಸಿದಾಗ ಏನೇನು ಆಯಿತು? ಒಂದನೆಯ ನುಡಿಯನ್ನು ಆಧರಿಸಿ ಹೇಳಿರಿ.

೨. ಸುಂಟರ ಗಾಳಿಯು ಬಂದಾಗ ದನಗಳು ಏನೇನು ಮಾಡಿದವು ?

೩. ಗಾಳಿಯ ಧೂಳಿಗೆ ಮನೆಗಳ ಮೇಲಾದ ಪರಿಣಾಮ ಹೇಳಿರಿ.

ಅಭ್ಯಾಸ ಚಟುವಟಿಕೆ

1. ಸ್ವಾಮಿ ವಿವೇಕಾನಂದರ ಈ ಮಾತುಗಳನ್ನು ಗಟ್ಟಿಯಾಗಿ ಹೇಳಿರಿ.

* ಶಕ್ತಿಶಾಲಿಗಳಾಗಿ, ಶ್ರದ್ಧಾವಂತರಾಗಿ. ಆಗ ಎಲ್ಲವೂ ನಿಶ್ಚಿತವಾಗಿ ಸಾಧಿಸಲ್ಪಡುತ್ತದೆ.
* ಶಕ್ತಿಯೆಲ್ಲ ನಿಮ್ಮೊಳಗೇ ಇದೆ: ನೀವು ಏನು ಬೇಕಾದರೂ ಮಾಡಬಲ್ಲಿರಿ, ಎಲ್ಲವನ್ನೂ ಮಾಡಬಲ್ಲಿರಿ.
* ನೀವು ಯಶಸ್ಸನ್ನು ಪಡೆಯಲು ದೃಢ ಪ್ರಯತ್ನಬೇಕು, ಅಪಾರ ಇಚ್ಛಾ ಶಕ್ತಿ ಬೇಕು.
* ನಾನು ಸಮುದ್ರವನ್ನೇ ಕುಡಿಯುತ್ತೇನೆ. ಎಂದು ಪ್ರಯತ್ನಶೀಲನು ಹೇಳುತ್ತಾನೆ.ನನ್ನ ಸಂಕಲ್ಪದ ಮುಂದೆ ಪರ್ವತಗಳೇ ಪುಡಿ ಪುಡಿಯಾಗುತ್ತವೆ ಎನ್ನುತ್ತಾನೆ. ಇಂತಹ ಶಕ್ತಿಯನ್ನು ಪಡೆಯಿರಿ ಕಷ್ಟಪಟ್ಟು ದುಡಿಯಿರಿ.

2. ಸುಂಟರಗಾಳಿಯ ಬಗೆಗೆ ಮಕ್ಕಳಿಂದ ಆಶು ಭಾಷಣ ಮಾಡಿಸಿರಿ.

© KTBS NOT TO BE REPUBLISHED

ಭಾಷಾಭ್ಯಾಸಗಳು

ಅ. ಪದಗಳನ್ನು ನಿಮ್ಮ ಸ್ವಂತ ವಾಕ್ಯದಲ್ಲಿ ಉಪಯೋಗಿಸಿರಿ.

ತೂಗು: ________

ಬೆಂಬತ್ತು : ________

ಶಾಪ : ________

ಪಾತಾಳ : ________

ಕಡಲು: ________

ಆ. ಈ ಪದಗಳನ್ನು ಧ್ವನಿಪೂರ್ಣವಾಗಿ ಉಚ್ಚರಿಸಿರಿ.

ಓಹೋ ಗಾಳಿ !

ಏನಿದು ಧೂಳಿ ?

ಹೋಯಿತು ಹೆಂಚು!

ಹಾರಿತು ಹುಲ್ಲು !

ಏನಿದು ಕೋಪ?

ಇ. ಗೆರೆ ಹಾಕಿದ ಪದಗಳಿಗೆ ಬದಲಾಗಿ ಒಂದೇ ಪದ ಉಪಯೋಗಿಸಿರಿ.

ಬಹಳ ಸಂತೋಷವಾದಾಗ ಉಚ್ಚರಿಸುವ ಪದ : ______________________

ಬಹಳ ದುಃಖವಾದಾಗ ಉಚ್ಚರಿಸುವ ಪದ : ______________________

ಬಹಳ ಕೋಪ ಬಂದಾಗ ಪ್ರಶ್ನಿಸುವ ಪದ : ______________________

ಬಹಳ ಧೂಳು ಎದ್ದಾಗ ಪ್ರಶ್ನಿಸುವ ಪದ : ______________________

ಬಹಳ ಬೇಗ ಬೇಗ ಬಾ ಎನ್ನಲು ಶಿಕ್ಷಕರು ಉಪಯೋಗಿಸುವ ಒಂದೇ ಪದ:________

ಸುಳಿವು :- ಏನದು, ಅಹಾ!, ಅಯ್ಯೋ!, ಏನಿದು ಧೂಳು, ಬಾರೋ

ಈ. ಮಾತುಗಳನ್ನು ನಿರರ್ಗಳವಾಗಿ ಸ್ಪಷ್ಟ ಉಚ್ಚಾರದೊಂದಿಗೆ ಅಭಿನಯಿಸಿರಿ.


ಕಿತ್ತೂರು ಚೆನ್ನಮ್ಮನಿಂದ ಇಂಗ್ಲೀಷರು ಕಪ್ಪಕಾಣಿಕೆ ಕೇಳುತ್ತಾರೆ


ಅದನ್ನು ವಿರೋಧಿಸಿ ಆಕೆ ಮಾತನಾಡುವ ರೀತಿ:

ಕಿತ್ತೂರು ಚೆನ್ನಮ್ಮ : ಕಪ್ಪ ಕೊಡಬೇಕೆ? ಕಪ್ಪ! ಈ ಬಿಳಿ ಕುನ್ನಿಗಳಿಗೆ.
ಇವರೇನು ನಮ್ಮ ಅಣ್ಣ ತಮ್ಮಂದಿರೆ? ಬಂಧುಗಳೆ?

ಈ ಭಾರತೀಯ ರಕ್ತ ನಮ್ಮಲ್ಲಿ ಹರಿಯುವವರೆಗೆ ನಾವೇನು ಅಂಜಬೇಕಿಲ್ಲ. ಜೈ ಭಾರತಿ !

ಉ. ಮೋಡತುಂಬಿ ಮಳೆಗರೆವ ಚಿತ್ರ.





© KTBS NOT TO BE REPUBLISHED

ಕಲ್ಪನಾ, ಶಹಿನಾ, ಲೂಸಿ, ಜಹೀರ, ಶಂಕರ, ಪೀಟರ ಎಲ್ಲರೂ ಶಾಲಾ ಬಯಲಿನಲ್ಲಿ ಸೇರಿದ್ದಾರೆ. ಉರಿಬಿಸಿಲು, ಮಳೆ ಮೋಡ, ಧೋ ಧೋ ಮಳೆ ! ಹರಿವ ನೀರು ಕಲ್ಪಿಸಿಕೊಳ್ಳುತ್ತಾರೆ. ಮಳೆ ಬಗ್ಗೆ ಎಲ್ಲರೂ ಒಂದೊಂದು.

ವಾಕ್ಯವೃಂದ ತಯಾರಿಸುತ್ತಾರೆ. ಇದು ಹೀಗಿರಲಿ.

ಮಾದರಿ : ಕಲ್ಪನಾ : ಅಬ್ಬಾ ! ಏನು ಬಿಸಿಲಪ್ಪಾ. ಇವತ್ತು, ಸೆಕೆ ತಡೆಯದಾಯಿತು.

ಪೀಟರ್ : ಆಕಾಶದ ತುಂಬ ಮಳೆ ಮೋಡ. ನೋಡ್ರೋ! ಅಲ್ಲಿ ಅದೆಷ್ಟು ಕರಿಮೋಡ ಆಕಾಶ ತುಂಬಿದೆ.

ಶಹಿನಾ : ______________________________

ಜಹೀರ : ______________________________

ಶಂಕರ: ______________________________

ಲೂಸಿ : ______________________________

(ಖಾಲಿಬಿಟ್ಟ ಜಾಗದಲ್ಲಿ ಮಕ್ಕಳು ಒಂದೊಂದು ವಾಕ್ಯ ಬರೆಯಲಿ)

@ KTBS NOT TO BE REPUBLISHED

ಖ. ಈ ನುಡಿಗೆ ಲೇಖನ ಚಿಹ್ನೆ ಹಾಕಿ ಬರೆಯಿರಿ.

ಏನಿದು ಧೂಳಿ ಓಹೋ ಗಾಳಿ
ಸುಳಿಯುತ ಬಂತೈ ಸುಂಟರಗಾಳಿ
ಕಣ್ಣು ಮುಚ್ಚುತ ಬಾಲವನೆತ್ತಿ
ದನ ಓಡುತ್ತಿದೆ ಎತ್ತಲೊ ಸುತ್ತಿ
ಅಂಬಾ ಎನುತ ಕರು ಬೆಂಬತ್ತಿ
ಏನಿದು ಧೂಳಿ

ಭಾಷಾ ಚಟುವಟಿಕೆ

ಸ್ವಾತಂತ್ರ್ಯ ಹೋರಾಟಗಾರರ ಸುಪ್ರಸಿದ್ಧ ಮಾತುಗಳನ್ನು ಅಥವಾ ಅವರ ಘೋಷಣೆಗಳನ್ನು ಬರೆಯಿರಿ.

ಮಾದರಿ : ಲೋಕಮಾನ್ಯ ಬಾಲಗಂಗಾಧರ ತಿಲಕ : ಸ್ವಾತಂತ್ರ್ಯ ನನ್ನ ಜನ್ಮಸಿದ್ಧ ಹಕ್ಕು ಅದನ್ನು ಪಡೆದೇ ಪಡೆಯುತ್ತೇನೆ

ಮಹಾತ್ಮಾ ಗಾಂಧೀಜಿ :

ಲಾಲಬಹದ್ದೂರ ಶಾಸ್ತ್ರಿ :

ಸ್ವಾಮಿ ವಿವೇಕಾನಂದ :

ಸುಭಾಶ್ಚಂದ್ರ ಭೋಸ್ :

✤ ✤ ✤

ಪಾಠ–೫

ದೇಶಪ್ರೇಮಿ ಕವಿ ಇಕ್ಬಾಲ್

ಪ್ರವೇಶ :

ತಾಯಿ ಮತ್ತು ತಾಯಿನಾಡು ಸ್ವರ್ಗಕ್ಕಿಂತ ಮಿಗಿಲು ಎಂದು ಸಂಸ್ಕೃತ ಸುಭಾಷಿತವು ಹೇಳುತ್ತದೆ. ಕವಿ ಕುವೆಂಪುರವರು **ದೇಶ ನನ್ನದು ಎನ್ನದ ಎದೆ ಸುಡುಗಾಡು** ಎನ್ನುತ್ತಾರೆ. ಆದಕಾರಣ ನಾವು ನನ್ನ ದೇಶ, ತಾಯಿನಾಡು ನನ್ನ ರಾಷ್ಟ್ರ ಎಂದು ಮನತುಂಬಿ ಹೇಳುತ್ತೇವೆ. ಹೊತ್ತ ತಾಯಿ ಹೆತ್ತ ತಾಯಿಗಿಂತ ಮಿಗಿಲು. ಈ ತಾಯಿಯ ರಕ್ಷಣೆ ನಮ್ಮದು. ಅದಕ್ಕಾಗಿ ನಮ್ಮ ದೇಶವನ್ನು **ಭಾರತ ಮಾತೆ** ಎಂದು ಕರೆಯುತ್ತೇವೆ.



ಇಲ್ಲಿಯ ಹಿಮಾಲಯ ಪರ್ವತ ನಮ್ಮ ರಕ್ಷಕ. ನಮ್ಮ ಗಂಗಾ, ಸಿಂಧು, ಕಾವೇರಿ, ಕೃಷ್ಣೆ, ಗೋದಾವರಿ ವೈಗೈ ಮುಂತಾದ ನದಿಗಳು ನಮಗೆ ಕೇವಲ ಪವಿತ್ರ ನದಿಗಳಲ್ಲ ಜೀವ ನದಿಗಳು. ಇಲ್ಲಿಯ ಮಣ್ಣಿನ ಕಣ ಕಣವೂ ನಮಗೆ ಬಂಗಾರ. ಇದರ ರಕ್ಷಣೆಗಾಗಿ ಅನೇಕರು ಪ್ರಾಣತೆತ್ತಿದ್ದಾರೆ. ಕವಿ ಇಕ್ಬಾಲರು ದೇಶವನ್ನು ಕುರಿತು ಏನನ್ನು ಹೇಳಿದ್ದಾರೆ ಓದೋಣ

ಸಾರೆ ಜಹಾಂಸೆ ಅಚ್ಛಾ ಹಿಂದುಸ್ತಾನ ಹಮಾರಾ.
ಹಮ ಬುಲ್ ಬುಲೆ ಹೈ ಇಸಕಿ ಎ ಗುಲಸಿತಾ ಹಮಾರಾ...

....

....

ಮಜಹಬ್ ನಹಿ ಸಿಖಾತಾ ಆಪಸ ಮೆ ಬೈರ ರಖನಾ
ಹಿಂದೀ ಹೈ ಹಮ್ ವತನ ಹೈ ಹಿಂದುಸ್ತಾನ ಹಮಾರಾ

(ಉರ್ದು ಪದ್ಯ)

ಭಾವಾರ್ಥ :

[ನಮ್ಮದೇಶ ಹಿಂದುಸ್ತಾನ ಪ್ರಪಂಚದಲ್ಲಿಯೇ ಸುಂದರದೇಶ.

ಈ ದೇಶದ ಉದ್ಯಾನವನದಲ್ಲಿ ನಾವೆಲ್ಲ ಬುಲ್ ಬುಲ್ ಪಕ್ಷಿಗಳು.

....

(ಯಾವುದೇ) ಧರ್ಮವು ಪರಸ್ಪರ ದ್ವೇಷವನ್ನು ಕಲಿಸುವುದಿಲ್ಲ

ನಾವೆಲ್ಲ ಭಾರತೀಯರು, ನಮ್ಮ ದೇಶ ಹಿಂದುಸ್ತಾನ.]

ಪ್ರತಿ ಶನಿವಾರ ಹಾಗೂ ಸ್ವಾತಂತ್ರ್ಯ ಉತ್ಸವದಂದು ಶಾಲಾ ಸಮಾರಂಭಗಳಲ್ಲಿ ಈ ದೇಶಭಕ್ತಿ ಗೀತೆ ಹಾಡುವರು. ಮಹಾತ್ಮಾ ಗಾಂಧೀಜಿಯವರು ಈ ಗೀತೆ ಮೆಚ್ಚಿ ಆನಂದ ಬಾಷ್ಪ ಸುರಿಸಿದ್ದರು. ಕವಿಗೆ ನಮನ ತಿಳಿಸಿದ್ದರು. ಈ ನೆಚ್ಚಿನ ಗೀತೆ ಬರೆದವರಾರು ಗೊತ್ತೆ?

@ KTBS NOT TO BE REPUBLISHED

ಇವರೇ ದೇಶಪ್ರೇಮಿ ಕವಿ ಇಕ್ಬಾಲ್ ಮಹಮ್ಮದ. ಇವರು ಈಗಿನ ಪಾಕಿಸ್ತಾನದ ಪಂಜಾಬ ರಾಜ್ಯದ ಸಿಯಾಲ್‌ಕೋಟಿನಲ್ಲಿ ೯ನೇ ನವೆಂಬರ್ ೧೮೭೭ರಂದು ಜನಿಸಿದರು. ಇವರ ತಂದೆ ಷೇಕ್‌ನೂರ್ ಮಹ್ಮದ್. ಅವರು ದೊಡ್ಡ ವಿದ್ಯಾವಂತರಲ್ಲ. ಆದರೆ ಅನುಭಾವಿ ತತ್ವಜ್ಞಾನಿ. ಇಕ್ಬಾಲರಿಗೆ ಶಿಕ್ಷಣ ಕೊಡಲು ಇವರ ಅಣ್ಣ ಷೇಕ್ ಅತಾ ಮಹಮ್ಮದ ಸಹಾಯ ಮಾಡಿದರು.

ಅಂದು ಪ್ರಸಿದ್ಧರಾಗಿದ್ದ ಮೌಲ್ವಿ ಮೀರ್ ಹಸನ್‌ರವರು ಇಕ್ಬಾಲರಿಗೆ ಇಂಗ್ಲಿಷ್ ಮತ್ತು ಪರ್ಶಿಯನ್ ಭಾಷೆ ಕಲಿಸಿದರು. ಹದಿನಾರನೆಯ ವಯಸ್ಸಿಗೆ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾದರು. ಅರೇಬಿಕ್ ಮತ್ತು ಇಂಗ್ಲಿಷ್ ಭಾಷಾವಿಷಯದಲ್ಲಿ ಸುವರ್ಣ ಪದಕ ಪಡೆದರು. ತತ್ವಶಾಸ್ತ್ರ ಅವರ ಆಸಕ್ತಿಯ ವಿಷಯವಾಗಿತ್ತು. ಲಾಹೋರಿನಲ್ಲಿ ಪದವಿ ಪಡೆದ ಮೇಲೆ ಇಕ್ಬಾಲರು ಉನ್ನತ ಶಿಕ್ಷಣಕ್ಕಾಗಿ ಇಂಗ್ಲೆಂಡ್ ಮತ್ತು ಜರ್ಮನಿಗೆ ಹೋದರು. ಡಾಕ್ಟರೇಟ್ ಪದವಿ ಗಳಿಸಿದರು. ತದನಂತರ ಕ್ಯಾಂಬ್ರಿಜ್‌ನಲ್ಲಿ ನ್ಯಾಯಶಾಸ್ತ್ರ ಓದಿ ಬ್ಯಾರಿಸ್ಟರ್ ಆದರು. ಓದಿನಲ್ಲಿ ಇವರಿಗೆ ಬಹಳ ಅಭಿರುಚಿ ಇತ್ತು.

ಅವರು ಮನಸ್ಸು ಮಾಡಿದ್ದರೆ ಇಂಗ್ಲೆಂಡಿನಲ್ಲಿಯೇ ದೊಡ್ಡಹುದ್ದೆ ಕೈತುಂಬ ಸಂಬಳ ಪಡೆಯಬಹುದಾಗಿತ್ತು. ಅದನ್ನು ತಿರಸ್ಕರಿಸಿದ ದೇಶಪ್ರೇಮಿ ಇಕ್ಬಾಲರು ಲಾಹೋರ್ ಕಾಲೇಜಿನಲ್ಲಿ ತತ್ವಶಾಸ್ತ್ರದ ಅಧ್ಯಾಪಕರಾದರು. ಕೆಲಕಾಲ ಲಾಹೋರಿನ ಹೈಕೋರ್ಟ್‌ನಲ್ಲಿ ವಕೀಲರಾಗಿಯೂ ಸೇವೆ ಸಲ್ಲಿಸಿದರು.

ಕವಿಯಾಗಿ ಅವರು ಜೀವನದಲ್ಲಿ ಮಹತ್ತರ ತಿರುವು ಪಡೆದರು. ನಾಲಾ–ಎ–ಯತೀಮ (ಅನಾಥ ರೋದನ) ಕವಿತೆ ಇವರಿಗೆ ಬಹುದೊಡ್ಡ ಖ್ಯಾತಿಯನ್ನು ತಂದಿತು. ಅಸ್ರಾರ್–ಎ–ಖುದಿ (ಆತ್ಮದ ರಹಸ್ಯ) ಕೃತಿಯು ವಿಶ್ವದ ಗಮನ ಸೆಳೆಯಿತು. ಈ ಕೃತಿಯನ್ನು ಪ್ರೊ. ನಿಕಲ್ಸನ್ ಇಂಗ್ಲೀಷ್‌ಗೆ ಭಾಷಾಂತರ ಮಾಡಿದನು. ಜಬುರ್–ಎ–ಅಜಮ್ (ಪೌರ್ವಾತ್ಯಸತ್ಯವಾಣಿ) "ಜಾವೇದ್ ನಾಮಾ" (ನಿತ್ಯತ್ವ ಗೀತೆ) "ಮುಸಾಫಿರ್" (ಪಯಣಿಗ) ಮುಂತಾದ ಕೃತಿಗಳನ್ನು ರಚಿಸಿ ಸಾಹಿತ್ಯದಲ್ಲಿ ಚಿರಂತನ ಸ್ಥಾನಗಳಿಸಿದ್ದಾರೆ.

ಇವರ ಮೊಟ್ಟ ಮೊದಲನೆಯ ಕವನ ಸಂಗ್ರಹ 'ಬಾಂಗೆದಿರಾ' ಅದು ಹಿಮಾಲಯ ಪರ್ವತದ ಆರಾಧನಾ ಸ್ತುತಿ ಪದ್ಯದಿಂದ ಪ್ರಾರಂಭವಾಗುತ್ತದೆ. ಆ ಸ್ತುತಿ ಪದ್ಯದಲ್ಲಿ ಓ ಹಿಮಾಲಯ! ಭರತ ಭೂಮಿಯ ಭದ್ರಕೋಟೆ ನೀನು। ಆಕಾಶ ಬಗ್ಗಿಹುದು ನಿನ್ನ ಹಣೆ ಮುತ್ತಿಡಲು। ಆಯುಷ್ಯದಿ ನೀನು ಅಬಾಧಿತನು। ಹೀಗೆ ಪ್ರಾರಂಭವಾಗುವ ಕವಿತೆ ಹಿಮಾಲಯದ ಸೌಂದರ್ಯಕ್ಕೆ ಕನ್ನಡಿ ಹಿಡಿದಿದೆ.

ಈ ದೇಶದಲ್ಲಿ ವಿವಿಧ ಜಾತಿ ಮತ ಪಂಥಗಳು ಇವೆ ಅವುಗಳಲ್ಲಿ ಸಾಮರಸ್ಯದ ಅಗತ್ಯವನ್ನು ಇಕ್ಬಾಲರು ಒತ್ತಿ ಹೇಳಿದ್ದಾರೆ. ಮಕ್ಕಳಿಗಾಗಿ ಬರೆದ ತರುಣ್–ಇ–ಹಿಂದಿ ಎಂಬ ಕವಿತೆಯಲ್ಲಿ ರಾಷ್ಟ್ರಪ್ರೇಮ ಬಿತ್ತಿದ್ದಾರೆ. ತಾಯ್ನಾಡಿನ ಬಗ್ಗೆ ಅಪಾರವಾದ ಪ್ರೀತಿಯಿದೆ.

© KTBS NOT TO BE REPUBLISHED

ಜಗದೊಳೆಲ್ಲ ಶ್ರೇಷ್ಠದೇಶ ನಮ್ಮ ಭರತ ಭೂಮಿ
ಅದುವೆ ನಮ್ಮ ಬನವು ನಾವು ಉಲಿವ ಕೋಗಿಲೆ
ಇಲ್ಲೆ ಇರಲಿ, ಎಲ್ಲೆ ಇರಲಿ, ದೇಶ ಬಿಟ್ಟು ಹೊರಗೆ ಇರಲಿ
ಎಂದೆಂದಿಗೂ ನಮಗಿದೆ ಮಾತೃಭೂಮಿ ಚಿಂತನೆ ಎನ್ನುತ್ತಾರೆ.

ಹಿಮಾಲಯ ಮತ್ತು ಗಂಗೆಯನ್ನು ಮನಸ್ಸು ತುಂಬಿ ವರ್ಣಿಸುತ್ತಾರೆ. ರಾಮ ಮತ್ತು ಗುರುನಾನಕರನ್ನು ಗೌರವದಿಂದ ನೆನೆಯುತ್ತಾರೆ. ಪರಸ್ಪರ ದ್ವೇಷವನ್ನು ಯಾವ ಧರ್ಮವೂ ಬೋಧಿಸಿಲ್ಲ ನಾವು ಎಲ್ಲರೂ ಭಾರತೀಯರು. ಭಾರತಾಂಬೆ ನಮ್ಮ ಮಾತೃಭೂಮಿ ಎನ್ನುತ್ತಾರೆ.

ಈ ದೇಶಪ್ರೇಮಿ ಕವಿ ವಿಶ್ವ ಭ್ರಾತೃತ್ವ ಪ್ರತಿಪಾದಿಸಿದ್ದಾರೆ **ಜಾತಿ ಜಾತಿಗಳಲ್ಲಿ ಒಡಕು ಹುಟ್ಟಿಸುವ ಮಾತನ್ನು ಆಡದಿರಿ ಎನ್ನುತ್ತಾರೆ. ಆಡಿದರೆ ಬಿಡದು ಕೇಡಿನ ಮಾರಿ. ಅದು ಅಡಗಿ ಕುಳಿತಿದೆ ಜೋಕೆ?** ಎಂದು ಎಚ್ಚರಿಸುತ್ತಾರೆ.

ಅದು ಇಂದಿಗೂ ಸತ್ಯದ ಮಾತು. ಈ ದೇಶಪ್ರೇಮಿ ಇಕ್ಬಾಲ್ ಏಪ್ರಿಲ್ ೨೧, ೧೯೩೮ರಂದು ಲಾಹೋರಿನಲ್ಲಿ ನಿಧನರಾದರು.

[ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ೧೯೮೭ರಲ್ಲಿ ಪ್ರಕಟಿಸಿದ ರಾಷ್ಟ್ರ ಪ್ರೇಮಿ ಕವಿ ಇಕ್ಬಾಲ ಗ್ರಂಥದ ಸಹಾಯದಿಂದ ಪುನರ್‌ರಚಿತ ಲೇಖನವಿದು. ಮೂಲ ಲೇಖಕರು ಎಸ್. ಎಂ.ಎಚ್.ಬರ್ನಿ ಹರ್‍ಯಾಣ ರಾಜ್ಯಪಾಲರು. ಅನುವಾದ ಕೋ.ಚೆನ್ನಬಸಪ್ಪ].

@ KTBS NOT TO BE REPUBLISHED

ಓದಿ –ತಿಳಿ

ನೆಚ್ಚಿನ–ಇಷ್ಟವಾದ, ಸುವರ್ಣ–ಚಿನ್ನ, ಬಂಗಾರ, ಉನ್ನತ–ಹೆಚ್ಚಿನ, ಚಿರಂತನ–ಶಾಶ್ವತ, ಸ್ತುತಿ–ಹೊಗಳಿಕೆ ಆಯುಷ್ಯ–ಆಯಸ್ಸು, ಸಾಮರಸ್ಯ–ಹೊಂದಾಣಿಕೆ, ಜಗ–ಪ್ರಪಂಚ ವಿಶ್ವ, ಬನ–ಕಾಡು, ವನ, ಉಲಿ–ಕೂಗು. ಒಡಕು–ಭೇದ. ನಿಧನ–ಮರಣ.

ಗಮನಿಸಿ– ತಿಳಿ

ಆನಂದ ಬಾಷ್ಪ–ಸಂತೋಷದ ಕಣ್ಣೀರು. ತತ್ವಜ್ಞಾನಿ–ತತ್ವಗಳನ್ನು ಬಲ್ಲವನು, ದಾರ್ಶನಿಕ, ಮೆಟ್ರಿಕ್ಯುಲೇಷನ್–೧೦ನೇ ತರಗತಿ. ಕ್ಯಾಂಬ್ರಿಜ್–ಇಂಗ್ಲೆಂಡಿನ ಸುಪ್ರಸಿದ್ಧ ವಿಶ್ವವಿದ್ಯಾಲಯ, ಹೈಕೋರ್ಟ್–ಉಚ್ಚ ನ್ಯಾಯಾಲಯ, ಲಾಹೋರ್–ಈಗಿನ ಪಾಕಿಸ್ತಾನದಲ್ಲಿರುವ ನಗರ, ವಿಶ್ವಭ್ರಾತೃತ್ವ–ಪ್ರಪಂಚದ ಜನರೆಲ್ಲರು ಸಹೋದರರು ಎಂಬ ಭಾವನೆ.

ಅಭ್ಯಾಸ

ಅ. ಕೆಳಗಿನ ಪ್ರಶ್ನೆಗಳಿಗೆ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿರಿ.

೧. 'ಸಾರೆ ಜಹಾಂಸೆ ಅಚ್ಛಾ' ಕವಿತೆಯನ್ನು ಕೇಳಿ ಆನಂದಭಾಷ್ಪ ಸುರಿಸಿದವರು ಯಾರು?

೨. ಷೇಕ್ ಅತಾ ಮಹಮದ್ ಕವಿ ಇಕ್ಬಾಲರಿಗೆ ಯಾವುದಕ್ಕೆ ಸಹಾಯ ಮಾಡಿದರು?

೩. ಕವಿ ಇಕ್ಬಾಲರು ಉನ್ನತ ಶಿಕ್ಷಣಕ್ಕಾಗಿ ಯಾವ ಯಾವ ದೇಶಗಳಿಗೆ ಹೋದರು?

೪. ಭರತ ಭೂಮಿಯ ಭದ್ರಕೋಟೆ ಯಾವುದು?

೫. ಕವಿ ಇಕ್ಬಾಲರು ಮಕ್ಕಳಿಗಾಗಿ ಬರೆದ ಕವಿತೆ ಯಾವುದು?

೬. ಕವಿಗೆ ಎಂದೆಂದಿಗೂ ಯಾವ ಚಿಂತನೆ ಇದೆ ಎಂದು ಹೇಳಿದ್ದಾರೆ?

೭. ಕವಿ ಇಕ್ಬಾಲರು ಪ್ರತಿ ಪಾದಿಸಿದ ತತ್ವ ಯಾವುದು?

೮. ಕವಿ ಇಕ್ಬಾಲರು ಎಲ್ಲಿ ನಿಧನರಾದರು?

ಆ. ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿ.

೧. ದೇಶಪ್ರೇಮಿ ಕವಿ ಇಕ್ಬಾಲ ಬರೆದ ಕೃತಿಗಳು ಯಾವುವು?

೨. ಕವಿ ಇಕ್ಬಾಲರು ಬಾಂಗೆದಿರಾ ಕವನ ಸಂಗ್ರಹದ ಪದ್ಯದಲ್ಲಿ ಹಿಮಾಲಯವನ್ನು ಹೇಗೆ ಬಣ್ಣಿಸಿದ್ದಾರೆ?

೩. ಧರ್ಮ ಮತ್ತು ಮಾತೃ ಭೂಮಿಯ ಬಗೆಗೆ ಕವಿಯ ಅನಿಸಿಕೆಯೇನು?

ಇ. ಈ ಕೆಳಗಿನ ಮಾತುಗಳ ಅರ್ಥವನ್ನು ಬರೆಯಿರಿ.

೧. ಓ ! ಹಿಮಾಲಯ
ಭರತ ಭೂಮಿಯ ಭದ್ರಕೋಟೆ ನೀನು ।
ಆಕಾಶ ಬಗ್ಗಿಹುದು ನಿನ್ನ ಹಣೆ ಮುತ್ತಿಡಲು ।

೨. ಯಾವ ಧರ್ಮವೂ ಬೋಧಿಸಿಲ್ಲ ಪರಸ್ಪರ ದ್ವೇಷವನು ।
ನಾವು ಎಲ್ಲ ಭಾರತೀಯರೊಂದೆ.

ಈ. ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧. ದೇಶಪ್ರೇಮಿ ಇಕ್ಬಾಲರ ವಿದ್ಯಾಭ್ಯಾಸವನ್ನು ವಿವರಿಸಿ.

೨. ಕವಿ ತಾಯ್ನಾಡಿನ ಪ್ರೀತಿಯನ್ನು ಹೇಗೆ ವರ್ಣಿಸಿದ್ದಾರೆ ?

@ KTBS NOT TO BE REPUBLISHED

ಉ. ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.

೧. ______________ ಇಕ್ಬಾಲರಿಗೆ ಇಂಗ್ಲಿಷ್ ಭಾಷೆ ಕಲಿಸಿದರು.

೨. ಲಾಹೋರಿನ ______________ ನಲ್ಲಿ ವಕೀಲರಾಗಿ ಸೇವೆ ಸಲ್ಲಿಸಿದರು.

೩. ಇಕ್ಬಾಲರ ಮೊಟ್ಟ ಮೊದಲ ಕವನ ಸಂಗ್ರಹ ______________

೪. ಜಾತಿ ಜಾತಿಗಳಲ್ಲಿ ______________ ಹುಟ್ಟಿಸುವ ಮಾತನ್ನು ಆಡದಿರಿ.

ಊ. 'ಅ' ಪಟ್ಟಿಯ ಪದಗಳಿಗೆ 'ಬ' ಪಟ್ಟಿಯ ಪದಗಳನ್ನು ಹೊಂದಿಸಿ ಬರೆಯಿರಿ.

	ಅ	ಬ	
೧.	ಷೇಕ್ ನೂರ್ ಮಹಮದ್	ಇಕ್ಬಾಲರ ಗುರು	______________
೨.	ಮೀರ ಹಸನ್	ಇಕ್ಬಾಲರ ಅಣ್ಣ	______________
೩.	ಇಕ್ಬಾಲ ಮಹ್ಮದ್	ಇಕ್ಬಾಲರ ತಂದೆ	______________
೪.	ಷೇಕ್ ಅತಾ ಮಹಮದ್	ದೇಶಪ್ರೇಮಿ ಕವಿ	______________

ಅಭ್ಯಾಸ ಚಟುವಟಿಕೆ

ಅ. 'ಸಾರೆ ಜಹಾಂಸೆ ಅಚ್ಛಾ' ಈ ದೇಶಭಕ್ತಿ ಗೀತೆಯ ಧ್ವನಿಸುರುಳಿ ಕೇಳಿ ಆನಂದಿಸಿ.

ಆ. ರವೀಂದ್ರನಾಥ ಠಾಕೂರ, ಬಂಕಿಮಚಂದ್ರ ಚಟರ್ಜಿ, ಕುವೆಂಪು ಮೊದಲಾದ ಕವಿಗಳ ಚಿತ್ರ ಸಂಗ್ರಹ ಮಾಡಿರಿ.

ಭಾಷಾಭ್ಯಾಸ

ಅ. ಕೆಳಗಿನ ಪದಗಳನ್ನು ಸ್ವಂತ ವ್ಯಾಕದಲ್ಲಿ ಬಳಸಿ ಬರೆಯಿರಿ.

೧. ಆನಂದ ಭಾಷ್ಪ : ______________________________

೨. ದೇಶ ಪ್ರೇಮಿ : ______________________________

೩. ಭದ್ರಕೋಟೆ : ______________________________

೪. ಮಾತೃಭೂಮಿ : ______________________________

ಆ. ಟಿಪ್ಪಣಿ ಬರೆಯಿರಿ.

೧. ಹಿಮಾಲಯ

೨. ಗಂಗಾನದಿ

೩. ಭಾತೃತ್ವ

@KTBS NOT TO BE REPUBLISHED

ಇ. ಕೆಳಗಿನ ಪದಗಳಿಗೆ ಸಮನಾರ್ಥಕ ಪದಗಳನ್ನು ಬರೆಯಿರಿ.

ಮಾದರಿ : ಭೂಮಿ–ಪೃಥ್ವಿ–ಬುವಿ–ಇಳೆ–ವಸುಂಧರೆ–ಧರೆ–ನೆಲ

ಅ. ಜಗ ______________________

ಆ. ರವಿ ______________________

ಇ. ಆಕಾಶ ______________________

ಈ. ಮಾತೃ ______________________

ಈ.

೧) ರಹೀಮ ಪುಸ್ತಕ ಓದುತ್ತಿದ್ದಾನೆ.

೨) ಬೇಲೂರಿನಲ್ಲಿ ಸುಂದರ ದೇವಾಲಯವಿದೆ.

೩) ಮೇಜಿನ ಮೇಲೆ ಹೂಗುಚ್ಛವಿದೆ.

ಈ ವಾಕ್ಯಗಳಲ್ಲಿ ಗೆರೆ ಎಳೆದ ಪದಗಳು ವ್ಯಕ್ತಿ, ಸ್ಥಳ ಹಾಗೂ ವಸ್ತುವಿನ ಹೆಸರನ್ನು ಸೂಚಿಸುತ್ತವೆ. ಇಂತಹ ಪದಗಳನ್ನು 'ನಾಮಪದ'ಗಳು ಎನ್ನುವರು.

ಉ.

೧. ಪರ್ವತ, ಶಾಲೆ, ನಗರ, ನದಿ, ಹಳ್ಳಿ – ಇವು ರೂಢಿಯಿಂದ ಬಂದ ಹೆಸರುಗಳು. ಆದುದರಿಂದ ಇವು ರೂಢನಾಮಗಳು.

೨. ರಮೇಶ, ರುಕ್ಮಿಣಿ, ಬೆಂಗಳೂರು, ಹಿಮಾಲಯ ಇವು ಇಟ್ಟ ಹೆಸರುಗಳು. ಆದುದರಿಂದ ಇವು ಅಂಕಿತನಾಮಗಳು.

೩. ವ್ಯಾಪಾರಿ, ಶಿಕ್ಷಕ, ವೈದ್ಯ– ಇವು ಅರ್ಥಕ್ಕೆ ಅನುಗುಣವಾಗಿ ಬರುವ ಹೆಸರುಗಳು. ಅದುದರಿಂದ ಇವು ಅನ್ವರ್ಥಕ ನಾಮಗಳು

ಊ. ಕೆಳಗಿನ ಪದಗಳಲ್ಲಿ ರೂಢ, ಅಂಕಿತ, ಅನ್ವರ್ಥನಾಮ ಪದಗಳನ್ನು ವಿಂಗಡಿಸಿ ಬರೆಯಿರಿ.

ಕೃಷ್ಣ, ಕೋಲಾರ, ಪಟ್ಟಣ, ಮರ, ಬಂಡೆಗಲ್ಲು, ಮೂಕ, ಕಾಡು, ವಿದ್ವಾಂಸ, ಕಾವೇರಿ ನದಿ, ಹೊಳೆ, ಕುರುಡ, ಮಾರ್ಗದರ್ಶಕ

ಭಾಷಾ ಚಟುವಟಿಕೆ

ಕೆಳಗೆ ಕಾಣಿಸಿದ ಕವಿಗಳ ದೇಶಭಕ್ತಿ ಗೀತೆಗಳನ್ನು ಸಂಗ್ರಹ ಮಾಡಿ ಒಂದು ಪುಸ್ತಕದಲ್ಲಿ ಬರೆಯಿರಿ.

೧) ಕಯ್ಯಾರ ಕಿಞ್ಞಣ್ಣ ರೈ

೨) ಕುವೆಂಪು

೩) ಅಂಬಿಕಾತನಯದತ್ತ

೪) ಚೆನ್ನವೀರ ಕಣವಿ

NOT TO BE REPUBLISHED © KTBS

ಪಾಠ–೬

ನಿನ್ನಲ್ಲೂ ಅದ್ಭುತ ಶಕ್ತಿಯಿದೆ

ಪ್ರವೇಶ :

ನೀವು ರಾಮಾಯಣದ ಕಥೆ ಕೇಳಿದ್ದೀರಾ? ಸಂಕ್ಷಿಪ್ತವಾಗಿ ಜ್ಞಾಪಿಸಿಕೊಳ್ಳಿ. ರಾಮ, ಸೀತೆ, ಲಕ್ಷ್ಮಣ, ಹನುಮ, ರಾವಣ, ಲಂಕೆ, ಅಯೋಧ್ಯೆ, ಕಾಡು. ಎಲ್ಲವೂ ನೆನಪಾಯಿತೆ? ಹನುಮ ಯಾರು ? ಅವನ ರೂಪ ಹೇಗಿತ್ತು.? ಅಂತಹ ಹನುಮ ಸಮುದ್ರ ಜಿಗಿದು ಸೀತೆ ಮಾತೆಯನು ಹುಡುಕುವ ಕೆಲಸ ಮಾಡಿದ. ನಮ್ಮ ಮನಸ್ಸು ಬಹಳ ವಿಚಿತ್ರ. ಬೇಕಾದುದನ್ನು ಅದು ಸಾಧಿಸಲು ಪ್ರಯತ್ನ ಪಡುತ್ತದೆ. ಆದರೆ ಅದಕ್ಕೆ ಉತ್ತೇಜನಕಾರಿ ವಾತಾವರಣ ಬೇಕು ಅಷ್ಟೇ!. ಅಂತಹ ಶಕ್ತಿಯನ್ನು ಸಾಧಾರಣನೂ ಪಡೆದಾಗ ಹನುಮನಾಗುತ್ತಾನೆ. ನರ ನಾರಾಯಣನಾಗುತ್ತಾನೆ. ಈ ಬಗ್ಗೆ ಯೋಚಿಸಿ. ತರಗತಿಯಲ್ಲಿ ಚರ್ಚಿಸಿರಿ.



(ಸಂಪಾತಿ ಪಕ್ಷಿಯು ಮಲಯಾದ್ರಿ ಪರ್ವತದಿಂದ ಕಪಿವೀರರಾದ ಜಾಂಬವ, ಹನುಮ, ಅಂಗದ ಮೊದಲಾದವರನ್ನು ತನ್ನ ರೆಕ್ಕೆಯ ಮೇಲೆ ಕುಳ್ಳಿರಿಸಿಕೊಂಡು ದಕ್ಷಿಣ ದಿಕ್ಕಿಗೆ ಹಾರಿತು. ಸಮುದ್ರದ ಬಳಿ ಇಳುಹಿತು. ರಾವಣನ ಲಂಕೆ ಈ ಸಮುದ್ರದ ಮಧ್ಯದಲ್ಲಿದೆ. ಸೀತಾಮಾತೆಯನ್ನು ಹೊತ್ತೊಯ್ದ ರಾವಣ ಇಲ್ಲಿಯೇ ಆಳುತ್ತಿದ್ದಾನೆ ಎಂದು ಹೇಳಿ ಸಂಪಾತಿ ಅಲ್ಲಿಂದ ಹಾರಿ ಹೋಯಿತು. ಹನುಮ, ಜಾಂಬವ, ಅಂಗದ ಮೊದಲಾದ ಕಪಿವೀರರು ಸಾಗರವನ್ನು ನೋಡುತ್ತಿದ್ದಾರೆ. ಹುಣ್ಣಿಮೆಯ ಬೆಳದಿಂಗಳು ಕಡಲನ್ನು ಕೆರಳಿಸಿದೆ ಆಳೆತ್ತರ ತೆರೆಗಳು ಏಳುತ್ತಿವೆ)

ಕಣ್ಣು ನಿಲುಕುವವರೆಗೂ ಕಾಣುತ್ತಿದೆ ನೀರೇ ನೀರು. ನೀಲ ಸಾಗರ. ಆಕಾಶವೂ ನೀಲಿ. ಸಮುದ್ರವೂ ನೀಲಿ. ಬೆಳ್ಳಂಬೆಳದಿಂಗಳು ಸಹ ನೀಲಿಯಂತೆ ಭಾಸವಾಗುತ್ತಿತ್ತು. ಅದರ ಮಧ್ಯೆ ಪುಟಿದೇಳುವ ಆನೆಯಾಕಾರದ ಅಲೆಗಳು ದಂಡೆಗೆ ಅಪ್ಪಳಿಸುತ್ತಿವೆ. ಅಬ್ಬಾ ! ಏನಿದರ ರುದ್ರ ನರ್ತನ ! ಏನಿದರ ಭಯಂಕರ ಧ್ವನಿ! ಭೀತಿ ಹುಟ್ಟಿಸುತ್ತಿತ್ತು.

ಕಪಿ ವೀರರು ಲಂಕೆಗೆ ಹಾರಿ ಸೀತಾಮಾತೆಯನ್ನು ಕಾಣಬೇಕೆಂಬ ಉತ್ಸಾಹದಿಂದ ಬಂದಿದ್ದರು. ಆದರೆ ಭಯಾನಕ ಕಡಲು ಕಂಡರು. ಈ ಸಮುದ್ರ ಈಜಲು ಸಾಧ್ಯವಿಲ್ಲ. ಹಾರಲು ಸಾಧ್ಯವಿಲ್ಲ. ಅವರಿಗೆ ದಿಕ್ಕುತೋಚದಾಯಿತು. ಮುಂದಿನ ದಾರಿ ಯೋಚಿಸುತ್ತಾ ವಿಶ್ರಮಿಸಿದರು. ಬೆಳಕು ಹರಿಯಿತು.

ಅರುಣೋದಯ. ಕಪಿಗಳೆಲ್ಲ ದಿನಚರಿ ಮುಗಿಸಿ ಫಲಾಹಾರ ಮಾಡಿದವು. ಮತ್ತೆ ಸಮುದ್ರದ ಬಳಿಗೆ ಬಂದವು. ಜಾಂಬವಂತನು, ಆಹಾ ! ಕಡಲು ಶಾಂತವಾಗಿದೆ. ಆದರೆ ಲಂಕೆಯೇ ಕಾಣದು. ದಕ್ಷಿಣ ದಿಕ್ಕಿಗೆ ಲಂಕೆ ಇದೆ ಎಂಬ ಕಲ್ಪನೆ ಬಿಟ್ಟರೆ, ಬೇರೆನೂ ತಿಳಿಯದು. ಹೇಗೆ ಹೋಗುವುದು? ಎಂದು ಯೋಚಿಸಹತ್ತಿದ. ಹನುಮ ಸಾಗರವನ್ನು ದಿಟ್ಟಿಸಿ ನೋಡಿದ. ನಿರಾಸೆ ಕವಿಯಿತು. ಅಲ್ಲಿಂದ ಮುಂದೆ ನಡೆದು ಒಂದು ಕೋಡುಗಲ್ಲನ್ನು ಏರಿ ಚಿಂತಿತನಾದನು.

© KTBS NOT TO BE REPUBLISHED

ಇತ್ತ ಕಪಿಗಳು ಸೇರಿದವು. ಸಮುದ್ರವನ್ನು ಜಿಗಿಯಲು ತಮಗಿರುವ ಶಕ್ತಿ-ಸಾಮರ್ಥ್ಯವನ್ನು ಹೇಳ ತೊಡಗಿದವು. ನಾನು ಹತ್ತು ಯೋಜನ ಜಿಗಿಯ ಬಲ್ಲೆನೆಂದು ಮರಿಕಪಿಯೊಂದು ಹೇಳಿದರೆ, ಇನ್ನೊಂದು ಕಪಿ ಮೂವತ್ತು ಯೋಜನ ಹಾರಬಲ್ಲೆ ಎಂದಿತು. ಮಗದೊಂದು ನಲವತ್ತು ಯೋಜನ ಎಂದಿತು. ಅಂಗದ ಹಾಗೂ ಜಾಂಬವರಿಗೆ ಕಪಿಗಳ ಮಾತುಗಳನ್ನು ಕೇಳಿ ಹೆಮ್ಮೆಯೆನಿಸಿತು. ಆ ಕಠಿಣ ಪ್ರಸಂಗದಲ್ಲಿಯೂ ಅವರಾಡುವ ಮಾತುಗಳು ಆಶಾದಾಯಕವಾಗಿದ್ದವು. ಆದರೆ ಲಂಕೆಗೆ ಹೋಗಲು ಈ ಸಾಮರ್ಥ್ಯ ಸಾಲದು ಎಂಬ ಅರಿವು ಅವರಿಗಿತ್ತು.

ಅವರೆಲ್ಲರೂ ಸೇರಿ ಹನುಮನ ಹತ್ತಿರ ಬಂದರು "ಹನುಮ ಸಮುದ್ರ ಜಿಗಿಯುವ ಬದಲು ಇಲ್ಲಿ ಏಕೆ ಸುಮ್ಮನೆ ಕುಳಿತಿರುವೆ" ಎಂದಾಗ "ಜಾಂಬವಂತರೆ ನಾನೊಂದು ಕಪಿ, ಚಿಕ್ಕವನು. ಟೊಂಗೆಯಿಂದ ಟೊಂಗೆಗೆ ಹಾರಬಲ್ಲೆ, ಮರದಿಂದ ಮರಕ್ಕೆ ಜಿಗಿಯಬಹುದು. ಆದರೆ ಈ ಮಹಾಸಾಗರವನ್ನು ನಾನು ಹೇಗೆ ಹಾರಬಲ್ಲೆ. ಗೇಲಿ ಮಾಡದಿರಿ."

"ಹನುಮ, ನೀನು ಚಿಕ್ಕವನಾದರೂ ನೀನೊಬ್ಬ ಕಪಿರಾಜನ ಮಗ. ನಿನ್ನಪ್ಪ ಬಹಳ ಶೂರ" ಎಂದ ಅಂಗದ.

"ಅಪ್ಪ ರಾಜನಾದ ಮಾತ್ರಕ್ಕೆ ಮಗನಿಗೆ ಆ ಶಕ್ತಿ ಇರಲು ಸಾಧ್ಯವೇ? ನನ್ನ ಶಕ್ತಿಯನ್ನು ನಾನು ಬಲ್ಲೆ.

ಅಂಗದರೆ, ನಾನೊಂದು ಕೋತಿ. ಹಲವು ಸ್ನೇಹಿತರೊಡನೆ ಸೇರಿ ಅಲ್ಲಿಂದ ಇಲ್ಲಿಗೆ, ಇಲ್ಲಿಂದ ಅಲ್ಲಿಗೆ ಜಿಗಿದಿರಬಹುದು. ಮರವನ್ನು ಏರಿ ಕೊಂಬೆಯ ತುದಿಯಲ್ಲಿಯ ಹಣ್ಣನ್ನು ಕದ್ದು ತಿಂದಿರಬಹುದು. ಹಲವರನ್ನು ಬಾಲಬೀಸಿ ಹೊಡೆದಿರಬಹುದು. ಕೆಲವರನ್ನು ಕಂಡು ಅಣಕಿಸಿ ದಕ್ಕಿಸಿಕೊಂಡಿರಬಹುದು. ಇಷ್ಟು ಮಾತ್ರಕ್ಕೆ ನಾನು ಶಕ್ತಿವಂತನೆಂದು ಭಾವಿಸುವುದು ಸರಿಯಲ್ಲ."

"ಹನುಮ, ನಿನ್ನ ಶಕ್ತಿ ಸಾಮರ್ಥ್ಯ ನಿನಗಿಂತ ನಾವು ಚೆನ್ನಾಗಿ ಬಲ್ಲೆವು. ನೀನು ಮಗುವಾಗಿದ್ದಾಗ ಅರುಣನನ್ನು ಕೆಂಪು ಹಣ್ಣೆಂದು ಭಾವಿಸಿದೆ. ಅದನ್ನು ತಿನ್ನಲು ಆಕಾಶಕ್ಕೆ ಜಿಗಿದೆ. ಸೂರ್ಯನ ನೆತ್ತಿಗೆ ಹಾರಿದ್ದೆ. ನಿನಗೆ ಬಹಳ ಶಕ್ತಿಯಿದೆ. ನೀನು ಮನಸ್ಸು ಮಾಡಿದರೆ ಸಪ್ತ ಸಾಗರವನ್ನು ಈಜಬಲ್ಲೆ. ಹಿಮಾಲಯವನ್ನೆತ್ತಿ ಕುಕ್ಕಬಲ್ಲೆ. ಪಾತಾಳವನ್ನು ಕಲಕಬಲ್ಲೆ. ನಿನಗೆ ಈ ಚಿಕ್ಕ ಸಮುದ್ರ ಸಮಸ್ಯೆಯಾಗದು."

"ಹಿರಿಯರಾದ ಜಾಂಬವರೇ ! ನಾನು ಮಗುವಾಗಿದ್ದಾಗ ಅರುಣನನ್ನು ಕೆಂಪು ಹಣ್ಣೆಂದು ಬಗೆದು ಆಕಾಶಕ್ಕೆ ಹಾರಿದ್ದು ನಿಜ! ಆದರೆ ಸಾಧಿಸಿದ್ದೇನು? ಇಂದ್ರನಿಂದ ಹೊಡೆತ ತಿಂದು ಭೂಮಿಗೆ ಬೀಳಲಿಲ್ಲವೆ? ಇಂದು ಎಲ್ಲಿದೆ ನನಗೆ ಅಂದಿನ ಶಕ್ತಿ? ಸುಮ್ಮನೆ ಹೊಗಳಬೇಡಿ. ನನ್ನಿಂದ ಸಮುದ್ರ ಉಲ್ಲಂಘಿಸುವುದು ಆಗದು. ನಾನೊಬ್ಬ ಸಾಮಾನ್ಯ."

"ಆಂಜನೇಯ, ನಿನ್ನ ಶಕ್ತಿ ನಿನಗೆ ತಿಳಿಯದು. ಸೂರ್ಯದೇವನಿಂದ ಶಸ್ತ್ರ ವಿದ್ಯೆ ಕಲಿತೆ. ಗುರು ದಕ್ಷಿಣೆಯಲ್ಲಿ ಅವನ ಮಗ ಸುಗ್ರೀವನ ಪ್ರಾಣ ರಕ್ಷಣೆ ಮಾಡಿದೆ. ಋಷ್ಯಮೂಕ ಪರ್ವತದಲ್ಲಿ ಶ್ರೀ ರಾಮನನ್ನು ಸಂಧಿಸಿ ಮೈತ್ರಿ ಸ್ಥಾಪಿಸಿದೆ. ಶ್ರೀರಾಮನ ಆಶೀರ್ವಾದ ನಿನಗಿದೆ."

© KTBS NOT TO BE REPUBLISHED

"ವರ್ಣನೆ ಸಾಕು ಮಾಡಿ ಅಂಗದರೆ. ಆಶೀರ್ವಾದಮಾತ್ರಕ್ಕೆ ಎಲ್ಲ ಸಾಧನೆ ಸಾಧ್ಯವಿಲ್ಲ. ನೀವೇಕೆ ಪ್ರಯತ್ನಿಸಬಾರದು? ತಮಗೂ ದೇವರ ಆಶೀರ್ವಾದವಿದೆ."

ಸತ್ಯ. ಖಂಡಿತ ನಮಗೆಲ್ಲ ದೇವರ ಆಶೀರ್ವಾದವಿದೆ. ಆದರೆ ಆ ಕೆಲಸಕ್ಕೆ ಬೇಕಾದ ದೈಹಿಕ ಶಕ್ತಿ ಇಲ್ಲ. ಅದಕ್ಕಿಂತ ಹೆಚ್ಚಾಗಿ ಮಾನಸಿಕ ಸಾಮರ್ಥ್ಯ ಬೇಕು. ಅದಿಲ್ಲ ನಮ್ಮಲ್ಲಿ"

"ಮಾನಸಿಕ ಸಾಮರ್ಥ್ಯ ಏನು ಹಾಗೆಂದರೆ?" ಹನುಮ ಕೇಳಿದ.

"ಹುಟ್ಟಿನಿಂದ ಎಲ್ಲರಿಗೂ ಮಾನಸಿಕ ಸಾಮರ್ಥ್ಯವಿರುತ್ತದೆ. ಅದನ್ನು ಕೆಲವರು ಬೆಳೆಸಿಕೊಳ್ಳುತ್ತಾರೆ ದುಡಿಸಿಕೊಳ್ಳುತ್ತಾರೆ. ಹೊಸಹೊಸ ಪ್ರಯೋಗಗಳಿಗೆ ಒಡ್ಡಿಕೊಂಡು ಗಟ್ಟಿಗೊಳಿಸಿಕೊಳ್ಳುತ್ತಾರೆ. ನಿನಗೆ ಆ ಸಾಧನೆ ಇದೆ. ಆತ್ಮ ವಿಶ್ವಾಸ ಹೊಂದು. ನಿನ್ನಲ್ಲಿ ಶಕ್ತಿಯಿದೆ. ಆದಕಾರಣ ಕೋಡುಗಲ್ಲಿನ ಮೇಲೆ ಕುಳಿತು ಯೋಚನೆ ಮಾಡುತ್ತಿರುವೆ"

"ಅದು ನಿರಾಶೆಯ ಸೂಚಕವಲ್ಲವೇ?"

"ಹುಚ್ಚಪ್ಪ, ಅದು ನಿರಾಶೆಯಲ್ಲ ಚಿಂತನೆ ! ನೀನಾರೆಂಬುದನ್ನು ಅರಿತುಕೋ. ನಿನ್ನಲ್ಲಿ ಪರಮಶಕ್ತಿಯಿದೆ. ಒಮ್ಮೆ ಮೈಕೊಡವಿ ಸೆಟೆದು ನಿಲ್ಲು. ನನ್ನಲ್ಲೂ ಸಮುದ್ರ ಉಲ್ಲಂಘಿಸುವ ಶಕ್ತಿಯಿದೆ ಎಂದು ಒಮ್ಮೆ ಕೂಗು. ದೊಡ್ಡ ಹೆಜ್ಜೆಯಿಡು. ನೀನು ಬೆಳೆಯುವೆ. ಶ್ರೀರಾಮನ ಆದೇಶ ನೆನಪಿಸಿಕೊ. ಸೀತಾಮಾತೆಯನ್ನು ಕಾಣುವ ಹಂಬಲ ತೀವ್ರವಾಗಲಿ. ಜಗಜ್ಜನನಿಗೆ ಮಹಾ ಮಾಂಗಲ್ಯ ಮುದ್ರಿಕೆ ಕೊಡುವುದು ಬೇಡವೇ? ಇದು ನಿನ್ನ ಕರ್ತವ್ಯವಲ್ಲವೇ? ನಿನ್ನ ಬಗ್ಗೆ ಅವಿಶ್ವಾಸಬೇಡ" ಎಂದು ಅಂಗದ ಉತ್ತೇಜನ ನೀಡಿದ.

"ಆಂಜನೇಯ, ನೀನು ಮಾನಸಿಕವಾಗಿ ಸಿದ್ಧನಾಗು, ನೀನು ಕಿಂಕರ ಅಲ್ಲ. ಶಂಕರ. ಏಳು ಎದ್ದೇಳು ಜಾಗೃತನಾಗು. ಅಂತರಂಗದ ಕೀಳರಿಮೆ ತೊರೆ. ನೋಡು ಆಗಸದೆಡೆಗೆ, ಆ ನಿನ್ನ ಅರುಣ ಕ್ಷಣ ಕ್ಷಣಕ್ಕೂ ಬೆಳೆದು ಸೂರ್ಯನಾಗಿದ್ದಾನೆ. ಅವನ ಪ್ರಖರತೆ ಗಮನಿಸು. ಸಾವಿರಪಟ್ಟು ಹೆಚ್ಚಿಸಿದ್ದಾನೆ. ನೀನೋ ಬಲಶಾಲಿ ಮನಸ್ಸಿದ್ದರೆ ಮಾರ್ಗವಿದೆ. ಏಳು ಎಚ್ಚರಾಗು" ಎಂದು ಜಾಂಬವನು ತಿಳಿ ಹೇಳಿದನು.

ಆಗ ಹನುಮಂತನು " ಹೌದು! ಹೌದು ! ಕರ್ತವ್ಯಕ್ಕೆ ನನ್ನನ್ನು ಎಚ್ಚರಿಸಿದಿರಿ. ಧನ್ಯವಾದ". ಎಂದು ಎದ್ದು ನಿಂತನು. ಶ್ರೀರಾಮನನನ್ನು ನೆನಪಿಸಿಕೊಂಡನು. ವಾನರ ನಾಯಕರನ್ನು ವಂದಿಸಿದ. ನನ್ನಲ್ಲೂ ಶಕ್ತಿಯಿದೆ ಎಂದು ವಿಶ್ವಾಸದಿಂದ ಮನಸ್ಸಿನಲ್ಲಿ ಹೇಳಿಕೊಂಡನು. ನೋಡು ನೋಡುವಷ್ಟರಲ್ಲಿ ತ್ರಿವಿಕ್ರಮನಾಗಿ ಬೆಳೆದ. ಅವನ ಬಾಲ ಬೆಟ್ಟದಂತೆ ಹಬ್ಬಿತು. ಅದರ ಮೇಲೆ ಕುಳಿತು. ಆ ಮಹಾಸಾಗರ ನೋಡಿದ. ಅದೊಂದು ಪುಟ್ಟ ಸರೋವರದಂತೆ ಕಂಡಿತು. ಅದರಲ್ಲೊಂದು ಲಂಕೆ ಚಿಕ್ಕ ನಡುಗಡ್ಡೆ, ಸುತ್ತಲೂ ದಟ್ಟ ಕಾಡು. ಆ ಅರಣ್ಯದಲ್ಲಿ ರಾಕ್ಷಸಿಯರ ನಡುವೆ ತಾಯಿ ಸೀತಾದೇವಿಯನ್ನು ನೋಡಿದ. ತಕ್ಷಣ ಹೋ ಎಂದು ಕೂಗಿದ. ಅಮ್ಮ ನಾನು ಬಂದೆ ಎಂದು ಸಾಗರ ಉಲ್ಲಂಘನೆಗಾಗಿ ಜಿಗಿದ.

ಇದನ್ನು ಕಂಡು ಅಂಗದ ಜಾಂಬವರು ಜೈ ಶ್ರೀರಾಮ ಎಂದರು. "ಜಯ ಹನುಮಾನ್" ಎಂದು ಜಯಕಾರ ಹಾಕಿದರು.

© KTBS NOT TO BE REPUBLISHED

ಓದಿ –ತಿಳಿ

ದಂಡೆ–ದಡ, ತೀರ, ಮಿಗಿಲು–ಹೆಚ್ಚು, ಕಡಲು–ಸಮುದ್ರ, ಕೆರಳಿದ–ಸಿಟ್ಟಿಗೆದ್ದ, ತಡಿ–ದಡ, ದಿಟ್ಟಿಸಿ–ವೀಕ್ಷಿಸಿ, ಆಶಾದಾಯಕ–ಭರವಸೆಯಿಂದ ಕೂಡಿದ, ಟೊಂಗೆ–ಕೊಂಬೆ, ದಕ್ಕಿಸಿ–ಪಡೆದು, ಬಲ್ಲೆವು–ತಿಳಿದಿದ್ದೇವೆ, ಅರುಣ–ಸೂರ್ಯ, ಅಮಿತ–ಮಿತಿಯಿಲ್ಲದ, ಉಲ್ಲಂಘನೆ–ಹಾರು, ದಾಟು, ವರ್ಣನೆ–ಹೊಗಳಿಕೆ, ಬಣ್ಣನೆ, ಹಂಬಲ–ಆಸೆ, ಚಿಂತೆ ಜಗಜ್ಜನನಿ. ಲೋಕ ಮಾತೆ, ಕಿಂಕರ–ಸೇವಕ, ಅಂತರಂಗ–ಒಳಗಿನ, ಕೀಳರಿಮೆ–ಹೀನತನ.

ಗಮನಿಸಿ –ತಿಳಿ

ನಿಲುಕು–ಕಣ್ಣಿಗೆ ಕಾಣುವಷ್ಟು ದೂರ, ಜಾಂಬವಂತ–(ಕರಡಿ) ಇವನು ಕೃತಯುಗ, ತ್ರೇತಾಯುಗ, ದ್ವಾಪರಯುಗದಲ್ಲಿಯೂ ಇದ್ದನೆಂಬ ಪ್ರತೀತಿ. ಅಂಗದ–ವಾಲಿ ಮತ್ತು ತಾರೆಯ ಮಗ, ಹನುಮ–ಅಂಜನಾದೇವಿ ಮಗ, ರುದ್ರನರ್ತನ–ಭಯಂಕರ ಆರ್ಭಟ, ದಿಕ್ಕು ತೋಚದಾಯಿತು–ದಾರಿಕಾಣದಾಯಿತು, ಅರುಣೋದಯ– ಸೂರ್ಯೋದಯದ ಮೊದಲು ಪೂರ್ವ ದಿಕ್ಕಿನಲ್ಲಿ ಕೆಂಪು ಬೆಳಕು ಕಾಣಿಸುವುದು, ಯೋಜನ– ಸುಮಾರು ಒಂಬತ್ತು ಮೈಲು, ಮೈಕೊಡವು–ಧೈರ್ಯದಿಂದ ಮೇಲೇಳು, ಸಪ್ತಸಾಗರ–ಏಳು ಸಮುದ್ರಗಳು : ಲವಣ (ಉಪ್ಪು), ಇಕ್ಷು (ಕಬ್ಬಿನ ಹಾಲು), ಸುರ (ಮದ್ಯ), ಸರ್ಪಿಸ್ (ತುಪ್ಪ) ದಧಿ (ಮೊಸರು), ಕ್ಷೀರ (ಹಾಲು), ಜಲ (ನೀರು)., ಇಂದ್ರ–ದೇವಲೋಕದ ಒಡೆಯ.

@ KTBS NOT TO BE REPUBLISHED

ಅಭ್ಯಾಸ

ಅ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯ ಅಥವಾ ಪದದಲ್ಲಿ ಉತ್ತರಿಸಿರಿ.

೧. ನೀಲಿಯಂತೆ ಯಾವುವು ಭಾಸವಾಗುತ್ತಿದ್ದವು?

೨. ಕಪಿವೀರರು ಲಂಕೆಯಲ್ಲಿ ಯಾರನ್ನು ಕಾಣುವ ಉತ್ಸಾಹದಲ್ಲಿದ್ದರು?

೩. ಹನುಮಂತನು ಎಲ್ಲಿ ಕುಳಿತು ಚಿಂತಿಸುತ್ತಿದ್ದನು?

೪. ಮಗುವಾಗಿದ್ದಾಗ ಹನುಮನು ಅರುಣನನ್ನು ಏನೆಂದು ಭಾವಿಸಿದನು?

೫. ಆಂಜನೇಯನು ಸೂರ್ಯದೇವನಿಂದ ಯಾವ ವಿದ್ಯೆ ಕಲಿತನು?

೬. ಜಾಂಬವನು ಆಂಜನೇಯನಿಗೆ ಯಾವುದನ್ನು ತೊರೆಯುವಂತೆ ಹೇಳಿದನು?

೭. ಹನುಮನು ನೋಡು ನೋಡುವಷ್ಟರಲ್ಲಿ ಯಾವ ರೀತಿ ಬೆಳೆದನು?

೮. ಕಪಿಗಳು ಏನೆಂದು ಜಯಕಾರ ಮಾಡಿದವು?

ಆ. ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಸಮುದ್ರ ಅಲೆಗಳ ರುದ್ರ ನರ್ತನವನ್ನು ವರ್ಣಿಸಿರಿ.

೨. ಕಪಿಗಳು ತಮ್ಮ ಶಕ್ತಿ ಸಾಮರ್ಥ್ಯಗಳ ಬಗ್ಗೆ ನುಡಿದುದೇನು?

೩. ಅಂಗದನು ತನಗೆ ಏನಿಲ್ಲವೆಂದು ಅಸಹಾಯಕತೆ ವ್ಯಕ್ತ ಪಡಿಸಿದನು?

೪. ತ್ರಿವಿಕ್ರಮನಾಗಿ ಬೆಳೆದ ಹನುಮನಿಗೆ ಲಂಕೆ ಹೇಗೆ ಕಂಡಿತು?

ಇ. ಕೆಳಗಿನ ಪ್ರಶ್ನೆಗಳಿಗೆ ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಹನುಮಂತನು ತನ್ನ ಶಕ್ತಿ ಸಾಮರ್ಥ್ಯದ ಬಗ್ಗೆ ಅಂಗದನಿಗೆ ಹೇಳಿದ್ದೇನು?

೨. ಅಂಗದನು ಹನುಮಂತನಿಗೆ ಉತ್ತೇಜನ ನೀಡಿದ ರೀತಿಯನ್ನು ವಿವರಿಸಿ.

೩. ಜಾಂಬವಂತನು ಆಂಜನೇಯನಿಗೆ ತಿಳಿ ಹೇಳಿದ ರೀತಿ ವಿವರಿಸಿ.

ಈ. ಕೆಳಗಿನ ಮಾತುಗಳನ್ನು ಯಾರು ಯಾರಿಗೆ ಹೇಳಿದರು.

© KTBS NOT TO BE REPUBLISHED

೧. "ಹನುಮ ಸಮುದ್ರ ಜಿಗಿಯುವ ಬದಲು ಇಲ್ಲಿ ಏಕೆ ಸುಮ್ಮನೆ ಕುಳಿತಿರುವೆ".

ಯಾರು ಹೇಳಿದರು ______________________________

ಯಾರಿಗೆ ಹೇಳಿದರು ______________________________

೨. "ನಿನ್ನಲ್ಲಿ ಪರಮಶಕ್ತಿಯಿದೆ"

ಯಾರು ಹೇಳಿದರು ______________________________

ಯಾರಿಗೆ ಹೇಳಿದರು ______________________________

೩. "ಏಳು ಎದ್ದೇಳು ಜಾಗೃತನಾಗು"

ಯಾರು ಹೇಳಿದರು ______________________________

ಯಾರಿಗೆ ಹೇಳಿದರು ______________________________

ಉ. ಬಿಟ್ಟಿರುವ ಸ್ಥಳಗಳನ್ನು ತುಂಬಲು ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಿದೆ. ಅವುಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ.

೧. ಸಮುದ್ರದ ಮಧ್ಯದಲ್ಲಿರುವ ಲಂಕೆಯನ್ನು ಆಳುತ್ತಿದ್ದವನು ______________

ಅ. ರಾವಣ ಆ. ರಾಕ್ಷಸ ಇ. ಕುಂಭಕರ್ಣ ಈ. ಇಂದ್ರಜಿತು

೨. ಸಮುದ್ರದ ______________ ಧ್ವನಿ ಕೇಳಿ ಭಯಭೀತರಾದರು.

ಅ. ಕರ್ಕಶ ಧ್ವನಿ ಆ. ಭಯಂಕರ ಧ್ವನಿ ಇ. ಹುಲಿಧ್ವನಿ ಈ. ಕೋಗಿಲೆ ಧ್ವನಿ

೩. ಅಂಜನೇಯ ಋಷ್ಯಮೂಕ ಪರ್ವತದಲ್ಲಿ ಶ್ರೀರಾಮನನ್ನು ಸಂಧಿಸಿ ___________

ಅ. ದ್ವೇಷಸಾಧಿಸಿದ ಆ. ಪ್ರೀತಿಸಾಧಿಸಿದ ಇ. ಶಾಂತಿಸಾಧಿಸಿದ ಈ. ಮೈತ್ರಿಸಾಧಿಸಿದ

೪. ಜಗಜ್ಜನನಿಗೆ ಮಹಾ ______________ ಕೊಡುವುದು ಬೇಡವೇ? ಎಂದನು.

ಅ. ಚೂಡಾಮಣಿ ಆ. ಮುದ್ರೆಯುಂಗರ ಇ. ವಜ್ರದುಂಗರ ಈ. ಮಾಂಗಲ್ಯ

೫. ಹನುಮಂತನು ನನ್ನಲ್ಲೂ ____________ಯಿದೆ ಎಂದು ವಿಶ್ವಾಸದಿಂದ ಮನಸ್ಸಿನಲ್ಲಿ ಹೇಳಿಕೊಂಡ.

ಅ. ಶಕ್ತಿ ಆ. ಯುಕ್ತಿ ಇ. ಕೆಚ್ಚು ಈ. ಛಲ

ಊ. ಅ ಪಟ್ಟಿಯ ಪದಗಳಿಗೆ ಬ ಪಟ್ಟಿಯಲ್ಲಿರುವ ಪದಗಳನ್ನು ಸರಿಹೊಂದಿಸಿ ಬರೆಯಿರಿ.

	ಅ			ಬ	
೧.	ಆನೆಯಾಕಾರ	–	ಅ.	ಲಂಕೆ	________
೨.	ಕೆರಳಿದ	–	ಆ.	ಕಲಕಬಲ್ಲೆ	________
೩.	ಸಪ್ತಸಾಗರಗಳು	–	ಇ.	ಮಾರ್ಗ	________
೪.	ನಡುಗಡ್ಡೆ	–	ಈ.	ಕಡಲು	________
೫.	ಮನಸ್ಸಿದ್ದರೆ	–	ಉ.	ಅಲೆಗಳು	________
			ಊ.	ಈಜಬಲ್ಲೆ	________

@ KTBS NOT TO BE REPUBLISHED

ಋ. ಕೆಳಗಿನ ವಾಕ್ಯಗಳಲ್ಲಿ ತಪ್ಪಿರುವ ಅಂಶಗಳನ್ನು ಸರಿಪಡಿಸಿ ಬರೆಯಿರಿ.

೧. ಆನೆಯಾಕಾರದ ಅಲೆಗಳು ಬಂಡೆಗೆ ಅಪ್ಪಳಿಸುತ್ತಿವೆ.

೨. ಕಪಿವೀರರು ಕೆರಳಿದ ಸಿಂಹ ಕಂಡರು.

೩. ಹುಟ್ಟಿನಿಂದ ಎಲ್ಲರಿಗೂ ದೈಹಿಕ ಸಾಮರ್ಥ್ಯವಿರುತ್ತದೆ.

೪. ಹನುಮನು ಅರಣ್ಯದಲ್ಲಿ ದೇವತೆಗಳ ನಡುವೆ ತಾಯಿ ಸೀತಾದೇವಿಯನ್ನು ನೋಡಿದ.

ಅಭ್ಯಾಸ ಚಟುವಟಿಕೆ

೧. ಮಕ್ಕಳ ರಾಮಾಯಣ ಕಥಾ ಪುಸ್ತಕ ನೋಡಿ ರಾಮ, ಲಕ್ಷ್ಮಣ, ಸೀತೆ, ಹನುಮಂತ ಚಿತ್ರಗಳನ್ನು ಸಂಗ್ರಹಿಸಿರಿ.

೨. ಮಕ್ಕಳಿಗೆ ಹನುಮ, ಅಂಗದ, ಜಾಂಬವಂತರ ವೇಷ ಹಾಕಿಸಿ ಹನುಮಂತನೊಡನೆ ನಡೆಯುವ ಸಂಭಾಷಣೆ ಹೇಳಿಸಿ.

೩. ಮೈಕಲ್ ಫ್ಯಾರಡೆ ವಿಜ್ಞಾನಿಯ ಜೀವನ ಓದಿರಿ. ಶಾಲೆ ಬಿಟ್ಟ ಹುಡುಗ ವಿಜ್ಞಾನಿ ಆದ. ಹೇಗೆಂಬುದನ್ನು ತಿಳಿಯಿರಿ.

ಭಾಷಾಭ್ಯಾಸ

ಅ. ಈ ಕೆಳಗಿನ ಪದಗಳನ್ನು ನಿಮ್ಮ ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ.

ದಿಟ್ಟಿಸಿ : ______________________

ಅರುಣೋದಯ : ______________________

ಹೆಮ್ಮೆ : ______________________

ಆಶಾದಾಯಕ : ______________________

ಕೀಳರಿಮೆ : ______________________

ಆ. ಕೊಟ್ಟಿರುವ ಪದಗಳಿಗೆ ಸಮಾನಾರ್ಥಕ ಪದಗಳನ್ನು ಬರೆಯಿರಿ.

ಮಾದರಿ : ದಂಡೆ – ತೀರ, ದಡ, ತಡಿ

೧. ಸಮುದ್ರ – ______________

೨. ಆಕಾಶ – ______________

೩. ತಾಯಿ – ______________

೪. ಸೂರ್ಯ – ______________

೫. ಗೆಳೆಯ – ______________

@ KTBS NOT TO BE REPUBLISHED

ಓದಿ–ಗಮನಿಸು

ಇ. ಭಾರತದಲ್ಲಿ ಹಲವು ಜನ ತಮ್ಮ ಸಾಧನೆಯ ಮೂಲಕ ಹೆಸರನ್ನು ಗಳಿಸಿದ್ದಾರೆ–ಅದರ ಪಟ್ಟಿಯನ್ನು ಗಮನಿಸಿರಿ.

ವ್ಯಕ್ತಿ	ಮೌಲ್ಯ
ಶ್ರವಣ ಕುಮಾರ	ಪಿತೃ ಭಕ್ತಿ
ಹರಿಶ್ಚಂದ್ರ	ಸತ್ಯ
ದುರ್ಯೋಧನ	ಛಲ
ಭೀಮ	ಬಲ
ದಧೀಚಿ	ತ್ಯಾಗ
ಕರ್ಣ	ದಾನ
ಮೀರಾ	ಭಕ್ತಿ
ಕೃಷ್ಣ–ಕುಚೇಲ	ಸ್ನೇಹ
ಮಹಾವೀರ	ಅಹಿಂಸೆ

@ KTBS NOT TO BE REPUBLISHED

ಈ. ಟಿಪ್ಪಣಿ ಬರೆಯಿರಿ.

ಸಮುದ್ರ

____

____

____

____

____

ಹನುಮಂತ

____

____

____

____

____

ಉ. ವ್ಯಾಕರಣಾಂಶ

ಭಾವನೆಗಳನ್ನು ಒಡಿದೆಬ್ಬಿಸಿ ಹೇಳುವ ರೀತಿ ಇದು.

ಆಹಾ! ಆಗುಂಬೆಯ ಸೂರ್ಯಾಸ್ತ ಎಷ್ಟು ಚೆಂದ!

ಇದರ ಅರ್ಥ ಆಗುಂಬೆಯ ಸೂರ್ಯಾಸ್ತವು ಬಹಳ ಚೆಂದಾಗಿದೆ ಎಂದು ಹೇಳಿದಂತೆ.

ಕೆಳಗೆ ಕೊಟ್ಟ ಭಾವಸೂಚಕ ವಾಕ್ಯಗಳಿಗೆ ಸರಳ ವಾಕ್ಯಗಳನ್ನು ಬರೆಯಿರಿ.

೧. ಅಯ್ಯೋ! ಸಮುದ್ರದಲ್ಲಿ ಸೂರ್ಯ ಜಿಗಿದೆ ಬಿಟ್ಟ.

____

೨. ಹೋ! ಅವರೇ ಗೆದ್ದು ಬಂದರು.

____

೩. ಸತ್ಯವನ್ನು ಕೊಂದರು ಈ ಜನ!

____

ಊ. ಆವರಣದಲ್ಲಿ ಸೂಚಿಸಿರುವಂತೆ ಉತ್ತರಿಸಿ.

೧. ಅವನು ಶಾಲೆಗೆ ಹೋಗುತ್ತಾನೆ	**(ಸ್ತ್ರೀಲಿಂಗ ರೂಪದಲ್ಲಿ ಬರೆಯಿರಿ)**
೨. ಕಣ್ಣು ಕಾಣಿಸದವನು	**(ಒಂದೆ ಪದದಲ್ಲಿ ಹೇಳಿರಿ)**
೩. ಆಕಾಶ	**(ಈ ಪದಕ್ಕೆ ಸಮನಾದ ಎರಡು ಪದ ಹೇಳಿರಿ)**
೪. ಏನಿದು ಧೂಳಿ	**(ಈ ವಾಕ್ಯಕ್ಕೆ ಸೂಕ್ತ ಲೇಖನ ಚಿಹ್ನೆ ಹಾಕಿರಿ.)**

© KTBS NOT TO BE REPUBLISHED

೫. ಬಂಡೆಗಲ್ಲು	(ಬಿಡಿಸಿ ಬರೆಯಿರಿ)
೬. ಮರ+ಅನ್ನು=	(ಕೂಡಿಸಿ ಬರೆಯಿರಿ)
೭. ಅಬ್ದುಲ್	(ಇದರಲ್ಲಿ ಸ್ವರ ಗುರುತಿಸಿ ಬರೆಯಿರಿ)
೮. ದುಡ್ಡು ದೊಡ್ಡಪ್ಪ ವಿದ್ಯೆ............	(ಗಾದೆ ಮಾತು ಪೂರ್ಣಗೊಳಿಸಿರಿ)
೯. ನಾನು ಬೆಂಗಳೂರಿಗೆ ಹೋಗುತ್ತೇನೆ	(ಪ್ರಶ್ನಾರ್ಥಕ ವಾಕ್ಯ ಮಾಡಿರಿ)
೧೦.ಕಮಲ, ಗುಲಾಬಿ, ಸೇವಂತಿಗೆ	(ಹೆಣ್ಣು ಮಕ್ಕಳು ತಲೆಗೆ ಮುಡಿಯದ್ದನ್ನು ಆಯ್ಕೆ ಮಾಡಿ ಬರೆಯಿರಿ)

ಭಾಷಾ ಚಟುವಟಿಕೆ

ವಿರುದ್ಧ ಪದ ಹೇಳುವ ಆಟ

ಮಾದರಿ : (ಒಬ್ಬನು) ಕತ್ತಲು (ಇನ್ನೊಬ್ಬನು) ಬೆಳಕು

ತಂಪು ________

ಹತ್ತಿರ ________

________ ________

________ ________

ಕೊನೆಯ ಅಕ್ಷರದಿಂದ ಪದ ಕಟ್ಟುವ ಆಟ ಆಡಿರಿ.

ಮಾದರಿ: ರಾಮ, ಮರ, ರಜೆ, ಜನ

____

____

✤ ✤ ✤

© KTBS NOT TO BE REPUBLISHED

ಪದ್ಯ ಪಾಠ–೭

ಚುಟುಕುಗಳು

ಪ್ರವೇಶ :

ಮಕ್ಕಳೆ, ಸೂರ್ಯನ ಕೆಲಸವೇನು?

ಕೋಳಿಯ ಆಕಾರ ವರ್ಣಿಸಿ.

ರಾತ್ರಿಯಲ್ಲಿ ಆಕಾಶದ ಸೊಬಗು ಹೇಳಿರಿ.

ಈ ಪ್ರಶ್ನೆಗಳನ್ನು ತರಗತಿಯಲ್ಲಿ ಚರ್ಚಿಸಿರಿ. ನಿಮ್ಮ ಉತ್ತರಗಳಿಗೂ ಕವಿ ದಿನಕರ ದೇಸಾಯಿಯವರ ಉತ್ತರಗಳಿಗೆ ತಾಳೆ ನೋಡಲು ಈ ಕವಿತೆ ಓದಿರಿ.

1. ಹತ್ತಿಯ ಬೆಳೆ

ಆಗಸದ ಹೊಲದೊಳಗೆ ಚಿಕ್ಕೆಗಳ ಬಿತ್ತಿ
ಮುಂಜಾನೆ ನೋಡಿದರೆ ಬಿಳಿ ಮುಗಿಲ ಹತ್ತಿ,
ಈ ಹತ್ತಿಯನು ಹಿಂಜಿದವರಾರು ನೀರೆ?
ಸೂರ್ಯನಲ್ಲದೆ, ಮತ್ತೆ ಯಾರಲ್ಲ ಬೇರೆ.

2. ಸೋಜಿಗದ ಕೋಳಿ

ಎಲುಬು ಇಲ್ಲದ ಕೋಳಿ ತೋರಿಸಲೆ ನಿನಗೆ?
ನೋಡಬೇಕೆನಿಸಿದರೆ ಬಾ ನನ್ನ ಮನೆಗೆ
ಹೀಗೆನಲು ಆ ಹುಡುಗ ನೋಡಲಿಕೆ ಬಂದ
ಕೋಳಿ ಮೊಟ್ಟೆಯ ತಂದು ತೋರಿಸಿದ ಕಂದ


3. ತಂಗಿಗೆ

ಗಗನ ದೇವಿಯ ಹಣೆಗೆ ಚಂದಿರನ ಬೊಟ್ಟು
ರಂಗೋಲೆಗಾಗಿ ಬೆಳದಿಂಗಳಿನ ಹಿಟ್ಟು
ಬಾಂದಳವ ಸಿಂಗರಿಸಿದವರಾರು, ತಂಗಿ?
ಹೇಳಿದರೆ ಹೊಲಿಸುವೆನು ಚಿಕ್ಕೆಗಳ ಅಂಗಿ

–ದಿನಕರ ದೇಸಾಯಿ

@ KTBS NOT TO BE REPUBLISHED

ಕವಿ ಪರಿಚಯ :



ದಿನಕರ ದೇಸಾಯಿ ಇವರು ಉತ್ತರ ಕನ್ನಡದ ಅಂಕೋಲ ತಾಲೂಕಿನ ಅಲಗೇರಿಯವರು. ಇವರು ಪ್ರಸಿದ್ಧ ಸ್ವಾತಂತ್ರ್ಯ ಹೋರಾಟಗಾರರು, ದಿನಕರ ದೇಸಾಯಿಯವರು ೧೯೬೭ರಲ್ಲಿ ಸಂಸತ್ತಿನ ಸದಸ್ಯರಾಗಿದ್ದರು. **ಹೂಗೊಂಚಲು, ಮಕ್ಕಳ ಗೀತೆಗಳು, ನಾ ಕಂಡ ಪಡುವಣ, ದಿನಕರ ಚೌಪದಿ** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕರ್ನಾಟಕ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಮುಂಬೈ ಸರ್ಕಾರದ ಬಹುಮಾನಗಳು ದೊರೆತಿವೆ. ಇವರು **ಚುಟುಕುಗಳ ಬ್ರಹ್ಮ** ಎಂಬ ಬಿರುದಿನಿಂದ ಜನಪ್ರಿಯರಾಗಿದ್ದರು. ಪ್ರಸ್ತುತ ಚುಟುಕುಗಳನ್ನು ಅವರ **ದಿನಕರನ ಚೌಪದಿ** ಸಂಕಲನದಿಂದ ಆರಿಸಿದೆ.

ಓದಿ – ತಿಳಿ

ಆಗಸ–ಆಕಾಶ, ಚಿಕ್ಕೆ–ನಕ್ಷತ್ರ, ತಾರೆ. ಮುಗಿಲು–ಮೋಡ, ಎಲುಬು–ಮೂಳೆ, ಗಗನ–ಆಕಾಶ. ಹಿಟ್ಟು–ನಯವಾದ ಪುಡಿ, ಬಾಂದಳ–ಆಕಾಶ

ಅಭ್ಯಾಸ

ಅ. ಕೆಳಗಿನ ಪ್ರಶ್ನೆಗಳಿಗೆ ಒಂದು ಪದ ಅಥವಾ ವಾಕ್ಯದಲ್ಲಿ ಉತ್ತರಿಸಿ.

೧. ಆಗಸದ ಹೊಲದಲ್ಲಿ ಏನನ್ನು ಬಿತ್ತಿದೆ?

೨. ಹತ್ತಿಯನ್ನು ಹಿಂಜಿದವರು ಯಾರು?

೩. ಕವಿ ಹುಡುಗನಿಗೆ ಎಂತಹ ಕೋಳಿ ತೋರುವೆನು ಎಂದರು?

೪. ಎಲುಬು ಇಲ್ಲದ ಕೋಳಿ ಯಾವುದು?

೫. ಗಗನ ದೇವಿಯ ಹಣೆಗೆ ಯಾವುದು ಬೊಟ್ಟು?

೬. ಕವಿ ತಂಗಿಗೆ ಎಂತಹ ಅಂಗಿ ಹೊಲಿಸುವೆನು ಎಂದರು?

ಆ. ಕೆಳಗಿನ ಪ್ರಶ್ನೆಗಳಿಗೆ ಎರಡು ವಾಕ್ಯಗಳಲ್ಲಿ ಉತ್ತರಿಸಿರಿ.

೧. ಸೋಜಿಗದ ಕೋಳಿ ಯಾವುದು? ಏಕೆ?

೨. ಬಾಂದಳವು ಹೇಗೆ ಸಿಂಗಾರಗೊಂಡಿದೆ?

© KTBS NOT TO BE REPUBLISHED

ಇ. **ಕೆಳಗಿನ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಬರೆಯಿರಿ.**

೧. ಮುಂಜಾನೆ ನೋಡಿದರೆ ______________ ಮುಗಿಲ ಹತ್ತಿ

ಅ) ಬಿಳಿ ಆ) ನೀಲಿ ಇ) ಕೆಂಪು ಈ) ಹಳದಿ

೨. ಎಲುಬು ಇಲ್ಲದ ಕೋಳಿ ನೋಡಲಿಕ್ಕೆ ಬಂದವನು. ______________

ಅ) ಕವಿ ಆ) ಹುಡುಗ ಇ) ಚಿಕ್ಕೆಗಳು ಈ) ಗಾಂಧಿ

೩. ರಂಗೋಲಿಯ ಹಿಟ್ಟು ______________

ಅ) ಬೆಳಕು ಆ) ಹೊಂಬೆಳಕು ಇ) ಮುಂಬೆಳಕು ಈ) ಬೆಳದಿಂಗಳು

ಈ. **"ಅ" ಪಟ್ಟಿಯ ಪದಗಳಿಗೆ "ಬ" ಪಟ್ಟಿಯ ಪದಗಳನ್ನು ಆರಿಸಿ ಹೊಂದಿಸಿ ಬರೆಯಿರಿ.**

	ಅ		ಬ
೧.	ಆಗಸ	–	ಚಿಕ್ಕೆಗಳ ಅಂಗಿ
೨.	ಹುಡುಗ	–	ಎಲುಬು ಇಲ್ಲದ ಕೋಳಿ
೩.	ಕೋಳಿ ಮೊಟ್ಟೆ	–	ಹೊಲ
೪.	ತಂಗಿ	–	ನೋಡಲಿಕ್ಕೆ ಬಂದ

ಉ. **ಕೆಳಗಿನವುಗಳಿಗೆ ಸೂಕ್ತ ಪದವನ್ನು ಆರಿಸಿ ಬರೆಯಿರಿ.**

೧. ಆಗಸ ಪದದ ಸಮಾನಾರ್ಥಕ

ಅ) ಅಗಸ ಆ) ಅಕಸ ಇ) ಆಕಾಶ ಈ) ಅರಸ

೨. ಎಲುಬು – ಪದದ ಅರ್ಥ

ಅ) ಮೂಳೆಆ) ಮಾಂಸ ಇ) ಅಸ್ತಿ ಈ) ಚರ್ಮ

೩. ಸುಳ್ಳು – ಇದರ ವಿರುದ್ಧಾರ್ಥಕ ಪದ

ಅ) ಎಳ್ಳು ಆ) ಸತ್ಯ ಇ) ಮಿಥ್ಯ ಈ) ನಿತ್ಯ

೪. ಸಿಂಗಾರ – ಇದರ ನೇರವಾದ ಪರ್ಯಾಯ ಪದ

ಅ) ಸುಂದರ ಆ) ಶೃಂಗಾರ ಇ) ಅಂದ ಈ) ಚಂದ.

@ KTBS NOT TO BE REPUBLISHED

ಅಭ್ಯಾಸ ಚಟುವಟಿಕೆ

ಅ. ಆಕಾಶ, ಸೂರ್ಯ, ಚಂದ್ರ, ನಕ್ಷತ್ರಗಳನ್ನು ಒಳಗೊಂಡ ಸುಂದರ ಪ್ರಕೃತಿ ಚಿತ್ರ ಬರೆಯಿರಿ.

ಆ. ದಿನಕರ ದೇಸಾಯಿ ಅವರ ಜೀವನ ಚರಿತ್ರೆಯನ್ನು ತಿಳಿದುಕೊಳ್ಳಿ.

ಇ. ವೃತ್ತ ಪತ್ರಿಕೆಗಳಲ್ಲಿ ಬರುವ ಚುಟುಕುಗಳನ್ನು ಸಂಗ್ರಹಿಸಿ ಒಂದು ಅಲ್ಬಂ ಮಾಡಿರಿ.

ಭಾಷಾಭ್ಯಾಸ

ಅ. **ಪದ್ಯದ ಭಾವಕ್ಕೆ ತಕ್ಕಂತೆ ಕೊಟ್ಟಿರುವ ಸುಳಿವು ಪದಗಳನ್ನು ಆರಿಸಿ ಪದ್ಯವನ್ನು ಪೂರ್ಣಗೊಳಿಸಿ.**

ಪುಟ್ಟ ಪುಟ್ಟ, ಎತ್ತೆತ್ತ ನೋಟ
__________ ನ ಹುಡುಕುವ ಆಟ
ಪ್ರೀತಿಯಲಿ ಕರೆದರೆ, __________ ಓಟ
__________ ಹೇಳುವೆ ನಲ್ಮೆಯ ಪಾಠ.

ಸುಳಿವು ಪದಗಳು :– (ಆಡುತ, ಓಡುತ, ತಕಥೈ, ಅಪ್ಪ, ಅಮ್ಮ)

ಆ. **ಪದ್ಯದಲ್ಲಿ ಬಿಟ್ಟಿರುವ ಮುಂದಿನ ಸಾಲುಗಳನ್ನು ಬರೆಯಿರಿ.**

ಗಗನದೇವಿಯ ______________________________
____
____
______________________________ ಅಂಗಿ

ಇ. **ಕೆಳಗಿನ ಗಾದೆ ಮಾತನ್ನು ವಿಸ್ತರಿಸಿ ಬರೆಯಿರಿ.**

೧. ಕಾಯ ಅಳಿದರು ಕೀರ್ತಿ ಅಳಿಯದು

ಈ. **ಕೆಳಗಿನವುಗಳಿಗೆ ನಾಲ್ಕು ವಾಕ್ಯದಲ್ಲಿ ಟಿಪ್ಪಣಿ ಬರೆಯಿರಿ.**

೧. ಅರುಣೋದಯ

೨. ದಿನಕರ ದೇಸಾಯಿ

© KTBS NOT TO BE REPUBLISHED

ಭಾಷಾ ಚಟುವಟಿಕೆ

ಅ. ಕೊಟ್ಟಿರುವ ವಚನವನ್ನು ಸಾಮೂಹಿಕವಾಗಿ ಹಾಡಿ.

ಕಳಬೇಡ ಕೊಲಬೇಡ ಹುಸಿಯ ನುಡಿಯಲುಬೇಡ
ಮುನಿಯಬೇಡ ಅನ್ಯರಿಗೆ ಅಸಹ್ಯ ಪಡಬೇಡ
ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ
ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲ ಸಂಗಮದೇವನ ನೊಲಿಸುವ ಪರಿ.

ಆ. ನೆನಪಿನಂಗಳ : ಪದಬಳ್ಳಿ.

ಮಾದರಿ : ಗಿಡ, ಮರ, ಬಳ್ಳಿ, ಚಿಗುರು, ಹೂ, ಕಾಯಿ, ಹಣ್ಣು.

೧. ಆಗಸ   ೨. ಕೋಳಿ   ೩. ಕಂದ

❖ ❖ ❖

@ KTBS
NOT TO BE REPUBLISHED

ಪಾಠ–೮

(ಅ) ಪತ್ರ ಲೇಖನ

ಪ್ರವೇಶ :

ನಮ್ಮ ಭಾವನೆಗಳನ್ನು ಇನ್ನೊಬ್ಬರಿಗೆ ತಿಳಿಸಲು, ವಿಷಯ ಅಥವಾ ಮಾಹಿತಿ ಒದಗಿಸಲು, ಕುಶಲೋಪರಿ ತಿಳಿಸಲು ಮುಖ್ಯ ಸಾಧನಗಳಲ್ಲಿ ಪತ್ರ ಬರಹವೂ ಒಂದು. ಮೊಬೈಲ್‌ನಲ್ಲಿ, ಫೋನ್‌ಗಳಲ್ಲಿ ಚುಟುಕಾಗಿ ಮಾತನಾಡಬೇಕು. ಪತ್ರದಲ್ಲಿ ಮನಬಿಚ್ಚಿ ಪುಟ ಪುಟಗಳಲ್ಲಿ ಹೇಳಬಹುದು. ಪತ್ರಗಳಲ್ಲಿ ಹಲವು ಬಗೆಗಳಿವೆ. ಮುಖ್ಯವಾಗಿ ಸಾಂಪ್ರದಾಯಿಕ ಕುಶಲೋಪರಿ ಪತ್ರಗಳು. ಇನ್ನೊಂದು ವ್ಯವಹಾರಿಕ ಪತ್ರಗಳು. ಕಳೆದ ವರುಷ ವ್ಯವಹಾರಿಕ ಪತ್ರ ಗಮನಿಸಿದ್ದೀರಿ. ಅಲ್ಲಿ ಕಛೇರಿಗಳಿಗೆ ನಮ್ಮ ಬೇಡಿಕೆ, ವಿನಂತಿ ಮತ್ತು ಸಮಸ್ಯೆ ಕುರಿತು ಬರೆಯುವ ರೀತಿ ತಿಳಿದುಕೊಂಡಿದ್ದೀರಿ. ಕುಶಲೋಪರಿ ಪತ್ರಗಳು ಕೌಟುಂಬಿಕ ಸ್ತರದಲ್ಲಿ ಬರೆಯುತ್ತೇವೆ. ಅಲ್ಲಿ ಕುಶಲೋಪರಿ ಇತ್ಯಾದಿ ಮಾಹಿತಿ, ವಿವರಣೆಗಳನ್ನು ಕೊಟ್ಟು ಅಥವಾ ವಿವರಣೆ ಕೇಳಿ ಪತ್ರ ಬರೆಯುತ್ತಾರೆ. ಪ್ರಸ್ತುತ ಪತ್ರದಲ್ಲಿ ತನ್ನ ತಾಯಿಗೆ ತಾನು ಮಾಡಿದಪ್ರವಾಸ ಕುರಿತು ವಿದ್ಯಾರ್ಥಿನಿಯೊಬ್ಬಳು ವಿವರ ಹೇಳುತ್ತಾಳೆ.

ಇವುಗಳನ್ನು ವಿಚಾರ ಮಾಡಿರಿ.

೧. ಅಂಚೆ ಕಛೇರಿ ವಿತರಿಸುವ ಪತ್ರಗಳ ಬಗೆಗಳು ಯಾವುವು?

೨. ನೀವು ಶಾಲೆಗೆ ರಜೆ ಕೋರಿ ಬರೆದ ಪತ್ರಕ್ಕೆ ಯಾವ ಪತ್ರ ಎನ್ನುತ್ತಾರೆ?

ಅಮ್ಮನಿಗೊಂದು ಪತ್ರ

ಕುಶಲ ಶ್ರೀ ಬೆಂಗಳೂರು

ದಿನಾಂಕ ೧೦-೦೧-೨೦೧೨

ಪೂಜ್ಯ ಮಾತೃಶ್ರೀ ಅವರಿಗೆ,

ನಿಮ್ಮ ಮಗಳಾದ ತೇಜಸ್ವಿನಿ ಮಾಡುವ ನಮಸ್ಕಾರಗಳು. ಇಲ್ಲಿ ನಾನು ಆರೋಗ್ಯವಾಗಿದ್ದೇನೆ. ನಿಮ್ಮ ಆರೋಗ್ಯದ ಬಗ್ಗೆ ಆಗಾಗ ಪತ್ರ ಬರೆಯುತ್ತಿರಿ.

ಕಳೆದ ಶನಿವಾರ ಡಿಸೆಂಬರ್ ೨೪ ರಂದು ಶಾಲಾ ಪ್ರವಾಸ ಏರ್ಪಡಿಸಿದ್ದರು. ಬೆಳಗಿನ ಜಾವ ೪.೦೦ ಗಂಟೆಗೆ ಬಸ್ಸು ಹತ್ತಿದೆವು. ಎಲ್ಲರಲ್ಲೂ ಉತ್ಸಾಹ ಸಡಗರ ತುಂಬಿತ್ತು. ಪ್ರವಾಸಿ ಬಸ್ ನಮ್ಮೆಲ್ಲರನ್ನು ಹೊತ್ತು ಬೆಂಗಳೂರಿನಿಂದ ಹೊರಟಿತು. ಸುಮಾರು ೧೭೫ ಕಿ.ಮೀ. ದೂರದಲ್ಲಿರುವ ಶ್ರವಣಬೆಳಗೊಳವನ್ನು ತಲುಪಿತು. ಆಗ ಬೆಳಗಿನ ೮.೦೦ ಗಂಟೆಯ ಸಮಯ. ಅಲ್ಲಿನ ಅತಿಥಿ ಗೃಹವೊಂದರಲ್ಲಿ ನಮ್ಮ ನಿತ್ಯ ಕರ್ಮಗಳನ್ನು ಮುಗಿಸಿದೆವು. ಉಪಾಹಾರ ಸೇವಿಸಿ ಬೆಟ್ಟದತ್ತ ಹೆಜ್ಜೆ ಹಾಕಿದೆವು.

@KTBS NOT TO BE REPUBLISHED

ಸುಮಾರು ೬೫೦ಕ್ಕೂ ಹೆಚ್ಚು ಮೆಟ್ಟಿಲುಗಳು. ಭೂ ಮಟ್ಟದಿಂದ ಸುಮಾರು ೪೭೦ ಅಡಿಗಳಷ್ಟು ಎತ್ತರ. ನಾವೆಲ್ಲರೂ ಜಿಂಕೆಯಂತೆ ಓಡುತ್ತಾ–ಜಿಗಿಯುತ್ತಾ ಬೆಟ್ಟ ಹತ್ತಿದೆವು. ಬೆಟ್ಟದ ತುದಿಯನ್ನು ಏರಿದಾಗ ೫೮ ಅಡಿ ಎತ್ತರದ ಭವ್ಯವಾದ ಗೊಮ್ಮಟೇಶ್ವರನ ವಿಗ್ರಹ. ಚಾವುಂಡರಾಯನು ಅದನ್ನು ಕೆತ್ತಿಸಿರುವನೆಂದು ಹೇಳುತ್ತಾರೆ. ಅದು ಏಕಶಿಲಾ ಸುಂದರ ಮೂರ್ತಿ. ತಲೆ ಎತ್ತಿ ನೋಡಬೇಕು. ಬಾಹುಬಲಿ ವಿಗ್ರಹದ ಮುಂದೆ ನಾವು ಬಹಳ ಚಿಕ್ಕವರಾಗಿ ಕಾಣುತ್ತೇವೆ. ಮುಗುಳ್ನಗೆಯನ್ನು ಸೂಸುತ್ತಿರುವ ಆ ಮುಖ ಅದ್ಭುತವಾಗಿದೆ. ಗೊಮ್ಮಟನ ಮೂರ್ತಿಗೆ ಹಬ್ಬಿದ ಶಿಲಾಲತೆ ವಿಶೇಷ ಸೌಂದರ್ಯ ನೀಡಿದೆ. ನೋಡಿದಷ್ಟೂ ನೋಡಬೇಕು ಎನಿಸುತ್ತದೆ. ಕಣ್ ತಣಿಯದು, ಮನಸ್ಸು ಮಾಗದು. ಆ ಬೃಹತ್ ವಿಗ್ರಹ ಕೆತ್ತಿದ ಶಿಲ್ಪಿಗೆ ನಾವೆಷ್ಟು ಕೃತಜ್ಞತೆ ಸಲ್ಲಿಸಿದರೂ ಸಾಲದು. ಮನಸ್ಸಿಲ್ಲದ ಮನಸ್ಸಿನಿಂದ ಬೆಟ್ಟ ಇಳಿದೆವು. ಊಟ ಮಾಡಿಕೊಂಡು ಬಸ್ಸು ಹತ್ತಿದೆವು. ನಂತರ ಸುಮಾರು ೭೫ ಕಿ.ಮೀ. ದೂರದ ಬೇಲೂರಿಗೆ ಬಂದೆವು. ಈಗ ಸಮಯ ಮಧ್ಯಾಹ್ನ ೨.೦೦. ನಾಳಿನ ಪತ್ರದಲ್ಲಿ ವಿವರವಾಗಿ ಬೇಲೂರ ಬಗ್ಗೆ ಬರೆಯುವೆ.

ಅಮ್ಮ ಇದೊಂದು ಸುಂದರ ಪ್ರವಾಸ. ಇದರ ಜೊತೆಗೆ ಕೆಲವು ಫೋಟೋಗಳನ್ನು ಕಳಿಸಿರುವೆನು. ಮುಟ್ಟಿದ್ದಕ್ಕೆ ಪತ್ರ ಬರೆ. ಅಪ್ಪನಿಗೆ ವಂದನೆಗಳನ್ನು ತಿಳಿಸು.

@ KTBS NOT TO BE REPUBLISHED

ಅಡಕ : ಫೋಟೋಗಳು



ತಮ್ಮ ಪ್ರೀತಿಯ ಮಗಳು

ತೇಜಸ್ವಿನಿ
ಬನಶಂಕರಿ ಸರ್ಕಾರಿ ಹಿ.ಪ್ರಾ.ಶಾಲೆ
ಹೊಸಕೆರೆ ಹಳ್ಳಿ
ಬೆಂಗಳೂರು–೫೬೦೦೮೫

ಇವರಿಗೆ :

ಶ್ರೀಮತಿ ರಾಜೇಶ್ವರಿ
ಮನೆ ನಂ. ೧೦, ಜಿ.ಎಸ್.ಶಿವರುದ್ರಪ್ಪ ರಸ್ತೆ,
ಶಿಕಾರಿಪುರ – ೫೭೭೪೨೭
ಶಿವಮೊಗ್ಗ ಜಿಲ್ಲೆ

ಮರುಪತ್ರ (ಪ್ರತ್ಯುತ್ತರ ಪತ್ರ)

ರಾಜೇಶ್ವರಿ ದಿನಾಂಕ : ೧೫-೧-೨೦೧೨
ಪತಿ : ಲೋಕೇಶ್ವರಪ್ಪ
ಜಿ.ಎಸ್.ಶಿವರುದ್ರಪ್ಪ ರಸ್ತೆ,
ಶಿಕಾರಿಪುರ.

ಪ್ರೀತಿಯ ತೇಜಸ್ವಿನಿಗೆ,

ನಾವು ಇಲ್ಲಿ ಆರೋಗ್ಯದಿಂದ ಇದ್ದೇವೆ. ನಿನ್ನೆ ದಿನ ನಿನ್ನ ಪತ್ರ ಬಂದು ತಲುಪಿತು. ನೀವು ಶಾಲೆಯಿಂದ ಪ್ರವಾಸಕ್ಕೆ ಹೋದ ವಿಚಾರ ತಿಳಿದು ಸಂತೋಷವಾಯಿತು. ನೀನು ಶ್ರವಣ ಬೆಳಗೊಳ ನೋಡಿದ ಬಗ್ಗೆ ತುಂಬಾ ಚೆನ್ನಾಗಿ ಬರೆದಿರುವೆ. ನೀನು ಕಳಿಸಿದ ಫೋಟೋಗಳನ್ನು ಮತ್ತು ನೀನು ಬರೆದ ಪತ್ರವನ್ನು ನೋಡಿದ ನಿನ್ನ ಅಪ್ಪ "ನೋಡು, ನಮ್ಮ ಮಗಳು ಎಷ್ಟು ಚೆನ್ನಾಗಿ ಪತ್ರ ಬರೆದಿದ್ದಾಳೆ" ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಬೇಲೂರು ನೋಡಿದ ಬಗ್ಗೆ ಪತ್ರ ಬರೆ. ನಿಮ್ಮ ಪರೀಕ್ಷೆಗಳು ಯಾವಾಗ ಆರಂಭ ಆಗುತ್ತದೆ? ಅಭ್ಯಾಸದತ್ತ ಹೆಚ್ಚು ಗಮನ ಕೊಡು. ವ್ಯರ್ಥವಾಗಿ ಸಮಯ ಕಳೆಯಬೇಡ. ಚೆನ್ನಾಗಿ ಊಟ ಮಾಡು. ಹೆಚ್ಚು ನಿದ್ರೆ ಕೆಡಬೇಡ. ಆಗಾಗ ಪತ್ರ ಬರೆಯುತ್ತಿರು.

@ KTBS
NOT TO BE REPUBLISHED

ಶುಭಾಶೀರ್ವಾದಗಳು ನಿನ್ನ ಪ್ರೀತಿಯ ಅಮ್ಮ
ರಾಜೇಶ್ವರಿ

ಗೆ,
ಕು॥ ತೇಜಸ್ವಿನಿ
೬ನೇ ತರಗತಿ
ಬನಶಂಕರಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ
ಹೊಸಕೆರೆ ಹಳ್ಳಿ, ಬೆಂಗಳೂರು - ೫೬೦ ೦೮೫.

ಅಭ್ಯಾಸ

ಸೂಚನೆಗಳನ್ನು ಅನುಸರಿಸಿ ಪತ್ರ ಬರೆಯಿರಿ.

೧. ಮಗು, ಬೇಲೂರು ಹೊಯ್ಸಳರ ರಾಜಧಾನಿ. ಇಲ್ಲಿನ ಪ್ರಮುಖ ದೇವಾಲಯ ಚೆನ್ನಕೇಶವ ದೇವಾಲಯ. ಇದನ್ನು ೧೧೧೭ ರಲ್ಲಿ ಹೊಯ್ಸಳ ಅರಸು ವಿಷ್ಣುವರ್ಧನ ಕಟ್ಟಿಸಿದನು. ನೀನು ಅಲ್ಲಿಗೆ ಹೋಗಿ ನೋಡಿಕೊಂಡು ಒಂದು ಸುಂದರ ಪತ್ರಬರೆ.

ಸೂಚನೆ : ಪತ್ರ ಬರೆಯುವಾಗ ಅನುಸರಿಸಬೇಕಾದ ಸಾಮಾನ್ಯ ನಿಯಮಗಳು:

೧. ಪತ್ರದ ಮೇಲ್ಭಾಗದಲ್ಲಿ ದಿನಾಂಕ, ಹೆಸರು, ವಿಳಾಸವಿರಬೇಕು.

೨. ಸೂಕ್ತವಾದ ಸಂಬೋಧನೆ ಬರೆಯಬೇಕು.

೩. ವಿಷಯಗಳನ್ನು ಅರ್ಥವತ್ತಾಗಿ ಸರಳ ಶೈಲಿಯಲ್ಲಿ ಬರೆಯಬೇಕು.

೪. ಔಚಿತ್ಯಪೂರ್ಣವಾದ ಕೋರಿಕೆ, ಹಾರೈಕೆ ಇರಬೇಕು. ಉದಾ : ಇತಿ ನಮಸ್ಕಾರ, ಇತಿ ಆಶೀರ್ವಾದ.

೫. ಪತ್ರದ ಕೊನೆಯಲ್ಲಿ ಸಹಿ ಹಾಕಬೇಕು.

೬. ಲಕೋಟೆ(ಕವರು) ಅಥವಾ ಕಾರ್ಡಿನ ಮೇಲ್ಭಾಗದಲ್ಲಿ ಪತ್ರ ತಲುಪಬೇಕಾದ ವಿಳಾಸವನ್ನು ಬರೆಯಬೇಕು.

೭. ಲಕೋಟೆ(ಕವರಿನ ಇನ್ನೊಂದು ಬದಿಯಲ್ಲಿ ಕಳುಹಿಸುವವರ ವಿಳಾಸವನ್ನು ಚಿಕ್ಕದಾಗಿ ಬರೆಯಬೇಕು.

೮. ಬರವಣಿಗೆ ಅಂದವಾದ ಶೈಲಿಯಲ್ಲಿ, ಆಕರ್ಷಕವಾಗಿ ಇರಬೇಕು.

ಸಂಬಂಧ		ಸಂಬೋಧನೆ ಗೌರವ
ತಂದೆಗೆ	–	ತೀರ್ಥರೂಪ
ತಾಯಿಗೆ	–	ಮಾತೋಶ್ರೀ
ಗುರುಗಳಿಗೆ	–	ಪೂಜ್ಯ
ಗೆಳೆಯ /ಗೆಳತಿಗೆ	–	ಆತ್ಮೀಯ, ನಲ್ಮೆಯ, ಪ್ರೀತಿಯ
ಚಿಕ್ಕಪ್ಪ /ದೊಡ್ಡಪ್ಪನಿಗೆ	–	ತೀರ್ಥರೂಪ ಸಮಾನ/ ತೀರ್ಥಸ್ವರೂಪರಾದ
ಚಿಕ್ಕಮ್ಮ /ದೊಡ್ಡಮ್ಮನಿಗೆ	–	ಮಾತೋಶ್ರೀ ಸಮಾನ/ ಮಾತೃಸ್ವರೂಪರಾದ
ಕಿರಿಯರಿಗೆ	–	ಚಿರಂಜೀವಿ

ಹೀಗೆ ವೈಯಕ್ತಿಕ ಪತ್ರಗಳನ್ನು ಬರೆಯುವಾಗ ಬೇರೆ ಬೇರೆ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಸೂಕ್ತವಾದ ಸಂಬೋಧನೆಗಳನ್ನು ಬಳಸುತ್ತೇವೆ.

ಅಭ್ಯಾಸ ಚಟುವಟಿಕೆ


ಕಾರ್ಡು, ಅಂತರ್‌ದೇಶಿಯ ಪತ್ರ– ಲಕೋಟೆ(ಕವರು)ಗಳನ್ನು ತಯಾರಿಸಿ.

@ KTBS NOT TO BE REPUBLISHED

ಪಾಠ ೮

(ಆ) ಭಿತ್ತಿ ಪತ್ರ

ಭಿತ್ತಿ ಪತ್ರ ಮತ್ತು ಚಿತ್ರ ಸರಣಿ ಓದು – ಕಥೆ ಹೇಳು.



ವೇಗದ ತಾಕತ್ತು ಜೀವಕ್ಕೆ ಆಪತ್ತು



ವೇಗ ರೋಚಕ ಆದರೆ ಮರಣಾಂತಿಕ



ಅಪಘಾತಕ್ಕೆ ಅವಸರವೇ ಕಾರಣ



ರಸ್ತೆ ನಿಯಮಗಳನ್ನು ಪಾಲಿಸಿ



ಹಸಿರೇ ಉಸಿರು




ಸಸಿ ನೆಟ್ಟು, ಬರ ಅಟ್ಟು

© KTBS NOT TO BE REPUBLISHED

ಅಭ್ಯಾಸ

ಆ) ಈ ಚಿತ್ರವನ್ನು ನೋಡಿ ಕಥೆ ಹೇಳಿರಿ.


ಉಪಾಯ ಬಲ್ಲವನಿಗೆ ಅಪಾಯವಿಲ್ಲ




ಆಟ ಆಡುವ ವಿಚಾರ




ಆಟ ಆಡಲು ಶುರು




ಒಂದು ಜಿಂಕೆ ಬಲೆಯಲ್ಲಿ ಸಿಕ್ಕಿಬಿತ್ತು



ನೀನು ಸತ್ತಂತೆ ಮಲಗು



ಬೇಯಿಸಿ ತಿನ್ನಲು ಬೆಂಕಿ ಹೊತ್ತಿಸಿದ




ಅಯ್ಯೋ!! ಪಾರಾಯಿತೇ?...

© KTBS NOT TO BE REPUBLISHED

ಇ) ಈ ಭಿತ್ತಿಪತ್ರದ ಘೋಷಣೆಗಳನ್ನು ಪೂರ್ಣ ಮಾಡಿರಿ.




ಹೆಂಡದ ಸಹವಾಸ ಮಡದಿ ಮಕ್ಕಳ ______________




ಆರಣ್ಯ ಬೆಳಸಿ ಜೀವ ______________




ಶಾಲೆಯೇ ದೇಗುಲ ಮಕ್ಕಳೇ ______________



ಹೆಣ್ಣೊಂದು ಕಲಿತರೆ ಶಾಲೆಯೊಂದು ______________



ಸೈಕಲ್ ಬಳಸಿ, ಇಂಧನ ______________



ದುಡ್ಡು ದೊಡ್ಡಪ್ಪ, ವಿದ್ಯೆ ______________

NOT TO BE REPUBLISHED

ಹೆಚ್ಚಿನ ಓದು

೧ ಪುಣ್ಯಕೋಟಿ

ಈ ಭೂಮಂಡಲದ ಮಧ್ಯದಲ್ಲಿ, ಹಸಿರು ವನಗಳಿಂದ ಕೂಡಿದ ಸುಂದರ ನಾಡು ಕರ್ನಾಟಕ. ಈ ನಾಡಿನಲ್ಲಿ ಕಾಳಿಂಗನೆಂಬ ಗೊಲ್ಲನು ದನಗಳನ್ನು ಕಾಯುತ್ತಿದ್ದನು. ಪ್ರತಿದಿನ ಎಳೆಯ ಮಾವಿನ ಮರದ ಕೆಳಗೆ ಕುಳಿತು ಕೊಳಲನೂದಿ ಹಸುಗಳನ್ನು ಹೀಗೆ ಕರೆಯುತ್ತಿದ್ದನು.

ಗಂಗೆ ಬಾರೆ ಗೌರಿ ಬಾರೆ
ತುಂಗಭದ್ರೆ ತಾಯಿ ಬಾರೆ
ಕಾಮಧೇನು ನೀನು ಬಾರೆಂದು
ಪ್ರೇಮದಲಿ ಗೊಲ್ಲ ಕರೆದನು.

ಗೊಲ್ಲನ ಕೊಳಲ ಗಾನವನ್ನು ಕೇಳಿ ಎಲ್ಲ ಹಸುಗಳು ಬರುತ್ತಿದ್ದವು. ಅವನು ಅವುಗಳ ಹಾಲು ಕರೆಯುತ್ತಿದ್ದನು. ಅನಂತರ ಹಸುಗಳನ್ನು ಮೇಯಿಸಲು ಅಡವಿಯ ಬೆಟ್ಟ ಪ್ರದೇಶಕ್ಕೆ ತೆರಳುತ್ತಿದ್ದನು. ಗೋವುಗಳು ಹುಲ್ಲು ಮೇಯ್ದು ಸಂಜೆ ಮನೆಗೆ ಮರಳುತ್ತಿದ್ದವು. ಗೊಲ್ಲನು ಆ ಹಸುಗಳನ್ನು ದೊಡ್ಡಿಯೊಳಗೆ ಕಟ್ಟುತ್ತಿದ್ದನು.

ಆ ಬೆಟ್ಟ ಪ್ರದೇಶದಲ್ಲಿ ಅರ್ಬುತನೆಂಬ ಹುಲಿ ವಾಸವಾಗಿತ್ತು. ಒಮ್ಮೆ ಏಳು ದಿನವಾದರೂ ಅದಕ್ಕೆ ಆಹಾರ ದೊರೆಯಲಿಲ್ಲ. ಅದು ತನ್ನ ಗವಿಯ ಬಾಗಿಲಲ್ಲಿ ನಿಂತು ಕಾಯುತ್ತಿತ್ತು. ಹಸುಗಳ ಗಂಟೆಯ ಸದ್ದು ಕೇಳಿ ಎಚ್ಚರವಾಯಿತು. ಗುಡುಗು ಸಿಡಿಲಿನಂತೆ ರಭಸದಿಂದ ಬಂದಿತು. ಹಸುಗಳ ಮೇಲೆ ಬಿದ್ದಿತು. ಹಸುಗಳು ಹೆದರಿ ಓಡಿದವು. ಹುಲಿ ತನಗೆ ಆಹಾರ ಸಿಗಲಿಲ್ಲವೆಂದು ಹಲ್ಲು ಕಡಿಯಿತು.

ಅದೇ ಸಮಯಕ್ಕೆ ಸರಿಯಾಗಿ ಪುಣ್ಯಕೋಟಿ ಎಂಬ ಹಸು ತನ್ನ ಕಂದನನ್ನು ನೆನೆದು ಮೆಲ್ಲಮೆಲ್ಲನೆ ಬರುತ್ತಿತ್ತು. ಹುಲಿ ಪುಣ್ಯಕೋಟಿಯನ್ನು ಅಡ್ಡಗಟ್ಟಿ ನಿಂತಿತು. ನಿನ್ನನ್ನು ತಿಂದುಬಿಡುವೆ ಎಂದು ಹೇಳಿತು.

ಪುಣ್ಯಕೋಟಿಯು ವಿನಯದಿಂದ ದೊಡ್ಡಿಯಲ್ಲಿರುವ ತನ್ನ ಕಂದನಿಗೆ ಹಾಲುಣಿಸಿ ಬರುವೆನೆಂದು ಹುಲಿಗೆ ಹೇಳಿತು. ಹಸಿದ ವೇಳೆಯಲ್ಲಿ ಸಿಕ್ಕಿರುವ ಆಹಾರವನ್ನು ಬಿಡುವುದು ಮೂರ್ಖತನ, ಅಲ್ಲದೆ ಜಗತ್ತಿನಲ್ಲಿ ಹುಲಿಗೆ ಆಹಾರವಾಗಲು ಯಾರಾದರೂ ಬರುತ್ತಾರೆಯೇ? ಎಂದು ಗಹಗಹಿಸಿತು. ಆಗ ಆ ಹಸು ದೈನ್ಯದಿಂದ ಹೀಗೆ ಹೇಳಿತು.

ಸತ್ಯವೇ ನಮ್ಮ ತಾಯಿತಂದೆ
ಸತ್ಯವೇ ನಮ್ಮ ಬಂಧುಬಳಗ
ಸತ್ಯ ವಾಕ್ಯಕೆ ತಪ್ಪಿ ನಡೆದರೆ
ಮೆಚ್ಚನಾ ಪರಮಾತ್ಮನು.

© KTBS NOT TO BE REPUBLISHED

ಎಂದು ಹಸು ಹೇಳಿತು. ಹಸು ಹೇಳುವ ರೀತಿಯಿಂದ ಹುಲಿಗೂ ಕರುಣೆ ಬಂದಿತು. ಹಸುವಿಗೆ ಹೋಗಿ ಬರಲು ಅನುಮತಿ ಕೊಟ್ಟಿತು. ಪುಣ್ಯಕೋಟಿ ತನ್ನ ಕಂದನಿಗೆ ಹಾಲುಣಿಸಿತು. ಹುಲಿಗೆ ಆಹಾರವಾಗಿ ಹೋಗುವ ವಿಚಾರ ಕರುವಿಗೆ ತಿಳಿಸಿತು. ಆಗ ಕರು ತಾಯಿಯನ್ನು ತಬ್ಬಿಕೊಂಡು ಹೀಗೆ ಗೋಳಾಡಿತು.

ಅಮ್ಮ ನೀನು ಸಾಯಲೇಕೆ
ನನ್ನ ತಬ್ಬಲಿ ಮಾಡಲೇಕೆ
ಸುಮ್ಮನಿಲ್ಲಿಯೆ ನಿಲ್ಲೆನುತ್ತ
ಅಮ್ಮನಿಗೆ ಕರು ಹೇಳಲು

ಪುಣ್ಯಕೋಟಿ ತಾನು ಕೊಟ್ಟ ಭಾಷೆಗೆ ತಪ್ಪಲಾರೆನು, ಬೇರೆ ಯಾವ ಯೋಚನೆಯನ್ನು ಮಾಡಲಾರೆನು. ಕೊಟ್ಟ ಮಾತಿಗೆ ತಪ್ಪಿ ನಡೆದರೆ ಭಗವಂತನು ಮೆಚ್ಚುವುದಿಲ್ಲ ಎಂದು ಕರುವನ್ನು ತಬ್ಬಿ ಕಣ್ಣೀರಿಟ್ಟಿತು. ಇತರ ಹಸುಗಳಿಗೆ ಕರುವಿನ ರಕ್ಷಣೆಯನ್ನು ವಹಿಸಿ ಈ ರೀತಿ ಮೊರೆಯಿಟ್ಟಿತು.

ಮುಂದೆ ಬಂದರೆ ಹಾಯಬೇಡಿ
ಹಿಂದೆ ಬಂದರೆ ಒದೆಯಬೇಡಿ
ಕಂದ ನಿಮ್ಮವನೆಂದು ಕಾಣಿರಿ
ತಬ್ಬಲಿಯನೀ ಕರುವನು.

ಪುಣ್ಯಕೋಟಿ ಕಡೆಯ ಬಾರಿ ತನ್ನ ಕಂದನನ್ನು ತಬ್ಬಿಕೊಂಡಿತು. ನಂತರ ಬೇಗ ಬೇಗ ಹುಲಿಯ ಗವಿಯ ಬಾಗಿಲೊಳು ಬಂದು ನಿಂತು

ಖಂಡವಿದೆಕೋ ಮಾಂಸವಿದೆಕೋ
ಗುಂಡಿಗೆಯ ಬಿಸಿರಕ್ತವಿದೆಕೋ
ಚಂಡ ವ್ಯಾಘ್ರನೆ ನೀನಿದೆಲ್ಲವ
ಉಂಡು ಸಂತಸದಿಂದಿರು.

ಕೊಟ್ಟ ಮಾತಿಗೆ ತಪ್ಪದೆ, ಹಿಂತಿರುಗಿ ಬಂದ ಹಸುವನ್ನು ಕಂಡು, ಹುಲಿಗೆ ಆಶ್ಚರ್ಯವಾಯಿತು. ಅದು ಮರಳಿ ಬರುವುದೆಂಬ ನಿರೀಕ್ಷೆ ಹುಲಿಗೆ ಇರಲಿಲ್ಲ. ಹಸುವಿನ ನಿಷ್ಠೆ, ಪ್ರಾಮಾಣಿಕತೆಯನ್ನು ಕಂಡ ಹುಲಿ ಈ ರೀತಿ ನುಡಿಯಿತು.

ನನ್ನ ಒಡಹುಟ್ಟಕ್ಕ ನೀನು
ನಿನ್ನ ಕೊಂದು ನಾನೇನ ಪಡೆವೆನು
ಕನ್ನೆಯಿವಳನು ಕೊಂದು ತಿಂದರೆ
ಮೆಚ್ಚನಾ ಪರಮಾತ್ಮನು.

ಎಂದು ಹುಲಿ ಬೆಟ್ಟದಿಂದ ಹಾರಿ ನೆಗೆದು ತನ್ನ ಪ್ರಾಣ ಬಿಟ್ಟಿತು.

© KTBS NOT TO BE REPUBLISHED

೨ ಜೀವನೋತ್ಸಾಹ

ಜೀವನೋತ್ಸಾಹ ಎಂದರೆ ಎಲ್ಲಿಲ್ಲದ ಹುರುಪು. ಚೇತನ ಚಿಮ್ಮುವ, ಆಟವಾಡುವ ಸಮಯ. ಕೆಲವರು ಸಣ್ಣಪುಟ್ಟ ಕಾರಣಕ್ಕಾಗಿ, ಪರೀಕ್ಷೆ ಫೇಲಾಯಿತು ಎಂದು ಖಿನ್ನರಾಗುತ್ತಾರೆ. ನಿರಾಶರಾಗುತ್ತಾರೆ. ಇನ್ನೂ ಸಾವೇ ಗತಿ ಎನ್ನುತ್ತಾರೆ. ಅದು ತಪ್ಪು. ಹೊಸ ಹುರುಪಿನಿಂದ ಮುಂದುವರೆಯಬೇಕು. ಅದನ್ನು ಸಾಧಿಸುವ ಛಲ ಇರಬೇಕು.

ಈ ಸಂದರ್ಭ ನೋಡಿ : ಸ್ವಾತಂತ್ರ್ಯ ಹೋರಾಟದ ಕಾಲ. ಭಗತ್‌ಸಿಂಗ್ ಸ್ವಾತಂತ್ರ್ಯಕ್ಕೆ ಅಡ್ಡಿಯಾದ ಇಂಗ್ಲಿಷ್ ಅಧಿಕಾರಿಯನ್ನು ಕೊಂದನು. ಅವನಿಗೆ ಬ್ರಿಟಿಷ್ ಸರ್ಕಾರ ಗಲ್ಲು ಶಿಕ್ಷೆ ವಿಧಿಸಿತು. ಇಂದೋ ನಾಳೆಯೋ ಗಲ್ಲಿಗೇರಿಸುವ ಸಮಯ. ಆಗ ಜೈಲಿನಲ್ಲಿಯೂ ಭಗತ್‌ಸಿಂಗ್ ವ್ಯಾಯಾಮ ಮಾಡುತ್ತಿದ್ದನು. ಇಂದು ಅಥವಾ ನಾಳೆ ಗಲ್ಲಿಗೆ ಏರುವ ನೀನು ಏಕೆ ವ್ಯಾಯಾಮ ಮಾಡುವೆ? ಏನನ್ನು ಸಾಧಿಸುವೆ? ಎಂದು ಇಂಗ್ಲಿಷ್ ಅಧಿಕಾರಿ ಪ್ರಶ್ನಿಸಿದಾಗ ನಾನು ಮರಣ ದೇವತೆಯನ್ನು ನಗುಮೊಗದಿಂದ ಸ್ವಾಗತಿಸಬೇಕಾಗಿದೆ. ನೀವು ನನ್ನ ದೇಹವನ್ನು ಕೊಲ್ಲಬಹುದು. ನನ್ನ ನಂಬಿಕೆಯ ಸ್ವಾತಂತ್ರ್ಯವನ್ನು ಕೊಲ್ಲಲಾರಿರಿ. ರಾಜ್ಯಗಳು ಉರುಳಿ ಹೋಗಬಹುದು. ನಮ್ಮ ನಂಬಿಕೆಗಳು, ಬದ್ಧತೆಗಳು ಅಮರವಾಗಿರಬೇಕು.

ಮಕ್ಕಳೇ ಇದೇ ಜೀವನೋತ್ಸಾಹ. ಸಾವಿಗೂ ಹೆದರದ ನಂಬಿಕೆ, ಇಂತಹ ಬದ್ಧತೆಗಳು ನಮ್ಮದಾಗಬೇಕು.

@ KTBS
NOT TO BE REPUBLISHED

೩ ತಾಯಿಯ ನೆನಪು



ಅಮ್ಮನ ಬೆಚ್ಚಗಿನ ಮಡಿಲಲ್ಲಿ ಮಲಗಿದ್ದು
ಎದೆ ಹಾಲು ಕುಡಿದು ತೊಡೆಯೇರಿ ಕುಣಿದಿದ್ದು
ಅಮ್ಮನ ಕೈ ಹಿಡಿದು ಮೇಲೆದ್ದು ನಿಂತದ್ದು
ಮೊದಲ ಸಲ ಹೊಸ್ತಿಲುದಾಟಿ ಹೊರಹೋದದ್ದು.

ಅನ್ನಪ್ರಾಶನದಂದು ಅಪ್ಪ ಕಣ್ತುಂಬಿ ಹರಸಿದ್ದು
ಸುತ್ತಲ ಮನೆಯವರಿಗೆ ಅಮ್ಮ ಸಿಹಿ ಹಂಚಿದ್ದು
ಕೈ ಹಿಡಿದು ಅಕ್ಕಿಯಲಿ ಓಂಕಾರ ಬರೆಸಿದ್ದು
ಜನಕೆ ನನ್ನನು ತೋರಿ ಹಿಗ್ಗಿ ಮೈ ಮರೆತಿದ್ದು

ಬದುಕಿನಲಿ ಬಂಗಾರವೆಂದರೆ ಬಾಲ್ಯವೇ ನೋಡಮ್ಮ
ಹೇಗೆ ಮರೆಯಲಿ ಬಾಲ್ಯಕಿಂತ ಸಿಹಿ ನಿನ್ನ ನೆನಪಮ್ಮ

– ಡಾ. ಎಸ್. ಪಿ. ಪದ್ಮಿನಿ ನಾಗರಾಜು

೪ ಆಕಾಶ ಬುಟ್ಟಿ



ಆಕಾಶ ಬುಟ್ಟಿ ಮುಗಿಲ ಮುಟ್ಟಿ
ಹಬ್ಬದ ಹರುಷವ ಸಾರುತಿದೆ
ದೀಪವನೆತ್ತಿ ಬೆಳಕನು ಬಿತ್ತಿ
ಮುತ್ತಿದ ಕತ್ತಲೆ ಕಳೆಯುತಿದೆ.

ಚಿಣ್ಣರು ಕಟ್ಟಿದ ಬಿದಿರಿನ ಪುಟ್ಟಿ
'ಆರ್ಯಭಟ'ವನು ಹೋಲುತಿದೆ
ಮಿರಿಮಿರಿ ಮಿಂಚುವ ಪರಿಪರಿ
ಬಣ್ಣದ ಕಾಗದ ಬಟ್ಟೆಯ ತೊಟ್ಟಿದೆ

ತಾರೆಯ ಕೂಡ ಗೆಳೆತನ ಮಾಡಲು
ಗಗನದ ಗೂಡಿಗೆ ಹಾರುತಿದೆ
ಅಡಗಿದ ಚಂದ್ರನ ಹುಡುಕಲು
ಮೋಡದ ಒಳಗೇ ಬೆಳಕನು ಬೀರುತಿದೆ

– ಮಹಾಂತಪ್ರಿಯ (ಬಿ.ಶೇಖರಪ್ಪ)

@ KTBS
NOT TO BE REPUBLISHED

೬ನೇ ತರಗತಿ ದ್ವಿತೀಯ ಭಾಷೆ ಕನ್ನಡ ಪಠ್ಯ ಪುಸ್ತಕ ರಚನಾ ವಿವರ ತಃಖ್ತೆ
ದ್ವಿತೀಯ ಸೆಮಿಸ್ಟರ್

ಕ್ರ. ಸಂ.	ಪಾಠದ ಹೆಸರು	ಸಾಹಿತ್ಯ ಪ್ರಕಾರ	ಪ್ರಮುಖ ಸಾಮರ್ಥ್ಯಗಳು	ಭಾಷಾ ಚಟುವಟಿಕೆಗಳು	ಅಳವಡಿಸಿದ ಜೀವನ ಮೌಲ್ಯಗಳು	ಬೋಧನಾ ವಿಧಾನ	ಅವಧಿಗಳು
೧	ಕನ್ನಡಮ್ಮ	ಪದ್ಯ	ಪದ್ಯದಲ್ಲಿರುವ ಮಾಹಿತಿಯನ್ನು ಗ್ರಹಿಸಿಕೊಂಡು ಯಾರು? ಯಾವಾಗ? ಎಲ್ಲಿ? ಏಕೆ ಎಂಬ ಪ್ರಶ್ನೆಗಳಿಗೆ ಉತ್ತರಿಸುವುದು.	ಮಾಹಿತಿಯನ್ನು ಅರ್ಥೈಸಿಕೊಂಡು ಪ್ರಶ್ನೆಗೆ ಉತ್ತರಿಸುವ ಚಟುವಟಿಕೆ	ತಾಯಿ-ತಾಯ್ನಾಡಿನ ಗೌರವ	ಃಡಿಜೀಣ ಖಣಂಡಿಟುಣಿಂ ಒಜಞುಂಜ ಅಥವಾ ರಾಗಬದ್ಧವಾಗಿ ಹಾಡಿ ಪದ್ಯ ಬೋಧನಾ ಪದ್ಧತಿ	೭
೨	ಸಾಹಸಿ ಮೋನಾಲಿಸಾ	ವ್ಯಕ್ತಿ ಪರಿಚಯ	೧) ಪದ್ಯಗಳನ್ನು ಓದಿದ ಬಳಿಕ ಪ್ರಶ್ನೆಗಳಿಗೆ ಉತ್ತರಿಸುವುದು. ೨) ಉಕ್ತಲೇಖನ	ಉಕ್ತ ಲೇಖನ-ಲೇಖನ ಚಿಹ್ನೆ ಪ್ರಯೋಗ, ಓದುವಿಕೆ-ಅರ್ಥಗ್ರಹಣ	ಮಾನವೀಯತೆ	ಹರ್ಬಾಟನ ಪಂಚ ಸೋಪಾನಗಳ ಪದ್ಧತಿ ಅಥವಾ ಕಥಾ ಪದ್ಧತಿ	೯+೨
೩	ಮಲ್ಲಕಂಬ	ಸಂಭಾಷಣೆ	೧) ಅಪರಿಚಿತ ಸನ್ನಿವೇಶಗಳಲ್ಲಿನ ಸಂಭಾಷಣೆಯನ್ನು ಅರ್ಥಮಾಡಿಕೊಳ್ಳುವುದು ೨) ಸರಳ ಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತರುವ ಮೌಖಿಕ ಸೂಚನೆಗಳನ್ನು ಅರ್ಥಮಾಡಿ ಕೊಳ್ಳುವುದು.	ಸಂಭಾಷಣೆ ಚಟುವಟಿಕೆ ಮೌಖಿಕ ಸೂಚನೆಗಳನ್ನು ಪಾಲಿಸುವುದು.	ಅಭಿಮಾನ	ಪ್ರಾತ್ಯಕ್ಷಿಕ ಪಾಠ ಅಥವಾ ಚಟುವಟಿಕೆ ಪಾಠ	೯+೨
೪	ಸುಂಟರ ಗಾಳಿ	ಪದ್ಯ	ನಿರರ್ಗಳವಾಗಿ ಸ್ಪಷ್ಟ ಉಚ್ಚಾರಣೆಯೊಂದಿಗೆ ಮಾತನಾಡುವುದು.	ಕವಿತೆ ಭಾವಪೂರ್ಣವಾಗಿ ಸ್ಪಷ್ಟವಾಗಿ ಓದುವುದು. ಭಾವಸೂಚಿಕ ಪದಗಳನ್ನು ಉಚ್ಚರಿಸುವುದು.	ನಾಶದ ಬಗ್ಗೆ ಕಳವಳ ಚಿಂತೆ	ಪದ್ಯ ಬೋಧನಾ ಪದ್ಧತಿ ಪದ್ಯವನ್ನು ಭಾವನಾತ್ಮಕವಾಗಿ ಅರ್ಥೈಸುವಿಕೆ-ರೀತಿ	೭
೫	ದೇಶ ಪ್ರೇಮಿ ಕವಿ ಇಕ್ಬಾಲ	ವ್ಯಕ್ತಿ ಪರಿಚಯ	ಓದಿ ಗ್ರಹಿಸು-(ಹೊಸ ಪದಗಳು ಅಪರಿಚಿತ ಭಾಷೆ) (೩-೬-೪)	ನಿರರ್ಗಳ ಮಾತು, ಗ್ರಹಿಕಾ ಚಟುವಟಿಕೆ ಹೊಸ ಪದಗಳ ಪ್ರಯೋಗ	ದೇಶ ಭಕ್ತಿ	ಹರ್ಬಾರ್ಟನ ಪಂಚ ಸೋಪಾನ ಪದ್ಧತಿ ಅಥವಾ ಕಥಾ ಪದ್ಧತಿ ಅಥವಾ ಚಟುವಟಿಕೆ ಪದ್ಧತಿ	೯+೨
೬	ನಿನ್ನಲ್ಲೂ ಅದ್ಭುತ ಶಕ್ತಿ ಇದೆ	ಘಟನೆ	ಸೂಕ್ತ ಸ್ವರಭಾರ ಹಾವ ಭಾವದ ಮೂಲಕ ಸರಳ ಕಥೆಗಳನ್ನು ಹೇಳುವುದು.	ಭಾವಪೂರ್ಣ ಓದುವಿಕೆ-ನಿರರ್ಗಳ ಮಾತು	ತನ್ನಲ್ಲಿ ತಾನು ವಿಶ್ವಾಸ ಪಡೆಯುವಿಕೆ	ಃಡಿಜೀಣ ಖಣಂಡಿಟುಣಿಂ ಒಜಞುಂಜ ಅಥವಾ ನಾಟಕ ಪದ್ಧತಿ ಅಥವಾ ಸಂಭಾಷಣೆ ಪದ್ಧತಿ ಅಥವಾ ಕಥಾ ಪದ್ಧತಿ.	೯+೨
೭	ಚುಟುಕುಗಳು	ಪದ್ಯ	ಓದಿ ಗ್ರಹಿಸು. (೩-೬-೪) ವರ್ಷ (ಪದ್ಯ-ವಚನ-ಚೌಪದಿ-ಚುಟುಕು)	ಗ್ರಹಿಕೆ, ಅರ್ಥೈಸು ಒಗಟು ಒಡೆ, ವೈಚಾರಿಕ ವಿಚಾರ ಸರಣಿ, ಪಡೆಯುವದು ಚಟುವಟಿಕೆ	ವೈಚಾರಿಕತೆ ಮತ್ತು ವೈಜ್ಞಾನಿಕತೆ	ಪ್ರತ್ಯಕ್ಷ ಬೋಧನಾ ವಿಧಾನ	೭
೮	ಪತ್ರಗಳು ಮತ್ತು ಭಿತ್ತಿಪತ್ರ ಓದುವುದು	ಪತ್ರ ಮತ್ತು ಭಿತ್ತಿಪತ್ರ	ಸೂಚನೆಗಳನ್ನು ಅನುಸರಿಸಿ ಸ್ವಂತ ವಾಕ್ಯದಲ್ಲಿ ಬರೆಯುವುದು ಮತ್ತು ಸರಳ ಸೂಚನಾ ಫಲಕಗಳಲ್ಲಿನ ಸರಳ ಸೂಚನೆಗಳನು ಚಿತ್ರಸರಣಿ ಮತ್ತು ಭಿತ್ತಿಪತ್ರಗಳನ್ನು ಓದುವುದು.	ಕಾರ್ಡ್ ತಯಾರಿಕೆ, ಭಿತ್ತಿಪತ್ರ ಓದುವುದು ತಯಾರಿಕೆ	ಪ್ರವಾಸ ಮಹತ್ವ ಸೌಂದರ್ಯ ಉಪಾಮನೆ ಜಾಹಿರಾತಿನ ಮೌಲ್ಯ	ಪತ್ರ ಬರೆಯುವ ಪ್ರತ್ಯಕ್ಷ ಬೋಧನಾ ವಿಧಾನ ಭಿತ್ತಿ ಪತ್ರ ತಯಾರಿಕೆ ಚಟುವಟಿಕೆ ಮುಖಾಂತರ	೧೦
						ಒಟ್ಟು ಬೋಧನಾ ಅವಧಿಗಳು	೭೫

NOT TO BE REPUBLISHED © KTBS

ಪದಕೋಶ

ಅ

ಅಂಗವಿಕಲ– ಅಂಗಹೀನ
ಅಂಚು– ಕೊನೆ,ತುದಿ.
ಅಂತರ– ವ್ಯತ್ಯಾಸ
ಅಂತ:ಕರಣ– ದಯೆ,
ಅಚ್ಚರಿ– ಆಶ್ಚರ್ಯ, ಬೆರಗು.
ಅಡಗು– ಅವಿತುಕೊಳ್ಳು.
ಅಡವಿ– ಕಾಡು, ಅರಣ್ಯ
ಅಡಿ– ಹೆಜ್ಜೆ, ಕಾಲು, ಹನ್ನೆರಡು ಅಂಗುಲದ ಅಳತೆ, ಕೆಳಭಾಗ.
ಅಧ್ಯಾಪಕ– ಉಪಾಧ್ಯಾಯ, ಶಿಕ್ಷಕ
ಅನುಮತಿ– ಸಮ್ಮತಿ
ಅನುಕಂಪ– ಕನಿಕರ, ಸಹಾನುಭೂತಿ,
ಅಪ್ರತಿಮ– ಎಣೆಯಿಲ್ಲದ
ಅಪಾರ– ಬಹಳ
ಅಭಿವೃದ್ಧಿ– ಏಳಿಗೆ, ಶ್ರೆಯಸ್ಸು.
ಅಭಿಮಾನ– ಹೆಮ್ಮೆ
ಅಭಿನಂದನೆ– ಪ್ರಶಂಸೆ.ಸಂತೋಷ ಪ್ರಕಟಣೆ
ಅಭಿರುಚಿ– ಆಸಕ್ತಿ, ಒಲವು
ಅಮೋಘ– ತುಂಬ ಬೆಲೆಯುಳ್ಳ.
ಅರಣ್ಯ– ಕಾಡು, ಅಡವಿ.
ಅರುಣ– ಸೂರ್ಯನ ಸಾರಥಿಯ ಹೆಸರು, ಕೆಂಪು ಬೆಳಗಿನ, ಸೂರ್ಯ
ಅವಧಿ– ಗಡುವು, ಮೇರೆ

ಆ

ಆಕಸ್ಮಿಕ– ಅನಿರೀಕ್ಷಿತ.
ಆಕ್ರಂದನ– ಗಟ್ಟಿಯಾಗಿ ಅಳುವುದು
ಆಕಾಶ– ಗಗನ, ಆಗಸ.
ಆಗಸ– ಆಕಾಶ, ಗಗನ
ಆನಂದಬಾಷ್ಪ– ಸಂತೋಷದ ಕಣ್ಣೀರು.
ಆಪತ್ತು– ಅಪಾಯ, ತೊಂದರೆ.
ಆಶೀರ್ವಾದ– ಹರಕೆ
ಆಸಕ್ತಿ– ಶ್ರದ್ಧೆ, ತತ್ಪರತೆ,
ಆಸ್ಥಾನ– ರಾಜಸಭೆ, ದರ್ಬಾರು

ಇ

ಇಂದ್ರ– ದೇವತೆಗಳ ರಾಜ
ಇರಿ– ಹೊಡೆ, ತಿವಿ.

ಉ

ಉಂಡು– ಊಟ ಮಾಡಿ.
ಉಣಿಸು– ಊಟ ಮಾಡಿಸು, ಊಟ
ಉತ್ಸಾಹ– ಹುರುಪು, ಆಸಕ್ತಿ
ಉತ್ತೇಜನ– ಹುರಿದುಂಬಿಸುವುದು
ಉನ್ನತ– ಎತ್ತರವಾದ, ಉತ್ತಮ, ಮೇಲಾದ
ಉನ್ನತಿ– ಹಿರಿಮೆ, ಏಳಿಗೆ
ಉಲ್ಲಂಘನೆ– ಜಿಗಿ, ಹಾರುವುದು, ಅತಿಕ್ರಮಣ
ಉಲ್ಲಂಘಿಸು– ಅತಿಕ್ರಮಿಸು, ಮೀರು
ಉಲಿ– ಕೂಗು, ಧ್ವನಿ ಮಾಡು, ಹೇಳು.

ಊ

ಊಡು– ಊಟ ಮಾಡಿಸು, ಕುಡಿ, ಕುಡಿಸು.

ಎ

ಎತ್ತಿ– ಮೇಲಕೆ ಏರಿಸಿ ಹಿಡಿದು
ಎದಕ– ಯಾಕೆ ?
ಎದೆ– ಹೃದಯ, ಧೈರ್ಯ
ಎಲುಬು– ಮೂಳೆ
ಎಳೆಯ– ಎಳದು, ಚಿಕ್ಕ ಸಣ್ಣ ವಯಸ್ಸಿನ

@ KTBS NOT TO BE REPUBLISHED

ಏ

ಏಕಶಿಲೆ– ಒಂದೇ ಕಲ್ಲು.

ಒ

ಒಡಮೂಡು– ಕಾಣು
ಒಡಕು– ಬಿರುಕು, ಸೀಳು
ಒತ್ತಿಹೇಳು– ಗಟ್ಟಿಯಾಗಿ ಹೇಳು

ಔ

ಔಡಲೆಣ್ಣೆ– ಹರಳೆಣ್ಣೆ

ಕ

ಕಂಗು– ಅಡಿಕೆ, ಅಡಿಕೆ ಮರ
ಕಿಂಕರ– ಆಳು, ಸೇವಕ
ಕೊಂಬು– ಪ್ರಾಣಿಗಳ ಕೋಡು
ಕಛೇರಿ– ಕಾರ್ಯಾಲಯ, ಸಭೆ
ಕಡಲು– ಸಮುದ್ರ
ಕಡೆ– ಕಡಗೋಲಿನಿಂದ ಮಥಿಸು, ಕೊನೆ
ಕಣ್ಗಾವಲು– ಕಣ್ಣಿನ ಕಾವಲು
ಕರ್ತವ್ಯ– ಮಾಡಬೇಕಾದ ಕೆಲಸ
ಕಥಿ– ಕಥೆ, ಕತೆ
ಕನ್ಯೆ– ಕುಮಾರಿ
ಕರೆನೀಡು– ಆಹ್ವಾನಿಸು
ಕವಿತೆ– ಪದ್ಯ, ಕವನ
ಕಲೆ– ಗುರುತು, ಲಲಿತವಿದ್ಯೆ, ಕಾಂತಿ, ಸೇರು.
ಕಸರತ್ತು– ಶಕ್ತಿ ಚಮತ್ಕಾರಗಳ ಪ್ರದರ್ಶನ
ಕಾಯು– ರಕ್ಷಿಸು, ಉಷ್ಣತೆ ಹೆಚ್ಚಾಗು
ಕೀಳರಿಮೆ– ಕೀಳುತನ, ಹೀನತನ
ಕುಣಿಸು– ಕುಣಿಯುವಂತೆ ಮಾಡು
ಕುಶಲೋಪರಿ– ಕ್ಷೇಮ ಸಮಾಚಾರ
ಕೆತ್ತು– ಕುಂದಣಿಸು,ಕೊರೆ
ಕೆರಳಿದ– ಕೆದರಿದ,ಕುಪಿತಗೊಂಡ,ಸಿಟ್ಟಾದ
ಕೈಯಾಡಿಸು– ಹಸ್ತಕ್ಷೇಪ.
ಕೌಟುಂಬಿಕ– ಕುಟುಂಬಕ್ಕೆ ಸಂಬಂಧಿಸಿದ
ಕೃತಜ್ಞತೆ– ಮಾಡಿದ ಉಪಕಾರ ನೆನೆಯುವುದು

ಖ

ಖಂಡ– ತುಂಡು, ಚೂರು, ಭೂಭಾಗ
ಖ್ಯಾತಿ– ಹೆಸರುವಾಸಿ, ಪ್ರಸಿದ್ಧ
ಖುಷಿ– ಸಂತೋಷ, ವಿನೋದ
ಖೂಳ– ರಾಕ್ಷಸ

ಗ

ಗರಡಿಮನೆ– ವ್ಯಾಯಮ ಶಾಲೆ
ಗರಸು– ಕಂಕರ, ಗಡಸು, ಗಟ್ಟಿ ಮಣ್ಣು
ಗವಿ– ಗುಹೆ
ಗಹಗಹಿಸು– ಗಟ್ಟಿಯಾಗು ನಗು.
ಗಾನ– ಹಾಡು, ಸಂಗೀತ
ಗಾಬರಿ– ಭಯ, ಗೊಂದಲ
ಗ್ರಾಮೀಣ– ಹಳ್ಳಿಯ
ಗಾಳಿ– ವಾಯು
ಗುಂಡಿಗೆ– ಎದೆ,ಹೃದಯ, ಧೈರ್ಯ
ಗುಡಿ– ಮಂದಿರ
ಗುದ್ದಾಟ– ಜಗಳ
ಗೆಲವು– ವಿಜಯ, ಗೆದ್ದ
ಗೇಲಿ– ಅಪಹಾಸ್ಯ, ಲೇವಡಿ
ಗೊಲ್ಲ– ದನಕಾಯುವವನು
ಗೋವು– ಆಕಳು
ಗೋಳಾಡು– ದು:ಖಿಸು
ಗೃಹ– ಮನೆ

ಚ

ಚಂಡ– ಉಗ್ರ, ಕ್ರೂರ,ವೀರ
ಚಟ್ಟನೆ ಚೀರು– ಒಮ್ಮಿಂದೊಮ್ಮೆಲೆ ಚೀರು
ಚಿನ್ನಾಟ– ಚೆಲ್ಲಾಟ
ಚಿರಂತನ– ಶಾಶ್ವತ

© KTBS NOT TO BE REPUBLISHED

ಛ

ಛಂದ– ಸುಂದರ

ಜ

ಜಂತು– ಸಣ್ಣ ಕ್ರಿಮಿ, ಕರುಳಿನಲ್ಲಿ ಹುಟ್ಟುವ ಒಂದು ಜಾತಿಯ ಹುಳು.

ಜಗತ್ತು– ಲೋಕ,ವಿಶ್ವ

ಜಟ್ಟಿ– ಪೈಲ್ವಾನ್, ಮಲ್ಲ ಕುಸ್ತಿಯಾಡುವವನು

ಜಾಣ್ಮೆ– ಜಾಣತನ, ಕೌಶಲ

ಜಿಗಿ– ಹಾರು, ನೆಗೆ,

ಜಿಲ್ಲಾಧಿಕಾರಿ– ಜಿಲ್ಲೆಯ ಆಡಳಿತಾಧಿಕಾರಿ

ಟ

ಟೊಂಗೆ– ಕೊಂಬೆ,

ತ

ತಂತ್ರ– ಉಪಾಯ.

ತಟ್ಟು– ಬಡಿ, ಮುಟ್ಟು, ಗೋಣಿಚೀಲ

ತಡೆ– ವಿಳಂಬ, ಅಡ್ಡಿ

ತಣಿ– ತೃಪ್ತಿ ಹೊಂದು, ಆಯಾಸಗೊಳ್ಳು

ತತ್ವಜ್ಞಾನಿ– ಪರಮಸತ್ಯವನ್ನು ತಿಳಿದವನು

ತಾಪ– ಉಷ್ಣತೆ, ಸಂಕಟ

ತಿವಿ– ಚುಚ್ಚು

ತ್ರಿವಿಕ್ರಮ– ಶೂರ,ಎಲ್ಲವನ್ನು ಗೆದ್ದವ

ತುಂಟ– ಚೇಷ್ಟೆಗಾರ

ತುತ್ತು– ಒಂದು ಸಲಕ್ಕೆ ನುಂಗುವ ಆಹಾರ

ತುಳಿತ– ನೋಯಿಸಿದ

ತೆರಳು– ಹೋಗು.

ತೆರೆ– ತೆಗೆ, ಬಿಚ್ಚು

ದ

ದಂಡೆ– ದಡ, ಹೂವಿನ ಮಾಲೆ

ದನ– ಜಾನುವಾರು

ದಯೆ– ಕರುಣೆ, ಕೃಪೆ

ದಷ್ಟಪುಷ್ಟ– ಕಟ್ಟು ಮಸ್ತಾದ

ದಕ್ಷಿಣ– ತೆಂಕಣ

ದಿಟ್ಟಿಸು– ನೋಡು

ದಿಢೀರನೆ– ಒಮ್ಮಿಂದೊಮ್ಮೆಲೆ

ದಿವ್ಯ– ಶ್ರೇಷ್ಠವಾದ

ದೇಶಭಕ್ತಿ– ದೇಶಪ್ರೇಮ

ದ್ವೇಷ– ವೈರ

ದೈನ್ಯ– ಹೀನ ಸ್ಥಿತಿ, ನಮ್ರಭಾವ

ದೊಡ್ಡಿ– ದನಗಳನ್ನು ಕಟ್ಟುವ ಸ್ಥಳ

ಧ

ಧನ್ಯ– ಪುಣ್ಯವಂತ, ಕೃತಾರ್ಥ

ಧ್ವನಿ– ಸಪ್ಪಳ. ಕಂಠ

ಧೂಳಿ– ಧೂಳು

ನ

ನಡತೆ– ರೀತಿ, ವರ್ತನೆ

ನರ್ತನ–ಕುಣಿತ, ನೃತ್ಯ

ನಮನ– ಬಾಗುವಿಕೆ, ವಂದನೆ

ನಲಿ– ಆನಂದಿಸು

ನಾಡದೇವಿ– ನಾಡಿನ ದೇವತೆ

ನಾದ– ಸಪ್ಪಳ, ಮಧುರ ಧ್ವನಿ

ನಿಧನ– ಸಾವು, ಕೊನೆ, ಮರಣ

ನಿಪುಣೆ– ಜಾಣೆ

ನಿರತ– ಆಸಕ್ತ, ತೊಡಗಿದ

ನಿರೀಕ್ಷೆ– ಕಾಯುವುದು

ನಿಲುಕು– ಕೈಗೆ ಸಿಗು, ಪಡೆ

ನೀರೆ– ಸುಂದರಿ

@ KTBS NOT TO BE REPUBLISHED

ಪ

ಪಟ್ಟು– ಹಠ,ವರಸೆ

ಪರ್ವತ– ಬೆಟ್ಟ

ಪಶು– ಸಾಕಿದ ಪ್ರಾಣಿ

ಪಸಕ್ಕನೆ– ಒಮ್ಮಿಂದೊಮ್ಮೆಲೆ, ಪುಸಕ್ಕನೆ

ಪ್ರಕಟ– ಪ್ರಕಾಶಕ್ಕೆ ತರು, ಹೊರಹಾಕು.

ಪ್ರಖರತೆ– ತೀಕ್ಷ್ಣ

ಪ್ರಜ್ಞ ಎಚ್ಚರ, ತಿಳುವಳಿಕೆ

ಪ್ರಚೋದಕ– ಹುರಿದುಂಬಿಸುವ

ಪ್ರತಿಪಾದಿಸು– ಮಂಡಿಸು, ಮುಂದಿಡು

ಪ್ರವಾಸ– ಸಂಚಾರ, ಪ್ರಯಾಣ

ಪ್ರಸಂಗ– ಸಮಯ, ಸಂದರ್ಭ

ಪ್ರಸಿದ್ಧಿ– ಖ್ಯಾತಿ

ಪಾಪಿ– ಕೆಟ್ಟ ಕೆಲಸ ಮಾಡಿದವನು, ದುಷ್ಟ

ಪ್ರಾಣತೆತ್ತು– ಜೀವಕೊಟ್ಟು

ಪ್ರಾರ್ಥಿಸು– ಬೇಡು, ದೇವರನ್ನು ಸ್ತುತಿಸು.

ಪ್ರಾರಂಭ– ಆರಂಭ, ಮೊದಲ ಮಾಡುವಿಕೆ.

ಪ್ರೀತಿ– ಅನುರಾಗ

ಪುರಸ್ಕಾರ– ಸನ್ಮಾನ, ಗೌರವ

ಪೂಜ್ಯ– ಗೌರವಕ್ಕೆ ಪಾತ್ರನಾದವನು

ಪೂರಕ– ತುಂಬಿ ಕೊಡುವ

ಪೊರೆ– ರಕ್ಷಣೆ, ಕೊಡು, ಸಲಹು, ಚರ್ಮ

ಬ

ಬಂಧು – ನೆಂಟ, ಸಂಬಂಧಿಕ

ಬಯಲು– ಮೈದಾನ

ಬರಹ– ಬರವಣಿಗೆ

ಬಳ್ಳಿ– ಲತೆ, ಹಬ್ಬಿದ ಸಸ್ಯ

ಬಾಗು– ಬಗ್ಗು,ನಮಸ್ಕರಿಸು.

ಬಾಡು– ಕುಗ್ಗು, ಕಳೆಗುಂದು, ಬತ್ತು

ಬಾನು– ಆಕಾಶ, ಮುಗಿಲು

ಬಾಲ್ಯ– ಎಳೆತನ

ಬಾಳ– ಬಹಳ

ಬಿಂಬ – ಪ್ರತಿರೂಪ

ಬಿತ್ತು– ಬೀಜಹಾಕು, ಬೀಜ

ಬೀಸು– ಗಾಳಿ ಹಾಕು, ಹಿಟ್ಟು ಮಾಡು

ಬೆಂಬತ್ತು – ಬೆನ್ನು ಹತ್ತು

ಬೆಟ್ಟ– ಪರ್ವತ,ಗಿರಿ

ಬೆರಗು– ವಿಸ್ಮಯ, ಆಶ್ಚರ್ಯ

ಬೇಡಿಕೆ– ಕೋರಿಕೆ

ಬೇಡು– ಬಯಸು, ಯಾಚಿಸು

ಬೊಟ್ಟು– ಬೆರಳು, ತಿಲಕ

ಬೊಬ್ಬೆ– ಬೊಕ್ಕೆ

ಬೃಹತ್– ದೊಡ್ಡದು.

ಭ

ಭಗವಂತ– ದೇವರು

ಭಜಿಸು– ಪೂಜಿಸು

ಭಯಭೀತಿ– ಹೆದರಿಕೆ, ಅಂಜಿಕೆ.

ಭವ್ಯ– ಉತ್ಕೃಷ್ಟವಾದುದು, ಉನ್ನತವಾದ

ಭವಿಷ್ಯ– ಮುಂದೆ ಬರುವ ಕಾಲ, ಕಣಿ

ಭಾವಚಿತ್ರ– ಛಾಯಾಚಿತ್ರ

ಭಾವನೆ– ಊಹೆ ಅಭಿಪ್ರಾಯ

ಭಾರಿ– ಘನವಾದ, ದೊಡ್ಡ

ಭಾಷೆ– ಮಾತು,ಲಿಪಿ

ಭಿನ್ನ– ಚೂರು, ಭೇದ, ಒಡೆ

ಭೂ ಮಂಡಲ– ಭೂ ಭಾಗ, ಪೃಥ್ವಿ

ಭೇಷ್– ಮೆಚ್ಚಿಗೆಯ, ಉದ್ಗಾರ

ಭ್ರಾತೃತ್ವ– ಸಹೋದರತ್ವ

©KTBS NOT TO BE REPUBLISHED

ಮ

ಮಟ್ಟ– ಅಳತೆ, ಹಂತ

ಮಡಿ– ಸಾಯು, ಶುಚಿ, ಪಾತಿ

ಮದ್ದು– ಔಷಧಿ, ಬಂದೂಕಿಗೆ ತುಂಬುವ ಸ್ಫೋಟಕ ವಸ್ತು.

ಮನಬಿಚ್ಚಿ– ಮನಸ್ಸು ತೆರೆದುಕೊಂಡು

ಮನೋಗತ– ಅಭಿಪ್ರಾಯ, ಉದ್ದೇಶ

ಮಾನ– ಅಳತೆ, ಗೌರವ

ಮಾಹಿತಿ– ತಿಳುವಳಿಕೆ, ವಿವರಣೆ

ಮಿಗಿಲು– ಹೆಚ್ಚು ಶ್ರೇಷ್ಠ

ಮೀಸಲು– ಮುಡಿಪು, ಪ್ರತ್ಯೇಕ

ಮುಖ್ಯ– ಮಹತ್ವವುಳ್ಳ

ಮುಗಳ್ನಗೆ– ಮೆಲುನಗೆ

ಮುಗಿಲು– ಮೋಡ

ಮುಟ್ಟು– ಸ್ಪರ್ಶಿಸು, ತಲುಪು, ಉಪಕರಣ

ಮುಡಿಸು– ಹೂವನ್ನು ತಲೆಗೆ ಸಿಕ್ಕಿಸು

ಮುದ್ದು– ಪ್ರೀತಿ, ಚೆಲುವು

ಮುನ್ನ– ಮೊದಲು

ಮೈತ್ರಿ– ಸ್ನೇಹ

ಮೊರೆ– ಅಬ್ಬರ, ಗೋಳಾಟ, ಆಶ್ರಯ

ಯ

ಯೋಜನ– ದೂರದ ಅಳತೆಯ ಒಂದು ಪ್ರಮಾಣ, ಒಂಬತ್ತು ಮೈಲಿ

ರ

ರಭಸ– ವೇಗ

ರುದ್ರನರ್ತನ– ಭಯಾನಕ ಕುಣಿತ

ಲ

ಲಾಲಿ– ಜೋಗುಳ

ಲೆಕ್ಕಿಸು– ಗಣನೆಗೆ ತರು

ಲಂಘಿಸು– ಪಾರು, ಮೀರು, ದಾಟು, ಹಾರು

ವ

ವನ– ಕಾಡು.

ವ್ಯಾವಹಾರಿಕ– ವ್ಯಾಪಾರಕ್ಕನುಸರಿಸಿ, ಲೌಕಿಕ

ವ್ಯಾಘ್ರ– ಹುಲಿ

ವಿತರಣೆ– ಹಂಚುವಿಕೆ, ಬಳಕೆ

ವಿನಂತಿ– ಬಿನ್ನಹ,ಕೋರಿಕೆ

ವಂಶ– ಪೀಳಿಗೆ

ಶ

ಶಾಪ– ಕೇಡುಬಯಸಿ ಹೇಳುವ ಮಾತು ನಿಂದೆ

ಶಿಲಾಲತೆ– ಕಲ್ಲಿನ ಕೊರೆದ ಬಳ್ಳಿ

ಸ

ಸಪ್ತಸಾಗರ– ಏಳು ಸಮುದ್ರಗಳು

@KTBS NOT TO BE REPUBLISHED